ಪ್ರತಿಭಾವಂತ ಸಂಸದೀಯ ಪಟುಗಳ ಬದುಕು-ಬರಹ ಮಾಲಿಕೆ

ಶೇಖ್ ಮಹಮ್ಮದ್ ಅಬ್ದುಲ್ಲಾ

ಲೋಕಸಭಾ ಕಾರ್ಯದರ್ಶಿ,
ಹೊಸ ದೆಹಲಿ,
1990

ಪ ರಿ ವಿ ಡಿ

ಭಾಗ - I

ಅಬ್ದುಲ್ಲಾರ ಜೀವನ

ಶೇಕ್ ಮಹಮ್ಮದ್ ಅಬ್ದುಲ್ಲಾ - ಒಂದು ವ್ಯಕ್ತಿ ಚಿತ್ರ

ಭಾಗ - 2

ಶೇಕ್ ಅಬ್ದುಲ್ಲಾ ಅವರ ಸಮಕಾಲೀನರು ಕಂಡಂತೆ

1. ಶೇಕ್ ಅಬ್ದುಲ್ಲಾ : ಕಾಶ್ಮೀರದ ಕೇಸರಿ - ಡಾ. ಸುಶೀಲ ನಯ್ಯರ್
2. ಶೇಕ್ ಮಹಮ್ಮದ್ ಅಬ್ದುಲ್ಲಾ : ಭಾರತದ ರಾಜಕಾರಣದಿಂದ ಅರಿತದ್ದೇನು?

   - ಪ್ರೋ. ರಶೀದುದ್ದೀನ್ ಖಾನ್
3. ಶೇಕ್ ಮಹಮ್ಮದ್ ಅಬ್ದುಲ್ಲಾ: ಐತಿಹಾಸಿಕ ನಾಯಕ - ಬೇಗಂ ಶೇಕ್ ಅಬ್ದುಲ್ಲಾ
4. ಸ್ವಾತಂತ್ರ್ಯ ಹೋರಾಟಗಾರರಾಗಿ ಶೇಕ್ ಮಹಮ್ಮದ್ ಅಬ್ದುಲ್ಲಾ - ರೇಣುಕಾ ರಾಯ್
5. ಶೇಕ್ ಅಬ್ದುಲ್ಲಾರವರಿಗೆ ಗೌರವದ ಶ್ರದ್ಧಾಂಜಲಿ - ಚೌಧರಿ ರಣಧೀರ್ ಸಿಂಗ್
6. ಮಹಾಪುರುಷನಿಗೆ ಕಾಣಿಕೆ - ಅಜೀಜ್ ಸೇಠ್
7. ಜಾತ್ಯತೀತ ಪ್ರಜಾಪ್ರಭುತ್ವದ ಪ್ರತಿನಿಧಿಯಾಗಿ ಶೇಕ್ ಅಬ್ದುಲ್ಲಾ - ನಾರಾಯಣ ಚೌಬೆ

ಭಾಗ - 2

ಶೇಕ್ ಅಬ್ದುಲ್ಲಾ

ಸಮಕಾಲೀನರು ಕಂಡಂತೆ

ಮುನ್ನುಡಿ

ಸ್ವಾತಂತ್ರ್ಯ ಹೋರಾಟಗಾರರಾಗಿ, ಖ್ಯಾತ ರಾಜಕೀಯ ನಾಯಕರಾಗಿ, ಜಮ್ಮು ಮತ್ತು ಕಾಶ್ಮೀರದ ಪ್ರಧಾನಮಂತ್ರಿಗಳಾಗಿ, ಅನಂತರ ಅದೇ ರಾಜ್ಯದ ಮುಖ್ಯ ಮಂತ್ರಿಯಾಗಿ "ಕಾಶ್ಮೀರದ ಸಿಂಹ" ಎಂದೇ ಹೆಸರು ಗಳಿಸಿದ್ದ ಶೇಕ್ ಮಹಮ್ಮದ್ ಅಬ್ದುಲ್ಲಾರವರ ವ್ಯಕ್ತಿತ್ವವು ಭಾರತದ ಇತಿಹಾಸದಲ್ಲಿ ಮರೆಯಲಾಗದ ಅಚ್ಚೊತ್ತಿದೆ.

ಭಾರತದ ಸ್ವಾತಂತ್ರ್ಯ ಮತ್ತು ಗಣರಾಜ್ಯ ನಿರ್ಮಾಣದಲ್ಲಿ ನಮ್ಮನ್ನು ಮುನ್ನೆಡೆಸಿದ ಪ್ರಖ್ಯಾತ ಮಹಿಳಾ ಹಾಗೂ ಪುರುಷ ಧುರೀಣರನ್ನು ಸ್ಮರಿಸಿ ಗೌರವಿಸುವುದಕ್ಕಾಗಿ ಲೋಕಸಭೆಯ ಕಾರ್ಯಾಲಯವು ಸಂಸದೀಯ ಪಟುಗಳ ಬದುಕು-ಬರಹ ಮಾಲಿಕೆಯನ್ನು ಹೊರತರುತ್ತಿದೆ. ಈ ನಿಟ್ಟಿನಲ್ಲಿ ಖ್ಯಾತ ಸಂಸದೀಯ ಪಟು ಶೇಕ್ ಅಬ್ದುಲ್ಲಾರವರ ಜನ್ಮದಿನೋತ್ಸವವನ್ನು 5ನೇ ಡಿಸೆಂಬರ್ 1990 ರಂದು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಅವರಿಗೆ ಗೌರವದ ಶ್ರದ್ಧಾಂಜಲಿಯ ರೂಪದಲ್ಲಿ ಈ ಹೊತ್ತಿಗೆಯನ್ನು ಹೊರತರಲಾಗುತ್ತಿದೆ.

ಶೇಕ್ ಅಬ್ದುಲ್ಲಾರವರು ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ ಮಾಡಿದ ಸಣ್ಣ ಹಾಗೂ ಮಹಾನ್ ಸಾಧನೆಗಳ ಸಂಕೇತವಾಗಿ ಈ ಮಾಲಿಕೆಯಲ್ಲಿ ಅವರಿಗೆ ನಮ್ಮ ಕೃತಜ್ಞತೆಗಳನ್ನು ಅರ್ಪಿಸಲಾಗಿದೆ. ವಿದ್ವಾಂಸರಿಗೂ, ನಾಯಕರುಗಳಿಗೂ ಅಲ್ಲದೆ ಜನ ಸಾಮಾನ್ಯರಿಗೂ ಶೇಕರ ಬಗ್ಗೆ ಆಸಕ್ತಿಯನ್ನುಂಟು ಮಾಡುತ್ತದೆ ಎಂಬ ನಂಬಿಕೆ ನನಗಿದೆ. ತಮ್ಮ ಸ್ವಂತ ರಾಜ್ಯವಾದ ಜಮ್ಮು ಮತ್ತು ಕಾಶ್ಮೀರದ ರಾಜಕೀಯ ಜೀವನದಲ್ಲಿ 50 ವರ್ಷಗಳಿಗೂ ಮೀರಿ ಪ್ರಭಾವ ಬೀರಿದ್ದ ಅಷ್ಟೆ ಅಲ್ಲದೆ ಈ ರಾಷ್ಟ್ರದ ಭವಿಷ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಶ್ರೀಯುತ ಅಬ್ದುಲ್ಲಾ ಅವರ ಅಪೂರ್ವ ಜಾಣ್ಮೆ ಈ ಮಾಲಿಕೆಯಲ್ಲಿ ನಿರೂಪಿತವಾಗಿದೆ.

ರಬಿ ರೇ
ಸಭಾಧ್ಯಕ್ಷ, ಲೋಕಸಭೆ

ಹೊಸ ದೆಹಲಿ
ಡಿಸೆಂಬರ್, 1990.

ಪೀಠಿಕೆ

ನಮ್ಮ ದೇಶದ ಸ್ವಾತಂತ್ರ್ಯದ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವ ಈ ಸುಸಂದರ್ಭದಲ್ಲಿ ದೇಶಕ್ಕಾಗಿ ದುಡಿದು ಮಡಿದ ಹಾಗೂ ನವ ಭಾರತ ನಿರ್ಮಾಣಕ್ಕಾಗಿ ಶ್ರಮಿಸಿದ ಪ್ರತಿಭಾನ್ವಿತ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಸಂಸದೀಯ ಪಟುಗಳನ್ನು ನೆನೆಸಬೇಕಾದುದು ನಮ್ಮೆಲ್ಲ ಆದ್ಯ ಕರ್ತವ್ಯವಾಗಿರುತ್ತದೆ. ಈಗಾಗಲೇ ಲೋಕಸಭಾ ಕಾರ್ಯಾಲಯದವರು ಇಂತಹ ಗಣ್ಯರ ಬಗ್ಗೆ ಅನೇಕ ಕಿರುಹೊತ್ತಿಗೆಗಳನ್ನು ಹಿಂದಿ ಮತ್ತು ಆಂಗ್ಲ ಭಾಷೆಗಳಲ್ಲಿ ಹೊರ ತಂದಿರುತ್ತಾರೆ. ಆದರೆ ನಮ್ಮ ಕರ್ನಾಟಕ ರಾಜ್ಯದ ಜನಪ್ರತಿನಿಧಿಗಳಿಗೆ ಹಾಗೂ ಜನತೆಗೆ ಈ ಪ್ರತಿಭಾವಂತರುಗಳ ಬದುಕು-ಬರಹ ಮತ್ತು ಸಾಧನೆಗಳನ್ನು ಪರಿಚಯಿಸುವ ದೃಷ್ಟಿಯಿಂದ ಈ ಕಿರುಹೊತ್ತಿಗೆಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸುವ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾಪತಿಯವರಾದ ಶ್ರೀ ಡಿ.ಬಿ. ಕಲ್ಮಣಕರ ಹಾಗೂ ವಿಧಾನ ಸಭೆಯ ಸನ್ಮಾನ್ಯ ಅಧ್ಯಕ್ಷರಾದ ಶ್ರೀ ರಮೇಶಕುಮಾರ ಅವರುಗಳು ಅಪೇಕ್ಷಿಸಿದಂತೆ ಈ ಕಾರ್ಯವನ್ನು ವಿಧಾನ ಸಭೆಯ ಸದಸ್ಯರಾದ ಶ್ರೀ ಬಿ.ಬಿ. ಶಿವಪ್ಪ ನವರ ಅಧ್ಯಕ್ಷತೆಯಲ್ಲಿ ರಚಿತವಾದ ವಿಧಾನಮಂಡಲದ ಗ್ರಂಥಾಲಯ ಉಪ ಸಮಿತಿಗೆ ವಹಿಸಲಾಗಿತ್ತು. ಈ ಉಪ ಸಮಿತಿಯು ಕಾರ್ಯ ಪ್ರವೃತ್ತವಾಗಿ ಭಾಷಾಂತರ ಕಾರ್ಯವನ್ನು ಕರ್ನಾಟಕ ರಾಜ್ಯದ ಭಾಷಾಂತರಕಾರರುಗಳ ಮೂಲಕ ತಯಾರಿಸಿರುವ ಶ್ರೀ ಶೇಕ್ ಮಹಮ್ಮದ್ ಅಬ್ದುಲ್ಲಾ ಅವರ ಕೃತಿಯನ್ನು ಮುಂದಿಡುತ್ತಿದ್ದೇನೆ.

ಇದು ಲೋಕಸಭಾ ಸಚಿವಾಲಯದವರು "Eminent Parlimentarians-Monograph Series" ಎಂಬ ಆಂಗ್ಲ ಭಾಷೆಯ ಕನ್ನಡಾನುವಾದವಾಗಿದ್ದು, ಸದರಿ ಗ್ರಂಥದ ಪ್ರಕಾಶಕರಾದ ಲೋಕಸಭಾ ಸಚಿವಾಲಯಕ್ಕೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಅನುವಾದವನ್ನು ನಿರ್ವಹಿಸಿಕೊಟ್ಟ ಭಾಷಾಂತರ ನಿರ್ದೇಶನಾಲಯದವರಿಗೂ, ನುರಿತ ಭಾಷಾಂತರಕಾರರಿಗೂ, ಅಂದವಾಗಿ ಮುದ್ರಿಸಿಕೊಟ್ಟ ಸರ್ಕಾರಿ ಮುದ್ರಣಾಲಯದ ನಿರ್ದೇಶಕರಿಗೂ ಹಾಗೂ ಉಪ ಸಮಿತಿಯ ಸದಸ್ಯರುಗಳಿಗೆ ಧನ್ಯವಾದಗಳು ಅರ್ಪಿಸುತ್ತೇನೆ.

ಪ್ರತಿಭಾವಂತ ಸಂಸದೀಯ ಪಟುಗಳ ಬಗೆಗಿನ ಈ ಕಿರುಹೊತ್ತಿಗೆಗಳು ಮಾನ್ಯ ಸದಸ್ಯರುಗಳಿಗೆ ಅನುಕೂಲ ಹಾಗೂ ಅನುಭವ ನೀಡುತ್ತದೆಂದು ಭಾವಿಸುತ್ತೇನೆ.

ಯಾಕೂಬ್ ಷರೀಫ್
ಕಾರ್ಯದರ್ಶಿ
ಕರ್ನಾಟಕ ವಿಧಾನ ಮಂಡಲ.

ಬೆಂಗಳೂರು
ಫೆಬ್ರವರಿ, 1998

313-2

ಭಾಗ - 1

ಶೇಖ್ ಅಬ್ದುಲ್ಲಾರ ಜೀವನ

ಶೇಕ್ ಮಹಮ್ಮದ್ ಅಬ್ದುಲ್ಲಾ: ಒಂದು ವ್ಯಕ್ತಿ ಚಿತ್ರ

ಶ್ರೀನಗರದ ಸರಹದ್ದಿನಲ್ಲಿರುವ ಸವೋರ ಎಂಬ ಹಳ್ಳಿಯಲ್ಲಿ 5ನೇ ಡಿಸೆಂಬರ್ 1905 ರಂದು ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ಶೇಕ್ ಮಹಮ್ಮದ್ ಅಬ್ದುಲ್ಲಾರವರು ಜನಿಸಿದರು. ಇವರ ಕುಟುಂಬದವರು ಶಾಲು ವ್ಯಾಪಾರ ಮಾಡುತ್ತಿದ್ದರು. ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯಾನಂತರದ ಸುಮಾರು ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಅಬ್ದುಲ್ಲಾರವರು ಜಮ್ಮು ಮತ್ತು ಕಾಶ್ಮೀರದ ರಾಜಕೀಯ ರಂಗದ ಮೇಲೆ ತಮ್ಮದೇ ಆದ ಪ್ರಭಾವವನ್ನು ಬೀರಿದರು. ಇವರ ಜನನಕ್ಕೆ ಇನ್ನು ಎರಡು ತಿಂಗಳಿರುವಾಗಲೆ ಇವರ ತಂದೆ ಶೇಕ್ ಮಹಮ್ಮದ್ ಇಬ್ರಾಹಿಂರವರು ಪತ್ನೀ, ಐದು ಮಂದಿ ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿ ಕಾಲವಾಗಿದ್ದರು, ತಾಯಿ ಹಾಗೂ ಅಣ್ಣಂದಿರ ಅಕ್ಕರೆಯಲ್ಲಿ ಬೆಳದ ಅಬ್ದುಲ್ಲಾ ಬಾಲ್ಯದಿಂದಲೆ ಜಾಣರಾಗಿದ್ದರು. ಇವರ ಜಾಣ್ಮೆಯನ್ನು ಗುರುತಿಸಿ ತಾಯಿ ಹಾಗೂ ಅಣ್ಣಂದಿರು ಇವರನ್ನು ವಿದ್ಯಾವಂತನನ್ನಾಗಿ ಮಾಡಲು ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಿದರು.

ಅಬ್ದುಲ್ಲಾರ ಪ್ರಾಥಮಿಕ ಮತ್ತು ಪ್ರೌಢಶಾಲಾ ವ್ಯಾಸಂಗವು ಸ್ಥಳೀಯ ಶಾಲೆಯೊಂದರಲ್ಲಿ ನಡೆಯಿತು. ನಂತರ ಶ್ರೀನಗರದಲ್ಲಿ ಪ್ರತಾಪ್ ಕಾಲೇಜು ಮತ್ತು ಲಾಹೋರಿನ ಇಸ್ಲಾಮಿಯ ಕಾಲೇಜಿನಲ್ಲಿ ಅಧ್ಯಯನ ಮಾಡಿದರು. 1928ರಲ್ಲಿ ಪಂಜಾಬ್ ವಿಶ್ವವಿದ್ಯಾನಿಲಯದಲ್ಲಿ ಪದವಿ ಪಡೆದರು. ಅನಂತರದ ಅಲಿಘರ್ ಮುಸ್ಲಿಂ ವಿಶ್ವವಿದ್ಯಾನಿಲಯದಿಂದ 1930 ರಲ್ಲಿ ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಿದರು.

ತಮ್ಮ ತಾಯ್ನೆಲದ ಹೊರಗೆ ವಿಶ್ವವಿದ್ಯಾನಿಲಯದಲ್ಲಿ ಉನ್ನತ ವ್ಯಾಸಂಗ ಮಾಡಿದ ಫಲವಾಗಿ ಅಬ್ದುಲ್ಲಾರವರ ಮೇಲೆ ಹಲವಾರು ಕ್ಷೇತ್ರಗಳಿಗೆ ಸಂಬಂಧಿಸಿದ ಅಪಾರವಾದ ವಿಚಾರಗಳು ಅಬ್ದುಲ್ಲಾರವರ ಅರಿವಿನ ಬಾಗಿಲನ್ನು ತೆರೆಸಿದವು. ಅವರು ಕಂಡಂತ ಅನುಭವಗಳು ಅವರ ಭವಿಷ್ಯದ ರಾಜಕೀಯಕ್ಕೆ ಭದ್ರ ಬುನಾದಿಯನ್ನು ಹಾಕಿಕೊಟ್ಟವು. ಅಬ್ದುಲ್ಲಾರವರು ಅಧ್ಯಯನ ಮಾಡಿದ ಇಸ್ಲಾಮಿಯಾ ಕಾಲೇಜು ಮತ್ತು ಅಲಿಘರ್ ವಿಶ್ವವಿದ್ಯಾನಿಲಯಗಳು ಸಮ್ರಾಜ್ಯಶಾಹಿ ವಿರೋಧಿ ಆಂದೋಲನಕ್ಕೆ, ರಾಷ್ಟ್ರೀಯ ಪ್ರಜ್ಞೆಗೆ ರಾಷ್ಟ್ರಪ್ರೇಮಕ್ಕೆ ಹೆಸರುವಾಸಿಯಾಗಿದ್ದವು. ಅಬ್ದುಲ್ಲಾರವರು ಈ ವಿದ್ಯಾ ಸಂಸ್ಥೆಗಳಲ್ಲಿ ಜನಪ್ರಿಯ ಮುಸ್ಲಿಂ ಚಿಂತಕರ ಮತ್ತು ಸಾರ್ವಜನಿಕ ಧುರೀಣರ ನಿಕಟವರ್ತಿಗಳಾಗಿದ್ದರು. ಅವರುಗಳ ಪ್ರಭಾವದಿಂದ ಸ್ಫೂರ್ತಿಗೊಂಡ ಅಬ್ದುಲ್ಲಾರವರು ಶತಮಾನಗಳಿಂದಲೂ ಕಾಡುತ್ತಾ ಬಂದಿದ್ದ ಊಳಿಗಮಾನ್ಯ ವ್ಯವಸ್ಥೆಯಿಂದ ಕಾಶ್ಮೀರವನ್ನು ಸ್ವತಂತ್ರ್ಯಗೊಳಿಸಲು ಚಿಂತಿಸಿದರಲ್ಲದೆ ಕಾಶ್ಮೀರವನ್ನು ರಾಷ್ಟ್ರದ ಮುಖ್ಯ ವಾಹಿನಿಗೆ ತರಲು ನಿರ್ಧರಿಸಿದರು.

ಅಬ್ದುಲ್ಲಾರ ರಾಜಕೀಯ ಚಟುವಟಿಕೆಗಳು ತಾವೇ ಸ್ಥಾಪಿಸಿದ "ಗ್ರಂಥಾಲಯ ಗೆಳೆಯರ ಬಳಗ" (ರೀಡಿಂಗ್ ರೂಂ ಪಾರ್ಟಿ) ದಿಂದ ಪ್ರಾರಂಭವಾದವು. ಬಡತನದಿಂದ ತೊಳಲಾಡುತ್ತಿರುವ ಮುಸ್ಲಿಂ ಸಮುದಾಯದ ಹಲವು ಸಮಸ್ಯೆಗಳನ್ನು ಚರ್ಚಿಸಲು ಬಳಗವನ್ನು ಸ್ಥಾಪಿಸಿದ್ದರು. 1929ರಲ್ಲಿ ವಿದ್ಯಾವಂತ ಇಸ್ಲಾಂ ಯುವಕರೆಲ್ಲರೂ ಶ್ರೀನಗರದ ಗ್ರಂಥಾಲಯದಲ್ಲಿ ಸಭೆ ಸೇರಿ, ಸರ್ಕಾರಿ ಸೇವೆಗೆ ಸೇರಲು ಮುಸ್ಲಿಮರಿಗೆ ದೊರೆಯುವಂತೆ, ನೇಮಕ ನಿಯಮಗಳಲ್ಲಿ ವಿಶೇಷ ರಿಯಾಯಿತಿ ಹಾಗೂ ಅವಕಾಶ ನೀಡುವಂತೆ ಒತ್ತಾಯಿಸಿ ಮಹಾರಾಜರಿಗೆ ಮನವಿ ಸಲ್ಲಿಸಿದರು, ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದ ಶೇಕ್ ಅಬ್ದುಲ್ಲಾರವರೇ ಸ್ಥಳೀಯ ಶಾಲೆಯೊಂದಲ್ಲಿ ಬೋಧಕರಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದ್ದರು. ತಮ್ಮ ಮನವಿಯು ತಿರಸ್ಕೃತವಾದ್ದರಿಂದ ಯುವಕರೆಲ್ಲ ಒಗ್ಗೂಡಿ ಹೋರಾಟಕ್ಕಿಳಿಯಲು ನಿರ್ಧರಿಸಿದರು.

ಶೇಕ್ ಅಬ್ದುಲ್ಲಾರವರು ಶಾಲಾ ಉಪಾಧ್ಯಾಯ ವೃತ್ತಿಗೆ ರಾಜೀನಾಮೆ ನೀಡಿ ಊಳಿಗಮಾನ್ಯ ಹಾಗೂ ನಿರಂಕುಶ ಪ್ರಭುತ್ವದ ವಿರುದ್ಧ ಬಹುಸಂಖ್ಯಾತ ಕಡೆಗಣಿತ ಮುಸಲ್ಮಾನರ ಪ್ರತಿನಿಧಿಯಾಗಿ ಚಳುವಳಿಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ರೀಡಿಂಗ್ ರೂಂ ಪಾರ್ಟಿಯನ್ನು ಸಾರ್ವಜನಿಕ ಸೇವಾ ವೇದಿಕೆಯನ್ನಾಗಿ ಪರಿವರ್ತಿಸಿದರು. ರಾಜ್ಯದ ಎಲ್ಲೆಡೆಗಳಿಂದಲೂ ವಿದ್ಯಾವಂತ ಮುಸಲ್ಮಾನ ಯುವಕರು ಅತ್ಯಧಿಕ ಸಂಖ್ಯೆಯಲ್ಲಿ ಆ ವೇದಿಕೆಗೆ ಸೇರತೊಡಗಿದರು. ಊಳಿಗಮಾನ್ಯ ವ್ಯವಸ್ಥೆ ಹಾಗೂ ನಿರಂಕುಶ ಆಳ್ವಿಕೆಯ ವಿರುದ್ಧ ಇಡೀ ರಾಜ್ಯವೇ ಕೆರಳಿ ತಮ್ಮ ಅತೃಪ್ತಿ ಮತ್ತು ಅಸಮಾಧಾನವನ್ನು ವ್ಯಕ್ತಪಡಿಸಿತ್ತು. ತಮ್ಮ ಸಾಮರ್ಥ್ಯ, ವಾಕ್ಚಾತುರ್ಯದ ಕಲೆಯಿಂದ ಕುರಾನ್ ಪವಿತ್ರ ಗ್ರಂಥದ ದಿವ್ಯವಾಣಿಗಳನ್ನು ಬೋಧಿಸುತ್ತ ಮುಸಲ್ಮಾನರ ಭಾವನೆಗಳನ್ನು ಜಾಗೃತಗೊಳಿಸಿದರು. ಸತತ ಕ್ರೌರ್ಯ, ಅನ್ಯಾಯಕ್ಕೆ ಗುರಿಯಾಗಿದ್ದ ಅವರನ್ನು ಭೌದ್ಧಿಕವಾಗಿ ಹುರಿದುಂಬಿಸಿದರು "ಅಖಿಲ ಭಾರತ ಕಾಶ್ಮೀರಿ ಮುಸ್ಲಿಂ ಸಮಾವೇಶ" ನಡೆಸಿದ ಆಂದೋಲನ ಮತ್ತು ಖ್ಯಾತ ಉರ್ದುಕವಿ ಸರ್ ಮಹಮ್ಮದ್ ಇಕ್ಬಾಲ್ ರಂತಹ ಪ್ರಭಾವಶಾಲಿ ವ್ಯಕ್ತಿಗಳು ನೀಡಿದ ಬೆಂಬಲ ಅಬ್ದುಲ್ಲಾರ ಚಳುವಳಿಗೆ ಉತ್ತೇಜನ ನೀಡಿದವು.

1931ರಲ್ಲಿ ರೀಡಿಂಗ್ ರೂಂ ಪಾರ್ಟಿಯರು ಜಾಮಾ ಮಸೀದಿಯಲ್ಲಿ ನಡೆಸಬೇಕೆಂದಿದ್ದ ಸಾರ್ವಜನಿಕ ಸಭೆಯನ್ನು ನಿಷೇಧಿಸಿ ಸರ್ಕಾರ ಆಜ್ಞೆ ಹೊರಡಿಸಿತು. ಆದರೆ ನಿಷೇಧ ಆಜ್ಞೆಯನ್ನು ಉಲ್ಲಂಘಿಸಿ ಯುವ ಸಂಘಟನಾಕಾರರು ಸಭೆಯನ್ನು ನಡೆಸಿದರು ಆನಂತರ ಮುಸ್ಲಿಂ ಗಣ್ಯರ ಸಮಾವೇಶವನ್ನು ಸಂಘಟಿಸಿದರು. ಸಮಾವೇಶದಲ್ಲಿ ಭಾಗವಹಿಸಿದ ಭಾಷಣಕಾರರೊಬ್ಬರು ಸರ್ಕಾರದ ವಿರುದ್ಧ ಅಗೌರವವಾಗಿ ಮಾತನಾಡಿದ್ದರಿಂದ ಅವರನ್ನು ಸರ್ಕಾರವು ಬಂಧಿಸಿ ವಿಚಾರಣೆಗೆ ಗುರಿಪಡಿಸಿತು. ಸರ್ಕಾರದ ಈ ಕ್ರಮವನ್ನು ಖಂಡಿಸಿ

1931 ಜುಲೈ 13 ರಂದು ಸಾರ್ವಜನಿಕರು ಜೈಲಿನ ಹೊರಗೆ ಪ್ರತಿಭಟನೆ ನಡೆಸಿದರು. ಈ ಸಂದರ್ಭದಲ್ಲಿ ನಡೆದ ಪೋಲೀಸ್ ಗೋಲಿಬಾರ್‌ನಲ್ಲಿ 26 ಮಂದಿ ಮೃತರಾದರು. ಸರ್ಕಾರದ ಅಮಾನವೀಯ ಕ್ರಮವನ್ನು ವಿರೋಧಿಸಿದ ಕಾರಣ ಶೇಕ್ ಮತ್ತು ಅವರ ಸಂಗಡಿಗರು ಸೆರೆಮನೆಗೆ ಹೋಗಬೇಕಾಯಿತು. ಇದರಿಂದ ಪ್ರತಿಭಟನೆ ಮತ್ತೂ ತೀವ್ರವಾಯಿತು. ವಿಧಿಯಿಲ್ಲದೆ ಸರ್ಕಾರ ಖೈದಿಗಳನ್ನು ಬಿಡುಗಡೆ ಮಾಡಬೇಕಾಯಿತು ಮುಸ್ಲಿಂರ ಕುಂದುಕೊರತೆಗಳ ನಿವಾರಣೆಗಾಗಿ ಒಂದು ಆಯೋಗವನ್ನು ನೇಮಿಸಲಾಯಿತು. ಮುಸ್ಲಿಮರನ್ನು ಶಾಂತಗೊಳಿಸಲು ಆಯೋಗವು ಹಲವಾರು ಶಿಫಾರಸ್ಸುಗಳನ್ನು ಮಾಡಿತು. ಅಬ್ದುಲ್ಲಾರ ಹಾಗೂ ರೀಡಿಂಗ್ ರೂಂ ಪಾರ್ಟಿಯ ನಾಯಕರ ಬಹುದಿನಗಳ ಬೇಡಿಕೆಯಾಗಿದ್ದ, ವಿದ್ಯಾವಂತ ಮುಸ್ಲಿಂರಿಗೆ ಸರ್ಕಾರಿ ಸೇವೆಗೆ ಸೇರುವ ಸೌಲಭ್ಯ ಕೂಡ ಅದರಲ್ಲೊಂದು, ಜನರು ಅವರಿಗೆ ವಂಚಿತರಾಗಿದ್ದ ವಾಕ್ ಸ್ವಾತಂತ್ರ ಹಾಗೂ ಸಂಘ ರಚನೆ ಸ್ವಾತಂತ್ರ ್ಯಕ್ಕೆ ಸಂಬಂಧಿಸಿದ ಕೆಲವೊಂದು ಶಿಫಾರಸ್ಸುಗಳನ್ನು ಸಹ ಆಯೋಗ ಮಾಡಿತು.

ಈ ಬೆಳವಣಿಗೆಗಳು ಶೇಕ್ ಅಬ್ದುಲ್ಲಾರವರನ್ನು ಕಾಶ್ಮೀರ ಮುಸ್ಲಿಮರ ಅನನ್ಯ ನಾಯಕರನ್ನಾಗಿ ಹಾಗೂ ಮುಸ್ಲಿಮರ ಪ್ರಜಾ ಪ್ರಭುತ್ವ ಆಕಾಂಕ್ಷೆಗಳ ಸಂರಕ್ಷಕ ಶಕ್ತಿಯನ್ನಾಗಿ ರೂಪಿಸಿದವು. ಈ ಎಲ್ಲಾ ವಿದ್ಯಾಮಾನಗಳಿಂದ ಉತ್ತೇಜಿತರಾದ ಅಬ್ದುಲ್ಲಾರವರು ಮುಸ್ಲಿಂ ಸಮುದಾಯದ ಮುಂದಾಳುಗಳನ್ನೆಲ್ಲ ಒಂದುಗೂಡಿಸಿ 1932ರಲ್ಲಿ ಜಮ್ಮು ಮತ್ತು ಕಾಶ್ಮೀರದ ಮುಸ್ಲಿಂ ಸಂಘಟನೆಯನ್ನು ಸ್ಥಾಪಿಸಿದರು. ಮುಸ್ಲಿಮರ ಹಕ್ಕುಗಳ ಸಂರಕ್ಷಣೆ ಈ ಸಂಘಟನೆಯ ಮುಖ್ಯ ಗುರಿಯಾಗಿತ್ತು. ಅಬ್ದುಲ್ಲಾರವರು ಅದರ ಅಧ್ಯಕ್ಷರಾಗಿ ಆಯ್ಕೆಯಾದರು.

ಈ ನಡುವೆ, ರಾಷ್ಟ್ರೀಯ ಚಳುವಳಿಯು ಉಪ-ಖಂಡವನ್ನೆಲ್ಲಾ ವ್ಯಾಪಿಸಿತ್ತು. ಅಬ್ದುಲ್ಲಾರ ಮೇಲೆ ಸಹ ತನ್ನ ಪ್ರಭಾವವನ್ನು ಬೀರಿತು. ರಾಷ್ಟ್ರೀಯ ನಾಯಕರರೊಂದಿಗೆ ಮುಖ್ಯವಾಗಿ ಮಹಾತ್ಮಗಾಂಧಿ, ಜವಹರ್‌ಲಾಲ್‌ನೆಹರೂ, ಸರ್ದಾರ್ ವಲ್ಲಭ ಬಾಯಿ ಪಟೇಲ್, ಖಾನ್ ಅಬ್ದುಲ್ ಗಫರ್‌ಖಾನ್ ಮತ್ತು ಮೌಲಾನ ಅಬ್ದುಲ್ ಅಜಾದ್ ಇವರ ಸಂಪರ್ಕವುಂಟಾಯಿತು. 1930ರ ಪ್ರಾರಂಭದಲ್ಲಿ ನೆಹರೂರವರ ಭೇಟಿಯಾದ ಮೇಲೆ ಅಬ್ದುಲ್ಲಾರವರು ನೆಹರೂರವರಿಂದ ತುಂಬಾ ಪ್ರಭಾವಿತರಾದರು. ಸಮಾನ ಮೌಲ್ಯ, ಅಭಿಪ್ರಾಯಗಳುಳ್ಳ ಇಬ್ಬರೂ ಅತ್ಮೀಯ ಸ್ನೇಹಿತರಾದರು.

ಈ ವೇಳೆಗಾಗಲೇ ಅಬ್ದುಲ್ಲಾರವರು "ಕಾಶ್ಮೀರದ ಸಿಂಹ" ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಇವರ ಅನುಯಾಯಿಗಳು ತಮ್ಮನ್ನು ಸಿಂಹಗಳೆಂದೆ ಕರೆದುಕೊಳ್ಳತೊಡಗಿದ್ದರು. ಇವರಲ್ಲಿ ಹೆಚ್ಚು ಮಂದಿ ಮುಸ್ಲಿಂ ರಾಷ್ಟ್ರೀಯ ವಾದಿಗಳು, ಅಬ್ದುಲ್ಲಾರ ನೇತೃತ್ವದಲ್ಲಿ ಸ್ವಯಂ ಪ್ರೇರಿತರಾಗಿ ರಾಷ್ಟ್ರೀಯ ಚಳುವಳಿಯಲ್ಲಿ ಪ್ರಾಮಾಣಿಕವಾಗಿ ಜಾತ್ಯಾತೀತ ನಾಡ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದರು ಮತ್ತು ಇತರ ರಾಷ್ಟ್ರೀಯ ನಾಯಕರಿಗೆ ಅತ್ಯಂತ ನಿಷ್ಠರಾಗಿದ್ದರು.

ಅಬ್ದುಲ್ಲಾರ ವಿರೋಧಿಗಳು ತಮ್ಮನ್ನು 'ಬಕರಗ'ಳೆಂದು ಕರೆದುಕೊಳ್ಳುತ್ತಿದ್ದರು ಅವರೆಲ್ಲಾ ಬಹುಮಟ್ಟಿಗೆ ಜಿನ್ನಾರ ಬೆಂಬಲಿಗರಾಗಿದ್ದರು. ರಾಷ್ಟ್ರರಂಗದಲ್ಲಿ ಶೇಕ್ ಅಬ್ದುಲ್ಲಾರವರು ಪ್ರವರ್ಧಮಾನಕ್ಕೆ ಬರುತ್ತಿದ್ದ 30ರ ಮತ್ತು 40 ದಶಕದಲ್ಲಿ ಈ ಎರಡು ವಿರೋಧಿ ಬಣಗಳು ಪರಸ್ಪರ ದ್ವೇಷ ಸಾಧಿಸುತ್ತಿದ್ದುದು ಕಾಶ್ಮೀರದ ರಾಜಕೀಯ ರಂಗದಲ್ಲಿ ಅಂದಿನ ವಿಲಕ್ಷಣ ಸಂಗತಿಯಾಗಿತ್ತು.

ಮುಸ್ಲಿಮರ ಏಳಿಗೆಯ ಹರಿಕಾರನಾಗಿಯೇ ಶೇಕ್ ಅಬ್ದುಲ್ಲಾರು ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿದರು. ಆದರೆ, ಕಾಶ್ಮೀರದಲ್ಲಿ ನೆಲೆಯೂರಿದ ಊಳಿಗಮಾನ್ಯ ವ್ಯವಸ್ಥೆಗೆ ಧರ್ಮದ ಶಕ್ತಿ ಅಪಾರ ಎಂಬುದು ಗೊತ್ತಿರಲಿಲ್ಲ. ಮಹಾರಾಜರ ಆಶ್ರಿತರು ಪಟ್ಟಭದ್ರ ಹಿತಾಸಕ್ತಿಯುಳ್ಳ ಜನರು ಮಾತ್ರವೇ ರಾಜ್ಯದಲ್ಲಿ ಸುಖಜೀವನವನ್ನು ನಡೆಸುತ್ತಿದ್ದರು. ಮುಸ್ಲಿಮರಷ್ಟೇ ಅಲ್ಲದೆ ಊಳಿಗಮಾನ್ಯ ವ್ಯವಸ್ಥೆಗೆ ಬಲಿಪಶುಗಳಾಗಿದ್ದ ಕೆಳದರ್ಜೆಯ ಹಿಂದುಗಳೂ ಮತ್ತು ಸಿಖ್ಖರು ಕೂಡ ನೋವುಗಳನ್ನು ಅನುಭವಿಸುತ್ತಿರುವ ಸಂಗತಿ ಅಬ್ದುಲ್ಲಾರ ಗಮನವನ್ನು ಸೆಳೆಯಿತು. ತಮ್ಮ ಚಳುವಳಿಯನ್ನು ರಾಷ್ಟ್ರ ವ್ಯಾಪ್ತಿಗೊಳಿಸಬೇಕಾದುದರ ಅಗತ್ಯವನ್ನು ಕಂಡುಕೊಂಡು, ಮತೀಯ ನಿರ್ಬಂಧಗಳಿಗೆ ಅವಕಾಶಕೊಡದೆ ದೇಶದಾದ್ಯಂತ ನಡೆಯುತ್ತಿದ್ದ ಆಂದೋಲನವನ್ನು ಒಗ್ಗೂಡಿಸಿ ಜಾತ್ಯತೀತ ಪ್ರಕ್ರಿಯೆಯಲ್ಲಿ ಊಳಿಗಮಾನ್ಯ, ಜಮೀನ್ದಾರಿ ಪದ್ಧತಿಯನ್ನು ಕಿತ್ತೊಗೆದು ನವ ಸ್ವತಂತ್ರ ಭಾರತದ ನಿರ್ಮಾಣಕ್ಕಾಗಿ 1939ರಲ್ಲಿ ಮುಸ್ಲಿಂ ಚಳುವಳಿಯನ್ನು ರಾಷ್ಟ್ರೀಯ ಚಳುವಳಿಯಾಗಿ ಮಾರ್ಪಡಿಸಿದರು. ಮುಸ್ಲಿಂ ಧಾರ್ಮಿಕವಾದಿಗಳು ಅಬ್ದುಲ್ಲಾರ ಈ ನಿರ್ಧಾರವನ್ನು ಖಂಡಿಸಿದರು. ಇಸ್ಲಾಂ ಜನರು ಇಬ್ಭಾಗವಾದರು. ಅಬ್ದುಲ್ಲಾರ ವಿರೋಧಿಗಳು ಜಿನ್ನಾರವರ ಪಕ್ಷ ವಹಿಸಿ ತಮ್ಮ ಧಾರ್ಮಿಕ ಅಸ್ತಿತ್ವವನ್ನು ಕಂಡುಕೊಳ್ಳತೊಡಗಿದರು. ಅಬ್ದುಲ್ಲಾರನ್ನು ಧರ್ಮದ್ರೋಹಿಗಳೆಂದು ದೂರಿದರು.

ತರುವಾಯ 1981ರಲ್ಲಿ, ಒಂದು ಸಂದರ್ಶನದಲ್ಲಿ ತಮ್ಮ ಅಂದಿನ ನಿರ್ಧಾರಕ್ಕೆ ಈ ರೀತಿ ಪ್ರತಿಕ್ರಿಯಿಸಿದರು. ಜನರ ಆರ್ಥಿಕ ಏಳಿಗೆಯೇ ಮುಖ್ಯ ಉದ್ದೇಶವಾಗುಳ್ಳ ಚಳುವಳಿಯಿಂದ ಮುಸ್ಲಿಮೇತರರನ್ನು ಹೊರಗಿಡುವುದು ತರ್ಕ ಸಮ್ಮತವಲ್ಲವೆಂದು ಕಾಣುತ್ತದೆ. ಆದ್ದರಿಂದ ಪಾರ್ಟಿಯನ್ನು ನಾವು ಜಾತ್ಯತೀತ ವೇದಿಕೆಯಾಗಿ ಪರಿವರ್ತಿಸಿದ್ದೇವೆ ಮತ್ತು ಅದಕ್ಕೆ ನ್ಯಾಷನಲ್ ಕಾನ್‌ಫರೆನ್ಸ್ ಎಂದು ಹೆಸರಿಟ್ಟಿದ್ದೇವೆ.

ತಮ್ಮ ನಿರ್ಧಾರಕ್ಕೆ ನೆಹರೂಜಿಯವರ ಪ್ರಭಾವವೆ ಕಾರಣವೆಂಬುದನ್ನು ಸಹ ಅವರು ಒಪ್ಪಿಕೊಂಡಿದ್ದಾರೆ. ಅವರಿಗೆ ಹೀಗೆ ಹೇಳಿದ್ದಾರೆ: ಜವಹಾರಲಾಲ್‌ರು "ತುಂಬಾ ಸೂಕ್ಷ್ಮ ಸ್ವಭಾವದ ದಾರ್ಶನಿಕ ದೃಷ್ಟಿಯುಳ್ಳ ವ್ಯಕ್ತಿ".

ನ್ಯಾಷನಲ್ ಕಾನ್‌ಫರೆನ್ಸ್‌ಗೆ ವಿಶಾಲ ತಳಹದಿ ಹಾಕುವಂತೆ ಮತ್ತು ಜಮೀನ್ದಾರರಿಂದ ತೀವ್ರ ವಿರೋಧ ಬಂದರೂ ಸಹ ಸಂಸ್ಥೆಯ ಬಾಗಿಲನ್ನು ಮುಸ್ಲೀಮೇತರರಿಗೂ ತೆರೆಯಬೇಕೆಂದು ಅವರು ಸಲಹೆ ಇತ್ತರು, ಪ್ರಾರಂಭದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸಿನಂತೆಯೇ ಅಬ್ದುಲ್ಲಾರ ನಾಯಕತ್ವದ ನ್ಯಾಷನಲ್ ಕಾನ್‌ಫರೆನ್ಸ್ ಕಾಶ್ಮೀರದ ಜನರಿಗೆ ಜವಾಬ್ದಾರಿಯುತ ಸ್ವಯಂ ಆಡಳಿತ ಸರ್ಕಾರ ನೀಡಬೇಕೆಂಬ ಉದಾರ ಉದ್ದೇಶವನ್ನು ಹೊಂದಿತ್ತು. ನ್ಯಾಷನಲ್ ಕಾನ್‌ಪರೆನ್ಸ್ ತನ್ನ ಬೇಡಿಕೆಯನ್ನು ಈಡೇರಿಸುವಂತೆ ಕೋರಿ ಶಾಂತಿಯುತವಾಗಿ ಸಭೆಯನ್ನು ನಡೆಸಿತು. ಮುಸ್ಲಿಂ ಹಾಗೂ ಮುಸ್ಲಿಂಯೇತರ ನಾಗರೀಕರೆಲ್ಲರೂ ಈ ಸಭೆಯಲ್ಲಿ ಭಾಗವಹಿಸಿದ್ದರು. ಮಹಾರಾಜರ ಆಜ್ಞೆಯ ಮೇರೆಗೆ ಈ ಸಭೆಯನ್ನು ದಮನಮಾಡಿದ್ದೆ ಅಲ್ಲದೆ ಇದರ ಅಧ್ಯಕ್ಷರಾಗಿದ್ದ ಅಬ್ದುಲ್ಲಾರನ್ನು ಮತ್ತು ಮುಸ್ಲಿಮೇತರರೂ ಸೇರಿದಂತೆ ನ್ಯಾಷನಲ್ ಕಾನ್‌ಫರೆನ್ಸ್‌ನ ಪ್ರಮುಖ ನಾಯಕರನ್ನು ಸರ್ಕಾರ ಬಂಧಿಸಿ ಜೈಲಿಗೆ ಕಳುಹಿಸಲಾಯಿತು.

ಆನಂತರ, ಕ್ಷಮಾದಾನದ ಬಿಡುಗಡೆಯಾದ ಅಬ್ದುಲ್ಲಾರವರು, ಕಾಶ್ಮೀರದ ಜನರನ್ನು ಊಳಿಗಮಾನ್ಯ ಶೋಷಣೆಯಿಂದ ಬಿಡುಗಡೆ ಮಾಡುವುದಕ್ಕಾಗಿ ತಮ್ಮ ಶ್ರದ್ಧವಂತ ಕಾರ್ಯಕರ್ತರೊಡಗೂಡಿ ಸಾಮಾಜಿಕ, ಆರ್ಥಿಕ ವಿಮೋಚನ ಸನ್ನದನ್ನು ರೂಪಿಸಿ, ಅದನ್ನು "ನಯಾ ಕಾಶ್ಮೀರ" ಎಂದು ಕರೆದರು. ಈ ಸನ್ನದಿನ ಮುಖ್ಯ ಧ್ಯೇಯವೆಂದರೆ "ಉಳುವವನಿಗೆ ಭೂಮಿ" ಭಾರತಕ್ಕೆ ಸ್ವಾತಂತ್ರ ಬಂದ ಕೂಡಲೆ ಈ ಕಾರ್ಯಕ್ರಮದ ಅನ್ವಯ ಕಾಶ್ಮೀರದಲ್ಲಿ ಜಮೀನ್ದಾರಿ ಪದ್ಧತಿ ರದ್ದಾಯಿತು.

1945ರಲ್ಲಿ ಕಾಶ್ಮೀರಕ್ಕೆ ಭೇಟಿ ನೀಡಿದ ಎಂ.ಎ ಜಿನ್ನಾರವರು ಅಬ್ದುಲ್ಲಾರನ್ನು ಹಾಗೂ ಅವರ ಕಾಶ್ಮೀರಿ ಮುಸ್ಲಿಂ ಬೆಂಬಲಿಗರನ್ನು ಜಾತ್ಯತೀತತೆ ಮತ್ತು ರಾಷ್ಟ್ರೀಯತೆಯ ಮಾರ್ಗದಿಂದ ತಪ್ಪಿಸಲು ಯತ್ನಿಸಿದರು. ಜಿನ್ನಾರವರು ಮುಸ್ಲಿಂ ಲೀಗ್‌ನೊಂದಿಗೆ , ಅಬ್ದುಲ್ಲಾ ಮತ್ತವರ ಅನುಯಾಯಿಗಳು ಕಾಶ್ಮೀರದ ಮಹಾರಾಜರ ವಿರುದ್ಧದ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಮನವಿ ಮಾಡಿಕೊಂಡರು. ಅಬ್ಬುಲ್ಲಾರವರು ಅವರ ಮನವಿಯನ್ನು ತಿರಸ್ಕರಿಸಿದಷ್ಟೆ ಅಲ್ಲದೆ ಜಿನ್ನಾರವರ ವಿರುದ್ಧವಾಗಿ ಪ್ರತಿಭಟನೆ ನಡೆಸಿದರು. ಜಿನ್ನಾರವರನ್ನು ಕಾಶ್ಮೀರದಿಂದ ಹಿಮ್ಮರಳಬೇಕಾಯಿತು.

ಜಿನ್ನಾರೊಂದಿಗಿನ ಮಾತುಕತೆಯಲ್ಲಿ ಅಬ್ದುಲ್ಲಾ ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಿಪಡಿಸಿದರು:

"ಧರ್ಮವೊಂದೇ ಮುಸ್ಲಿಂಮರನ್ನು ಒಗ್ಗೂಡಿಸುವ ಶಕ್ತಿಯಾಗಲಾರದು. ನಮ್ಮ ದೇಶ ಹಲವಾರು ಪ್ರಾಂತ್ಯಗಳನ್ನೊಳಗೊಂಡಿದ್ದು ಒಂದು ಮತ್ತೊಂದನ್ನು ಅವಲಂಬಿಸಿದೆ. ಈ ದೇಶದಲ್ಲಿ ಹಲವಾರು ಭಾಷೆಗಳಿವೆ, ಹಲವಾರು ಜನಾಂಗಗಳಿವೆ, ದೇಶ ಆರ್ಥಿಕವಾಗಿ

ಹಿಂದುಳಿದಿದೆ ಪ್ರತಿಯೊಂದು ಪ್ರಾಂತ್ಯವು ತನ್ನದೆ ಆದ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಹೀಗೆ ವೈವಿಧ್ಯಮಯವಾದ ಸಂಸ್ಕೃತಿ ಇತಿಹಾಸ ಉಳ್ಳ ಈ ದೇಶದಲ್ಲಿ ಕೇವಲ ಧರ್ಮವೊಂದೇ ಸಹ-ಧರ್ಮೀಯರನ್ನು ಹೇಗೆ ಒಗ್ಗೂಡಿಸುತ್ತದೆ?"

ಶೇಕ್‌ರ ಅಭಿಪ್ರಾಯಕ್ಕೆ ಸಮರ್ಥನೆಯಾಗಿ ಭಾಂಗ್ಲದೇಶದ ಉದಯದ ಅನುಭವ ನಮ್ಮ ಮುಂದಿದೆ ಸಾಂಸ್ಕೃತಿಕವಾಗಿ, ಭಾಷಿಕವಾಗಿ, ಹಾಗೂ ಭೌಗೋಳಿಕವಾಗಿ ಬೇರೆ ಬೇರೆಯಾಗಿರುವ ಮತ್ತು ಆರ್ಥಿಕ ಸಮಾನತೆ ಇರುವಂತಹ ಎರಡು ಪ್ರಾಂತ್ಯಗಳನ್ನು ಧರ್ಮ ಒಂದೇ ಬಹುಕಾಲ ಒಗ್ಗೂಡಿಸಲು ಸಾಧ್ಯವಾಗುವುದಿಲ್ಲ.

ಕಾಶ್ಮೀರದ ರಾಷ್ಟ್ರೀಯವಾದಿಗಳ, ಜಾತ್ಯತೀತ ಮನೋಭಾವ ಜನತೆಯ ಮುಖಂಡರಾಗಿ ಮಹಾರಾಜರ ವಿರುದ್ಧ ಸಿಡಿದೆದ್ದರೂ. ಕಾಶ್ಮೀರವನ್ನೊಳಗೊಂಡಂತೆ ಅಖಂಡ ಭಾರತದ ಕಲ್ಪನೆಯನ್ನು ಬಲವಾಗಿ ಪ್ರತಿಪಾದಿಸಿದರು. ಆಲ್ ಇಂಡಿಯಾ ಪೀಪಲ್ಸ್ ಕಾನ್‌ಫರೆನ್ಸ್‌ನ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಇದು ರಾಜಪ್ರಭುತ್ವದ ಪ್ರಾಂತ್ಯಗಳಲ್ಲಿ ರಾಷ್ಟ್ರೀಯವಾದಿಗಳು ಒಂದುಗೂಡುವಂತೆ ಮಾಡಿತು; ಹಲವಾರು ವರ್ಷಗಳವರೆಗೆ ಅಬ್ದುಲ್ಲಾರವರು ಅದರ ಕಾರ್ಯದರ್ಶಿಗಳಾಗಿದ್ದರು. ನಂತರ ಸಂಘಟನೆಯು ರಾಷ್ಟ್ರೀಯ ಕಾಂಗ್ರೆಸಿಗೆ ತುಂಬಾ ನಿಕಟವಾಗಿದ್ದು ರಾಷ್ಟ್ರೀಯ ಸ್ವಾತಂತ್ರ ಚಳುವಳಿಯ ಉದ್ದಕ್ಕೂ ತನ್ನ ಸಹಕಾರನೀಡಿತು.

1946ರಲ್ಲಿ ಅಬ್ದುಲ್ಲಾರವರು "ಕಾಶ್ಮೀರ ಬಿಟ್ಟು ತೊಲಗಿ" ಚಳುವಳಿಯನ್ನು ಸಂಘಟಿಸಿದರು. ಮಹಾರಾಜರ ವಿರುದ್ಧವಾದ ಈ ಚಳುವಳಿಯ ಮುಖಂಡರಾಗಿದ್ದ ಅಬ್ದುಲ್ಲಾರನ್ನು ಬಂಧಿಸಲಾಯಿತು. ಈ ಸಂದರ್ಭದಲ್ಲಿ ನೆಹರೂರವರು ಕಾಶ್ಮೀರಕ್ಕೆ ಭೇಟಿ ನೀಡಿ ಜನಪರ ಹೋರಾಟಕ್ಕೆ ತಮ್ಮ ಬೆಂಬಲ ಸೂಚಿಸಿದರು. ಕಾಶ್ಮೀರಕ್ಕೆ ರಾಷ್ಟ್ರೀಯ ನಾಯಕರ ಬರುವಿಕೆಯೂ ರಾಜನಿಗೆ ಬೇಕಾಗಿರಲಿಲ್ಲ.

ಸ್ವಾತಂತ್ರ್ಯ ಮತ್ತು ವಿಭಜನೆಯ ಸಂದರ್ಭದಲ್ಲಿ, ಕಾಶ್ಮೀರದ ಮಹಾರಾಜರು ಕಾಶ್ಮೀರವು ಸ್ವಾತಂತ್ರ ರಾಜ್ಯವಾಗಬೇಕೆಂಬುದರತ್ತ ಒಲವು ತೋರಿದರು. ಇತ್ತ ಮುಸ್ಲಿಂ ಧಾರ್ಮಿಕವಾದಿಗಳು ಅಬ್ದುಲ್ಲಾರ ಅನುಪಸ್ಥಿತಿಯ ಲಾಭ ಪಡೆದು ಕಾಶ್ಮೀರವನ್ನು ಪಾಕಿಸ್ತಾನದೊಂದಿಗೆ ವಿಲೀನಗೊಳಿಸುವ ಹವಣಿಕೆಯಲ್ಲಿದ್ದರು. ಕಾಶ್ಮೀರದ ಆಂತರಿಕ ಪರಿಸ್ಥಿತಿ ತೀರಾ ಬಿಗಡಾಯಿಸಿದಾಗ ಮತ್ತು ಸಾರ್ವಜನಿಕ ಒತ್ತಡ ಹೆಚ್ಚಿದಾಗ ಜನಾಭಿಪ್ರಾಯಕ್ಕೆ ಮಣಿದು ಮಹಾರಾಜರು ಅಬ್ದುಲ್ಲಾರನ್ನು ಬಿಡುಗಡೆ ಮಾಡಿದರು.

ಪ್ರಕ್ಷುಬ್ಧ ವಾತಾವರಣವನ್ನುಂಟು ಮಾಡುವ ದೃಷ್ಟಿಯಿಂದ ಪಾಕಿಸ್ತಾನವು ಶಸ್ತ್ರ ಸನ್ನದ್ಧರಾದ ಅತಿಕ್ರಮಣಕಾರರನ್ನು ಗಡಿಯಾಚೆಯಿಂದ ಕಳುಹಿಸಿತು. ಬುಡಕಟ್ಟು ಜನರನ್ನು ಲೂಟಿ

ಮಾಡುತ್ತಿದುದ್ದನ್ನು ತಡೆಯಲಾಗದ ಸ್ಥಿತಿಗೆ ತಲುಪಿದ, ಕಾಶ್ಮೀರದ ರಾಜ್ಯಾಡಾಳಿತ ಕುಸಿಯಿತು, ಮಹಾರಾಜ ರಾಜಧಾನಿಯನ್ನು ತ್ಯಜಿಸಬೇಕಾಯಿತು. ಅಬ್ದುಲ್ಲಾರವರಿಗೆ ಇದೊಂದು ದೊಡ್ಡ ಸವಾಲಾಗಿ ಪರಿಣಮಿಸಿತು. ಅತ್ಯಂತ ಚಾಣಾಕ್ಷತೆಯಿಂದ ಕ್ರಿಯಾಶೀಲರಾದರು, ತಾಯ್ನಾಡನ್ನು ಪಾಕಿಸ್ತಾನ ಬೆಂಬಲಿತ ದಾಳಿಕೋರರಿಂದ ರಕ್ಷಿಸಿ ಕೊಳ್ಳಲು ಜನರನ್ನು ಸಂಘಟಿಸಿದರು. ಕಾಶ್ಮೀರವನ್ನು ಭಾರತದೊಂದಿಗೆ ವಿಲೀನಗೊಳಿಸುವಂತೆ ಮಹಾರಾಜರಿಗೆ ತಿಳಿಹೇಳಿದರು. ವಿಲೀನಗೊಳಿಸಿದರೆ ಭಾರತೀಯ ಸೇನಾ ಪಡೆಯು ತಮ್ಮ ರಕ್ಷಣೆ ಬರುತ್ತದೆಂದು ಹೇಳಿದರು ಭಾರತೀಯ ಸೇನ ನೆರವಿಗೆ ಬರುವವರೆಗೆ, ಕಾಶ್ಮೀರದ ನಾಗರೀಕರೆ ಒಗ್ಗಟಿನಿಂದ ಅತಿಕ್ರಮಣಕಾರರಿಗೆ ಹಲವಾರು ದಿನಗಳವರೆಗೆ ಅಬ್ದುಲ್ಲಾರ ನೇತೃತ್ವದಲ್ಲಿ ಪ್ರತಿರೋಧ ಒಡ್ಡಿದ್ದರು.

ಕಾಶ್ಮೀರ ರಾಜ್ಯದ ಜನರ ಆ ಮಹಾನ್ ಸಾಧನೆಯು ಗಾಂಧೀಜಿಯವರ ಮೇಲೆ ತುಂಬಾ ಪ್ರಭಾವ ಬೀರಿತು. ಇದನ್ನು ಲಕ್ಷದಲ್ಲಿಟ್ಟುಕೊಂಡು 1947 ರಂದು ನವಂಬರ್ 1, ತಮ್ಮ ಪ್ರಾರ್ಥನಾ ಭಾಷಣದಲ್ಲಿ ಗಾಂಧೀಜಿಯವರು:

"ಶೇಕ್ ಅಬ್ದುಲ್ಲಾ ಮುಸ್ಲಿಂರನ್ನು ಹಾಗೂ ಮುಸ್ಲಿಮೇತರರನ್ನು ಪ್ರತಿನಿಧಿಸುತ್ತಾರೆ ಕಾಶ್ಮೀರ ನೆಲದಲ್ಲಿ ಹಿಂದೂತ್ವ ಹಾಗೂ ಇಸ್ಲಾಂ ಎರಡೂ ಅಘಾತಕ್ಕೆ ಒಳಗಾಗಿವೆ. ಈ ಎರಡೂ ತಮ್ಮ ನಿಜವಾದ ಅಂತಃ ಸತ್ವವನ್ನು ತೋರಿದರೆ ಹಾಗೂ ಒಂದೇ ದಾರಿಯಲ್ಲಿ ಸಾಗಿದರೆ ಮುಖಂಡರುಗಳಿಗೆ ಅದಕ್ಕಿಂತಲೂ ಮಿಗಿಲಾದ ಹೆಮ್ಮೆ ಇನ್ನೊಂದಿರಲಾರದು, ನನ್ನ ಏಕೈಕ ಪ್ರಾರ್ಥನೆ ಮತ್ತು ನಂಬಿಕೆಯೇನೆಂದರೆ ಕಾಶ್ಮೀರವು ಭಾರತ ಉಪ-ಖಂಡಕ್ಕೆ ಕವಿದಿರುವ ಕತ್ತಲನ್ನು ತೊಲಗಿಸುವ ಬೆಳಕಾಗಬೇಕು"

ಶೇಕ್‌ರಿಗೆ ದೊರೆತ ಪ್ರಶಂಸೆ ಇದು ಭಾರತ-ಪಾಕಿಸ್ತಾನ ವಿಭಜನೆಯಾದಾಗ ದೇಶದಾದ್ಯಂತ ತೀವ್ರವಾದ ಕೋಮು ಗಲಭೆಗಳು ಆಗುತ್ತಿದ್ದರೂ ಕಾಶ್ಮೀರದಲ್ಲಿ ಬಹುಮಟ್ಟಿಗೆ ಅದರ ಪರಿಣಾಮ ಆಗಿರಲಿಲ್ಲವೆಂಬುದು ಗಾಂಧೀಜಿಯವರು ಪ್ರಶಂಸಿದ್ದಕ್ಕೆ ಕಾರಣ. ಆ ಬಿಕ್ಕಟ್ಟಿನ ದಿನಗಳಲ್ಲಿ ಅಬ್ದುಲ್ಲಾರ ಅನುಯಾಯಿಗಳು ಹೊಳಗಿದ ಘೋಷಣೆ ಏನೆಂದರೆ "ಹಿಂದೂ, ಮುಸ್ಲಿಂ, ಸಿಖ್ ಐಕ್ಯತೆ ಇದೇ 'ಕಾಶ್ಮೀರದ ಸಿಂಹ'ದ ಸಂದೇಶ" ಇದೊಂದು ಸಕಾಲಿಕ, ಅರ್ಥಪೂರ್ಣ ಸಂದೇಶವಾಗಿತ್ತು. ಆ ಬಿಕ್ಕಟ್ಟಿನ [illegible]ರ್ಷಗಳಲ್ಲಿ ಕಾಶ್ಮೀರದಲ್ಲಿ ಕೋ[illegible] ಸೌಹಾರ್ದತೆಯನ್ನು ಉಂಟು ಮಾಡಿದ ಕೀರ್ತಿಯು [illegible]ಲ್ಲಾರಿಗೇ [illegible]ವೆ.

ಭಾರತ ಸೇನೆಯು ಅತಿಕ್ರಮಣಕಾರರನ್ನು ಕಾಶ್ಮೀರದಿಂದ ಹೊ[illegible] ಮೇಲೆ 1947ರಲ್ಲಿ ಅಕ್ಟೋಬರ್‌ನಲ್ಲಿ ಶೇಕ್ ಅಬ್ದುಲ್ಲಾರವ[illegible] ಸ್ಥಿತಿಯ [illegible]ಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡರು. ಐತಿಹಾಸಿಕ [illegible] ಲಾಲ್‌ಚೌಕ್‌ನಲ್ಲಿ [illegible] ಬೃಹತ್

ರ್‍ಯಾಲಿಯಲ್ಲಿ ನೆಹರೂರವರು ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡಲು ಶ್ರೀನಗರಕ್ಕೆ ಆಗಮಿಸಿದ್ದಾಗ ತುಂಬಿದ ಸಭೆಯಲ್ಲಿ ಅಬ್ದುಲ್ಲಾರವರು ದೇಶದ ಇತರ ಭಾಗಗಳೊಂದಿಗೆ ಕಾಶ್ಮೀರದ ಅನನ್ಯತೆಯ ಹಾಗೂ ಅವಿಭಾಜ್ಯತೆಯ ಸಂಕೇತವಾಗಿ ನೆಹರೂ ಅವರಿಗೆ ಸ್ನೇಹ ಹಸ್ತ ಚಾಚಿದರು. ಸಭೆಯಲ್ಲಿ ಅವರು ನೆಹರೂ ಅವರಿಗೆ ಹೀಗೆ ಹೇಳಿದರು.

"ಕಾಶ್ಮೀರವು ಎಂದೆಂದಿಗೂ ಭಾರತಕ್ಕೆ ಸೇರಿದ್ದು, ವಿಶ್ವದ ಯಾವುದೇ ಶಕ್ತಿ ಕಾಶ್ಮೀರವನ್ನು ಭಾರತದಿಂದ ಬೇರ್ಪಡಿಸಲು ಸಾಧ್ಯವೇ ಇಲ್ಲ. ಪ್ರತಿಯೊಬ್ಬ ಕಾಶ್ಮೀರಿಯು ತಾನು ಭಾರತೀಯನೆಂದೂ, ಭಾರತ ತನ್ನ ತಾಯ್ನೆಲವೆಂದು ಭಾವಿಸುತ್ತಾನೆ."

1948ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಸಂಯುಕ್ತ ರಾಷ್ಟ್ರಗಳ ಭದ್ರತಾ ಮಂಡಲಿಯ ಸಭೆಯಲ್ಲಿ ಭಾರತ ಪ್ರತಿನಿಧಿಯಾಗಿ ಭಾಗವಹಿಸಿದರು. ಕಾಶ್ಮೀರದ ಭವಿಷ್ಯದ ಬಗ್ಗೆ ಆ ಸಭೆಯಲ್ಲಿ ಚರ್ಚೆ ನಡೆಯಿತು. ತಮ್ಮ ಸರ್ಕಾರವೂ ಕಾನೂನು ಸಮ್ಮತ ಸರ್ಕಾರವೆಂದು ಸಮರ್ಥಿಸಿಕೊಂಡು ಜನಾಭಿಪ್ರಾಯ ಸಂಗ್ರಹಣೆಗಾಗಿ ತಟಸ್ಥ ಮಧ್ಯಂತರ ಸರ್ಕಾರದ ರಚನೆಗೆ ಮಂಡಿಸಿದ್ದ ನಿರ್ಣಯವನ್ನು ವಿರೋಧಿಸಿದರು. ಸಭೆಯನ್ನುದ್ದೇಶಿಸಿ ಅವರು ಸ್ಪಷ್ಟವಾಗಿ ಹೀಗೆ ಹೇಳಿದರು.

"ಕಾಶ್ಮೀರವು ಕಾನೂನು ಬದ್ಧರಾಗಿ ಹಾಗೂ ಸಂವಿಧಾನಾತ್ಮಕವಾಗಿ ಭಾರತ ಆಧಿಪತ್ಯದೊಂದಿಗೆ ವಿಲೀನವಾಗಿದೆಯೆಂದು ನಾವು ಭದ್ರತ ಮಂಡಳಿಯಲ್ಲಿ ಸಾಬೀತುಪಡಿಸುತ್ತೇನೆ. ಈ ವಿಲೀನವನ್ನು ಪ್ರಶ್ನಿಸುವ ಯಾವ ಅಧಿಕಾರವು ಪಾಕಿಸ್ತಾನಕ್ಕೆ ಇಲ್ಲ".

ಪ್ಯಾರಿಸ್ಸಿನಿಂದ ಹಿಂದಿರುಗಿದ ಮೇಲೆ, 1948ನೇ ಮಾರ್ಚ್ ತಿಂಗಳಿನಲ್ಲಿ ಕಾಶ್ಮೀರದ ಪ್ರಧಾನ ಮಂತ್ರಿಯಾಗಿ ಅವರು ಪ್ರಮಾಣವಚನ ಸ್ವೀಕರಿಸಿದರು. ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ಮೇಲೆ ಕಾಶ್ಮೀರದ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಂಡರು. ಕಾಶ್ಮೀರದಲ್ಲಿ ಅನಾದಿಕಾಲದಿಂದಲೂ ಬೇರೂರಿದ್ದ ಜಮೀನ್ದಾರಿ ಪದ್ಧತಿಯನ್ನು ರದ್ದಾಯಿತು. ಶ್ರೀಮಂತ ಜಮೀನ್ದಾರರು ಹೊಂದಿದ್ದ ಸ್ಥಿರಾಸ್ಥಿಗಳನ್ನು ಭೂರಹಿತ ರೈತರಿಗೆ ಹಂಚಲಾಯಿತು. ಜನರಿಗೆ ಋಣ ಪರಿಹಾರ ನೀಡಲಾಯಿತು. ವಂಶಪಾರಂಪರ್ಯ ಆಡಳಿತವನ್ನು ರದ್ದುಪಡಿಸಲಾಯಿತು.ಯುವರಾಜ ಕರಣಸಿಂಗ್‌ರನ್ನು ನಾಮಮಾತ್ರದ 'ರಾಜಪ್ರಮುಖ' ರನ್ನಾಗಿ ನೇಮಕ ಮಾಡಲಾಯಿತು.

ಅಬ್ದುಲ್ಲಾರನ್ನು 1949ರ ಜೂನ್‌ನಲ್ಲಿ ರಾಜ್ಯಾಂಗ ಸಭೆಯ ಸದಸ್ಯರನ್ನಾಗಿ ನೇಮಕ ಮಾಡಲಾಯಿತು ಮತ್ತು ಕಾಶ್ಮೀರದಿಂದ ಸಂಸತ್ ಸದಸ್ಯರನ್ನಾಗಿ ಹೆಸರಿಸಲಾಯಿತು. ರಾಜ್ಯಾಂಗ ಸಭೆಯ ಸದಸ್ಯರಾಗಿ ಅಬ್ದುಲ್ಲಾರವರು ರಾಜ್ಯಾಂಗ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು. ದೇಶದ ಇತರ ಭಾಗದಲ್ಲಿರುವ ಹಿಂದೂಗಳೂ ತಮ್ಮನ್ನು ಕಡೆಗಣಿಸಿ ಬಿಡುತ್ತಾರೆಂಬ ರಾಜ್ಯದ

ಮುಸ್ಲಿಂ ಸಮುದಾಯದ ಭಯವನ್ನು ಹೋಗಲಾಡಿಸಲು ಅಬ್ದುಲ್ಲಾ ಮತ್ತು ಅವರ ಸಂಗಡಿಗರು ಕರಡು ರಾಜ್ಯಾಂಗದಲ್ಲಿ 370ನೇ ವಿಧಿಯು ಸೇರ್ಪಡೆಯಾಗುವಂತೆ ಮಾಡಿದರು. ಜುಲೈ 1952ರಲ್ಲಿ ಶೇಕ್ ಅಬ್ದುಲ್ಲಾ ಜಮ್ಮು ಕಾಶ್ಮೀರ ರಾಜ್ಯಕ್ಕೆ ಭಾರತ ಒಕ್ಕೂಟದಲ್ಲಿ ವಿಶೇಷ ಸ್ಥಾನಮಾನ ನೀಡುವುದಕ್ಕೆ ಸಂಬಂಧಿಸಿದಂತೆ ನೆಹರೂರೊಂದಿಗೆ ಒಪ್ಪಂದ ಮಾಡಿಕೊಂಡರು.

1948ರಿಂದ 1953ರ ವರೆಗಿನ 5 ವರ್ಷಗಳ ಅವಧಿಯಲ್ಲಿ ಪ್ರಧಾನ ಮಂತ್ರಿಯಾಗಿ ಶೇಕ್ ಅಬ್ದುಲ್ಲಾ ತಮ್ಮ ರಾಜ್ಯಕ್ಕಾಗಿ ಮಾಡಿರುವ ಸಾಧನೆಗಳು ಹಲವಾರು ರಾಜ್ಯದ ಏಳಿಗೆಗಾಗಿ ಅವರು ಹಲವಾರು ಸುಧಾರಣೆಗಳನ್ನು ಜಾರಿಗೆ ತಂದರು. ಜಾಗೀರ್‌ದಾರಿ ಮತ್ತು ಜಮೀನ್ದಾರಿ ಪದ್ಧತಿಗಳನ್ನು ನಿರ್ಮೂಲನೆ, ದೊಡ್ಡ ಜಮೀನು, ರದ್ಧಯಾತಿ, ಭೂರಹಿತ ರೈತರಿಗೆ, ಭೂಮಿ ವರ್ಗಾವಣೆ ಭೂ ಪರಿಮಿತಿ ನಿಗದಿ ಋಣ ವಿಮೋಚನೆ, ಶೈಕ್ಷಣಿಕ ಸಂಸ್ಥೆಗಳ ಪುನರ್ ಸಂಘಟನೆ, ಜಮ್ಮು ಮತ್ತು ಕಾಶ್ಮೀರ ಭಾರತದೊಂದಿಗೆ ವಿಲೀನವಾಗಿದ್ದರ ಬಗ್ಗೆ ಮತ್ತು ಭಾರತ ಒಕ್ಕೂಟದಲ್ಲಿ ಅದರ ಸ್ಥಾನ ಮಾನದ ಬಗ್ಗೆ 1953ರ ಹೊತ್ತಿಗೆ ಅಬ್ದುಲ್ಲಾರ ದೃಷ್ಟಿಕೋನದಲ್ಲಿ ಬದಲಾವಣೆ ಕಂಡು ಬರತೊಡಗಿತು. 1953ರವರೆಗೂ ಅಬ್ದುಲ್ಲಾರಿಗೆ ಭಾರತದ ಬಗ್ಗೆ ಭಾರತೀಯ ನಾಯಕರುಗಳ ಬಗ್ಗೆ, ಕಾಶ್ಮೀರ ಕುರಿತಂತೆ ಭಾರತ ನೀತಿಯ ಬಗ್ಗೆ ಹೊಂದಿದ ಪ್ರಾಮಾಣಿಕತೆ ಅಥವಾ ಆಶಯಗಳ ಬಗ್ಗೆ ಯಾರೂ ಸಂಶಯಪಡುವಂತಿರಲಿಲ್ಲ, ಕಾಶ್ಮೀರವು ಭಾರತದೊಂದಿಗೆ ಏಕೆ ಸೇರ್ಪಡೆಯಾಯಿತೆಂಬ ಬಗ್ಗೆ 1951ರ ಜನವರಿ 25 ರಂದು ಮುಂಬಯಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ ಹೀಗೆ ಹೇಳಿದರು.

"ಕಾಶ್ಮೀರವು ಜಾತ್ಯತೀತ ಪ್ರಜಾಪ್ರಭುತ್ವಕ್ಕೊಳಪಡದಿದ್ದರೆ ತಮ್ಮ ಏಳಿಗೆ ಅಸಾಧ್ಯ ಎಂದು ಕಾಶ್ಮೀರದ ಜನರಿಗೆ ಗೊತ್ತಿತ್ತು. ಭಾರತ ಜನತೆ ಕಾಶ್ಮೀರದ ಜನರಿಗೆ ಪ್ರೀತಿ, ಕರುಣೆ ಮತ್ತು ಎಲ್ಲಾ ಬಗೆಯ ಸಹಾಯ ನೀಡಿದ್ದಾರೆ."

1951ರ ಫೆಬ್ರವರಿ 11 ರಂದು ಮದ್ರಾಸ್‌ನ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ ಹೀಗೆ ಹೇಳಿದರು:

"ಕಾಶ್ಮೀರದ ಜನ ಹಾಗೂ ಭಾರತದ ಜನತೆ ನಡುವೆ ನೋವು ನಲಿವುಗಳಲ್ಲಿ ಸಾಮ್ಯ ಇದೆ. ಭಾರತವೂ ಜಾತ್ಯತೀತತೆ, ಪ್ರಜಾಪ್ರಭುತ್ವ ಮತ್ತು ಅಭಿವೃದ್ಧಿ ಬಗ್ಗೆ ಇಟ್ಟು ಕೊಂಡಿರುವ ನಂಬಿಕೆಯ ಕಾರಣ ನಾವು ಭಾರತದೊಂದಿಗೆ ನಮ್ಮ ಭವಿಷ್ಯವನ್ನು ಬೆಸುಗೆ ಹಾಕಿದ್ದೇವೆ."

ರಾಜ್ಯದ ಹಿತಾಸಕ್ತಿಗೆ ಅಥವಾ ರಾಷ್ಟ್ರದ ಹಿತಾಸಕ್ತಿಗೆ ಅನುಗುಣವಲ್ಲದ ಕೆಲವೊಂದು ಕಾರ್ಯಗಳಿಂದಾಗಿ ಅವರು ಕಾರಾ ವಾಸದಲ್ಲಿದ್ದ ಕಾರಣ, ದುರದೃಷ್ಟವಶಾತ್ 1953 ರಿಂದ 1964 ರವರೆಗೆ ಸುಮಾರು ಒಂದು ದಶಕದವರೆಗೆ ಅಬ್ದುಲ್ಲಾರವರ ನಾಯಕತ್ವದ ಪ್ರಯೋಜನ ಕಾಶ್ಮೀರಕ್ಕೆ ಲಭಿಸಲಿಲ್ಲ.

ಹಲವಾರು ವರ್ಷಗಳವರೆಗೆ ಸೆರೆವಾಸವನ್ನು ಅನುಭವಿಸಿದರೂ ಶೇಕ್‌ರವರಲ್ಲಿ ಆಳವಾದ ರಾಷ್ಟ್ರೀಯ ಪ್ರಜ್ಞೆ ಇದ್ದುದರಿಂದ ಅವರು ಕಠೋರ ವ್ಯಕ್ತಿಯಾಗಿ ಮಾರ್ಪಡಲಿಲ್ಲ. ಬಿಡುಗಡೆಯ ನಂತರ ಮತ್ತೆ ಸಾರ್ವಜನಿಕರ ಸೇವೆಗೆ ತೊಡಗಿದರು. ಮತ್ತು ನಾಯಕತ್ವ ವಹಿಸಿದ್ದರು. ಭಾರತ ಮತ್ತು ಪಾಕಿಸ್ತಾನ ನಡುವೆ ಸ್ಥೂಲವಾದೊಂದು ಪುನರ್ ದೃಷ್ಟಿಕೋನದ ಚೌಕಟ್ಟಿನಲ್ಲಿ ಒಂದು ಅಂತಿಮ ಪರಿಹಾರದ ಅಗತ್ಯವನ್ನು ಅವರು ಮನಗಂಡಿದ್ದರು. ಕಾಶ್ಮೀರದ ಕಣಿವೆಯ ಭಾಷಾ ಹಾಗೂ ಸಾಂಸ್ಕೃತಿಕ ಸ್ವಂತಿಕೆಯನ್ನು ಸಂರಕ್ಷಿಸುವುದು ಅವರ ಕಾಳಜಿಯಾಗಿತ್ತು. ಮುಸ್ಲಿಂ-ಪಾಕಿಸ್ತಾನಕ್ಕಿಂತಲೂ ಹಿಂದೂ ಪ್ರಧಾನ ಭಾರತದಲ್ಲಿ ಮಾತ್ರವೆ ಮುಸ್ಲಿಂ ಕಾಶ್ಮೀರದ ಸ್ವಂತಿಕೆ ಉಳಿಸಿಕೊಳ್ಳುವುದು ಸಾಧ್ಯವೆಂದು ಅವರು ನಂಬಿದ್ದರು. ಪಾಕಿಸ್ತಾನಗಳ ನಡುವೆ ನಿಕಟ ಸಂಬಂಧ ಇರಬೇಕೆನ್ನುವ ಮತ್ತು ಕಾಶ್ಮೀರದ ಜನರು ಯಾವಾಗಲೂ ಶಾಂತಿಯಿಂದಿರಬೇಕೆನ್ನುವ ಅವರ ಕಳಕಳಿ ಈಡೇರುವಂತಿರಲಿಲ್ಲ.

1964ರಲ್ಲಿ ತಮ್ಮ ಬಿಡುಗಡೆಯಾದಾಗ, ಹೊಸ ದೃಷ್ಟಿಯನ್ನಿಟ್ಟುಕೊಂಡು ದೆಹಲಿಗೆ ತೆರಳಿ ನೆಹರೂಜಿ ಮತ್ತಿತರ ಮುಖಂಡರನ್ನು ಭೇಟಿಯಾದರು. ಭಾರತ ಸರ್ಕಾರವು ಇವರಿಗೆ ಪಾಕಿಸ್ತಾನದ ಭೇಟಿಗೂ ಅವಕಾಶ ಮಾಡಿಕೊಟ್ಟಿತು. 1964ನೇ ಇಸವಿ ಜೂನ್ 16ರಂದು ನೆಹರೂಜಿ ಮತ್ತು ಅಧ್ಯಕ್ಷ ಅಯೂಬ್ ಖಾನ್‌ರವರ ಭೇಟಿಗೆ ವ್ಯವಸ್ಥೆ ಮಾಡಿದ್ದರು, ಆದರೆ ನೆಹರೂರವರ ಆಕಸ್ಮಿಕ ಮರಣದಿಂದಾಗಿ ಅವರ ಆಶೆ ಈಡೇರಲಿಲ್ಲ. ನೆಹರೂರವರ ಸಾವಿನ ಸುದ್ದಿ ಅಬ್ದುಲಾರಿಗೆ ಅವರು ಪಾಕಿಸ್ತಾನದಲ್ಲಿದ್ದಾಗಲೇ ತಿಳಿದಾಗ ಅವರು ಮಕ್ಕಳಂತೆ ಬಿಕ್ಕಿ ಬಿಕ್ಕಿ ಅತ್ತರು. ತಮ್ಮ ನೆಚ್ಚಿನ, ತಮ್ಮ ರಾಜಕೀಯ ಬದುಕಿನ ಸ್ಫೂರ್ತಿಯ ಚಿಲುಮೆಯಾಗಿದ್ದ ನೆಹರೂಜಿಯವರ ಮರಣವು ಅಬ್ದುಲ್ಲಾರಿಗೆ ಭರಿಸಲಾಗದ ದುಃಖವನ್ನುಂಟು ಮಾಡಿತು.

ನೆಹರೂಜಿಯವರ ಮರಣದ ನಂತರ 1965ರಲ್ಲಿ ಅವರು 'ಮಕ್ಕಾಯಾತ್ರೆಗೆ' ತೆರಳಿದರು. ಹಿಂದಿರುಗುವಾಗ, ಜೆಡ್ಡಾ, ಬಾಗ್‌ದಾದ್, ಕೈರೋ, ಲಂಡನ್ ಮತ್ತು ಅಲ್ಜೀರ್ಸ್ ದೇಶಗಳಿಗೂ ಭೇಟಿ ನೀಡಿದರು. ಈ ಎಲ್ಲಾ ಸ್ಥಳಗಳಲ್ಲಿ ಅವರು ಮಾಡಿದ ಭಾಷಣಗಳಲ್ಲಿ ಭಾರತ ವಿರೋಧಿ ಛಾಯೆ ನುಸುಳಿದ್ದುದು ಕಂಡು ಬಂದಿತು. ಅಲ್ಜೇರ್‌ನಲ್ಲಿ ಚೀನಾದ ಮುಖಂಡ ಚೌ-ಎನ್-ಲೈಯವರನ್ನು ಭೇಟಿಯಾಗಿ ಅವರೊಂದಿಗೆ ಸುದೀರ್ಘವಾಗಿ ಚರ್ಚೆ ನಡೆಸಿದರು. 60ರ ದಶಕದಲ್ಲಿ ಚೈನಿಯರು ಭಾರತದ ಮೇಲೆ ಆಕ್ರಮಣ ಮಾಡಿದರ ಹಿನ್ನೆಲೆಯಲ್ಲಿ ಗಮನಿಸಿದ ಭಾರತ ಸರ್ಕಾರವು ಶೇಕ್‌ರನ್ನು ಬಂಧಿಸಿ ಅವರ ಪಾಸ್ ಪೋರ್ಟ್ ಅನ್ನು ಹಿಂದಕ್ಕೆ ಪಡೆಯಿತು. ಶೇಕ್‌ರವರನ್ನು ತಮಿಳುನಾಡಿನಲ್ಲಿರುವ ಕೊಡೈಕೆನಾಲ್‌ನ ಕೊಹಿನೂರ್ ಅರಮನೆಯಲ್ಲಿ ಸೆರೆಯಲ್ಲಿಡಲಾಯಿತು. 1968ರ ಜನವರಿಯಲ್ಲಿ ಬಿಡುಗಡೆ ಮಾಡಲಾಯಿತು.

ಇವರ ಬಿಡುಗಡೆಯ ನಂತರ, ಜಮ್ಮು ಅಂಡ್ ಕಾಶ್ಮೀರ್ ಸ್ಟೇಟ್ ಪೀಪಲ್ಸ್ ಕಾನ್‌ಫರೆನ್ಸ್ ಇವರ ನಾಯಕತ್ವದಲ್ಲಿ ಎರಡು ವರ್ಷಗಳಿಗೂ ಮೀರಿ ಚರ್ಚಿಸಿ ಕಾಶ್ಮೀರ ಸಮಸ್ಯೆಯ ಪರಿಹಾರದಲ್ಲಿ, ಎಲ್ಲಾ ಪ್ರಾಂತ್ಯಗಳ ಹಿತದೃಷ್ಟಿ ಜಾತ್ಯಾತೀತ ಮತ್ತು ಜನತಂತ್ರ ಶಕ್ತಿಗಳ ಒಗ್ಗಟ್ಟು ಒಳಗೊಂಡಿರಬೇಕು ಮತ್ತು ಅದುಸ್ವಾತಂತ್ರ ಚಳುವಳಿಯ ಕಾಲವಿಲ್ಲದ್ದು ಮೌಲ್ಯಗಳಿಗೆ ಅನುಸಾರವಾಗಿರಬೇಕು. ಆದರೆ, 1971ರಲ್ಲಿ ಭಾರತ-ಪಾಕಿಸ್ತಾನಗಳ ನಡುವಣ ಯುದ್ಧದ ನಂತರ ಶೇಕ್‌ರವರು ವ್ಯಕ್ತ ಪಡಿಸಿದ ಅಭಿಪ್ರಾಯಗಳ ಕಾರಣ ಭಾರತ ಸರ್ಕಾರವು 1971ರ ಜನವರಿಯಲ್ಲಿ ಅವರನ್ನು ಕಾಶ್ಮೀರದಿಂದ ಹೊರಗೆ ಕಳುಹಿಸಿತು.

ಯುದ್ಧದ ನಂತರ ಭಾರತದ ಬಗ್ಗೆ ಅಬ್ದುಲ್ಲಾರ ಧೋರಣೆ ಮತ್ತೆ ಬದಲಾವಣೆಯಾಯಿತು. 1971ರಲ್ಲಿ ಬಾಂಗ್ಲಾದೇಶದ ಉದಯವಾಯಿತು. ಆದುದರಿಂದ ಪಾಕಿಸ್ತಾನದ ಮತೀಯ ಅಸ್ತಿವಾರದ ಭ್ರಮನಿರಸನ ಆಯಿತು. ಕಾಶ್ಮೀರವು ಭಾರತದ ಒಂದು ಭಾಗವಾಗಿ ಉಳಿದುಕೊಂಡಾಗ ಮಾತ್ರವೇ ಕಾಶ್ಮೀರದ ಅಭಿವೃದ್ಧಿ ಸಾಧ್ಯವೆಂಬ ಅರಿವು ಶೇಕ್‌ರಲ್ಲಿ ಮೂಡಿತು. ಭಾರತ ಸರ್ಕಾರದೊಂದಿಗೆ ತಮ್ಮ ಜಗಳ ವಿಲೀನ ಕುರಿತಂತೆ ಅಲ್ಲ, ಭಾರತದಲ್ಲಿ ಕಾಶ್ಮೀರದ ಸ್ವಯತ್ತತೆ ಬಗ್ಗೆ ಮಾತ್ರ ಎಂದು ಘೋಷಿಸಿದರು.

ಈ ಹೇಳಿಕೆಯ ಆಧಾರದ ಮೇಲೆ, ಶೇಕರ್‌ರ ಮತ್ತು ಭಾರತದ ಸರ್ಕಾರದ ನಡುವೆ ಸುದೀರ್ಘ ಚರ್ಚೆ ನಡೆಯಿತು. 1975ರಲ್ಲಿ ಶೇಕ್ ಅಬ್ದುಲ್ಲಾ ಮತ್ತು ಭಾರತದ ಪ್ರಧಾನಿ ಇಂದಿರಾ ಗಾಂಧಿಯವರ ನಡುವೆ ಹೊಸ ಒಪ್ಪಂದ ಆಯಿತು.

ಈ ಒಪ್ಪಂದದ ಪ್ರಕಾರ ಶೇಕ್ ಅಬ್ದುಲ್ಲಾರು ಕಾಶ್ಮೀರವು, ಭಾರತ ಒಕ್ಕೂಟದಲ್ಲಿ ಅಂತಿಮವಾಗಿ ವಿಲೀನಗೊಂಡಿದೆಯೆಂಬುದನ್ನು ಒಪ್ಪಿಕೊಂಡರು. ಕಾಶ್ಮೀರಕ್ಕೆ ಸಂಧಾನದ 370ನೇ ವಿಧಿಯ ಮೇರೆಗೆ ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಅವಕಾಶ ನೀಡಬೇಕೆಂದು ಇನ್ನು ಮುಂದೆಯು ಇರುತ್ತದೆ ಭಾರತ ಸರ್ಕಾರವು ಭರವಸೆ ನೀಡಿತು. 1953ಕ್ಕೂ ಮುಂಚೆ ಇದ್ದಂತಹ ಸ್ಥಿತಿಗೆ ಉಭಯ ಪಕ್ಷಗಳು ಮರಳಿದವು. 1975ರಲ್ಲಿ ಶೇಕ್ ಸಾಹೇಬ್‌ರವರು ಕಾಂಗ್ರೆಸ್ ಶಾಸಕಾಂಗ ಪಕ್ಷದ ಬೆಂಬಲದಿಂದ ಕಾಶ್ಮೀರದ ಮುಖ್ಯಮಂತ್ರಿಯಾದರು. 1977 ರಲ್ಲಿ ಕಾಂಗ್ರೆಸ್ ಪಕ್ಷವು ಸೋಲನ್ನು ಅನುಭವಿಸಿದಾಗ, ರಾಜ್ಯದ ಶಾಸನ ಸಭೆಯನ್ನು ವಿಸರ್ಜಿಸಿ, ನ್ಯಾಷನಲ್ ಕಾನ್‌ಫೆರೆನ್ಸ್ ಎಂಬ ಹೆಸರಿನ ತಮ್ಮ ಪಕ್ಷದ ಹೆಸರಲ್ಲಿ ಚುನಾವಣೆಗೆ ನಿಂತು ರಾಜ್ಯದ ಮುಖ್ಯಮಂತ್ರಿಗಳಾಗಿ ಮತ್ತೆ ಅಧಿಕಾರ ವಹಿಸಿಕೊಂಡರು. ಮೃತರಾಗುವುದಕ್ಕೆ ಮುಂಚಿನ ಕೆಲವು ದಿನಗಳಲ್ಲಿ ಮುಖ್ಯಮಂತ್ರಿಯ ಜವಾಬ್ದಾರಿಯನ್ನು ತಮ್ಮ ಹಿರಿಯ ಮಗನಾದ ಫಾರೂಕ್ ಅಬ್ದುಲ್ಲಾ ಅವರಿಗೆ ವಹಿಸಿಕೊಡುವವರೆಗೂ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಿದ್ದರು.

1982ರಲ್ಲಿ ಸೆಪ್ಟೆಂಬರ್ 8ರಂದು ಕಾಶ್ಮೀರದ ಮಣ್ಣಿನ ಮಗ, ಕಾಶ್ಮೀರದ ಹೆಮ್ಮೆಯ ಪುತ್ರ ಶೇಕ್ ಅಬ್ದುಲ್ಲಾರವರು ನಿಧನರಾದರು. ಕಾಶ್ಮೀರ ನಿಮಗೆ ಸೇರಿದ್ದು ಮಹಾರಾಜರಿಗಲ್ಲ ಎಂದು ಘರ್ಜಿಸಿದ ಮತ್ತು ಬಲವಾಗಿ ಬೇರೂರಿದ ಊಳಿಗಮಾನ್ಯ ಪದ್ಧತಿಯನ್ನು ಕಿತ್ತೊಗೆದು ಸಮಾಜವಾದಿ ರೂಪ ಕೊಡಲು ಶ್ರಮಿಸಿದ್ದ "ಕಾಶ್ಮೀರದ ಸಿಂಹ" ಇನ್ನಿಲ್ಲವಾದರು.

ಅಲ್ಪಸಂಖ್ಯಾತರಿಗೆ ರಾಜ್ಯದಲ್ಲಿ ಎಲ್ಲಾ ರೀತಿಯ ರಕ್ಷಣೆ ನೀಡುವುದು ತಮ್ಮ ಪವಿತ್ರ ಕರ್ತವ್ಯ ಎಂದು ತಿಳಿದಿದ್ದರು. ಕೋಮು ಉದ್ರಿಕ್ತತೆಯ ಸಮಯದಲ್ಲಿ ಭಾವೋದ್ರೇಕಕ್ಕೆ ಒಳಗಾಗದೆ ಸಮಸ್ಯೆ ಪರಿಹಾರಕ್ಕೆ ಮುಂದಾಗುತ್ತಿದ್ದರು. ಇಸ್ಲಾಂ ಹೆಸರಿನಲ್ಲಿ ಕಾಶ್ಮೀರದ ಸ್ವಂತಿಕೆಯನ್ನು ಉಳಿಸಿಕೊಳ್ಳಲು ಜೀವನದುದ್ದಕ್ಕೂ ಶ್ರಮಿಸಿದರು. "ಮೊದಲಿಗೂ ಮುಸ್ಲಿಂ-ಕೊನೆಗೂ ಮುಸ್ಲಿಂ ಆಗಿದ್ದರು."

ಅಬ್ದುಲ್ಲಾರವರು ಧೀರ್ಘಕಾಲ ಬಂಧನದಲ್ಲಿದ್ದರೂ ಕೂಡ ಜಾತ್ಯತೀತ ತತ್ವಕ್ಕೆ ಬದ್ಧರಾಗಿದ್ದರು. ಆಗಾಗ ಪ್ರಕ್ಷುಬ್ಧ ಘಟನೆಗಳು ಸಂಭವಿಸಿದರೂ ಭಾರತದೊಂದಿಗೆ ಕಾಶ್ಮೀರದ ವಿಲೀನ ಅಚಲವೆಂದೇ ಹೇಳುತ್ತಿದ್ದರು.

ಕಾಶ್ಮೀರದ ರಾಜಕೀಯ ಜಾತ್ಯತೀತ ತರಲು ಶ್ರಮಿಸಿದ್ದು ಮತ್ತು ಪ್ರಗತಿ ವಿರೋಧಿಗಳನ್ನು ಹತ್ತಿಕ್ಕಿ ಜನಪ್ರಿಯ ಆಂದೋಲನದ ನಾಯಕತ್ವ ವಹಿಸಿದ್ದು ಶೇಕ್‌ರ ಪರಮೋಚ್ಚ ಸಾಧನೆಯಾಗಿ ಇತಿಹಾಸದಲ್ಲಿ ಸ್ಥಾನ ಪಡೆಯುತ್ತದೆ. ಅವರ ಉಜ್ವಲ ವ್ಯಕ್ತಿತ್ವವು ರಾಜ್ಯದಲ್ಲಿನ ವಿಭಿನ್ನ ಪ್ರಾಂತೀಯ ಹಾಗೂ ಮತೀಯ ಆಶೋತ್ತರಗಳ ಮತ್ತು ಭಾರತೀಯ ರಾಷ್ಟ್ರೀಯತೆ ಜೊತೆಯಲ್ಲೆ ಕಾಶ್ಮೀರದ ಉಪ ರಾಷ್ಟ್ರೀಯತೆಯ ಆಶೋತ್ತರಗಳ ನಡುವೆ ಸಾಮರಸ್ಯವನ್ನು ಮೂಡಿಸಿತು. ಕಾಶ್ಮೀರವು ತನ್ನ ಪ್ರತ್ಯೇಕತೆಯನ್ನು ಬಿಟ್ಟು ಕೊಡುವುದನ್ನು ಅವರು ಒಪ್ಪದ ಕಾರಣ ಅವರು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಇರಬೇಕೆಂದು ಒತ್ತಾಯಿಸುತ್ತಿದ್ದರು. 1947ರಲ್ಲಿ ಭಾರತೀಯ ಸೈನಿಕರು ಕಾಶ್ಮೀರಕ್ಕೆ ಬರುವವರೆಗೂ ಪಾಕಿಸ್ತಾನದ ಅತಿಕ್ರಮಣಕಾರರ ವಿರುದ್ಧ ಶಸ್ತ್ರಾಸ್ತ್ರಗಳಿಲ್ಲದ ಕಾಶ್ಮೀರಿ ಯುವಕರನ್ನು ಸಂಘಟಿಸಿದ್ದೂ ಚಿರಸ್ಮರಣೀಯ.

ಜಮ್ಮು ಮತ್ತು ಕಾಶ್ಮೀರದ ಜನರ ಪಾಲಿಗೆ ಅಬ್ದುಲ್ಲಾರವರು ಅತ್ಮೀಯ ಸ್ನೇಹಿತ, ಮಾರ್ಗದರ್ಶಿಕ, ಮತ್ತು ಉನ್ನತ ವಿಚಾರಗಳನ್ನೊಳಗೊಂಡ ದಾರ್ಶನಿಕ ಎಲ್ಲವೂ ಆಗಿದ್ದರು.

ಅವರ ವ್ಯಕ್ತಿತ್ವ ಉಜ್ವಲವಾದುದಾಗಿತ್ತು. ನಮ್ಮ ದುರದೃಷ್ಟವೋ ಏನೋ, ಜಮ್ಮು ಮತ್ತು ಕಾಶ್ಮೀರವು ಅನೇಕ ಸಾಮಾಜಿಕ ಹಾಗೂ ರಾಜಕೀಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾಗಲೇ ಭಾರತದಿಂದ ಪ್ರತ್ಯೇಕಿಸುತ್ತದೆ ಎನ್ನುವ ದೃಷ್ಟಿಯಿಂದ ನೋಡದೆ, ಅದನ್ನು ಸ್ನೇಹಮಯ ಮತ್ತು ಬಾಂಧವ್ಯದ ಸಂಕೇತವೆಂದು ಶೇಕ್ ಅಬ್ದುಲ್ಲಾ ಭಾವಿಸಿದ್ದರು.

ಇಂದು ದೇಶ ಕೋಮು, ಪ್ರಾದೇಶಿಕ ಗುಂಪುಗಾರಿಕೆಯಿಂದ ತತ್ತರಿಸುತ್ತಿದೆ. ಜಮ್ಮು ಮತ್ತು ಕಾಶ್ಮೀರವು ಸೇರಿದಂತೆ ಯಾವುದೇ ರಾಜ್ಯವಾಗಿರಲಿ, ಅದು, ಸ್ಥಿರತೆಗೊಳಿಸುವ ಶಕ್ತಿಗಳ ತಾಣವಾಗುತ್ತಿದೆ. ಐದು ದಶಕಗಳಿಗೂ ಹೆಚ್ಚು ಕಾಲ ಕಾಶ್ಮೀರದ ಜನರ ಏಳಿಗಾಗಿ ಮತ್ತು ಕಾಶ್ಮೀರದ ಸ್ವಂತಿಕೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಏಕಾಗ್ರತೆಯಿಂದ ಶ್ರಮಿಸಿದ ಈ ಮಹಾನ್ ದೇಶಭಕ್ತನಿಗೆ, ರಾಷ್ಟ್ರ ವಿರೋಧಿ ಶಕ್ತಿಗಳನ್ನು ಹತ್ತಿಕ್ಕಿ ಕಾಶ್ಮೀರವನ್ನು ರಾಷ್ಟ್ರದ ಮುಖ್ಯ ವಾಹಿನಿಗೆ ತರುವ ಮೂಲಕ ನಾವು ಶ್ರದ್ಧಾಂಜಲಿ ಅರ್ಪಿಸಬೇಕು ಅವರು, ರಾಷ್ಟ್ರಕ್ಕೆ ಅಲ್ಲ, ನಿಸ್ಸಂದೇಹವಾಗಿ ಜಮ್ಮುಮತ್ತು ಕಾಶ್ಮೀರದ ಉಜ್ಜಲ ಮಿನುಗುತಾರೆ.

313.4

ಅಕರ ಲೇಖನಗಳು

ಶೇಕ್ ಮಹಮ್ಮದ್ ಅಬ್ದುಲ್ಲಾ	:	ಜಮ್ಮ ಮತ್ತು ಕಾಶ್ಮೀರದ ಶಾಸನ ಸಭೆ: ಉದ್ಘಾಟನಾ ಭಾಷಣ (ಶ್ರೀನಗರ, 1951)
ಅಬ್ದುಲ್ಲಾ : ಶೇಕ್ ಮಹಮ್ಮದ್	:	ಕಾಶ್ಮೀರದ ಮನವಿ (ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಭಾಷಣ ಫೆಬ್ರವರಿ 5, 1948)
ಭಾಸ್ಕರಾನಂದ	:	ಕಾಶ್ಮೀರ್ ಕೌಲಡ್ರಿನ್ (ಶಿಮ್ಲಾ, 1956)
ಸೆಕ್ಸೆನಾ ಹೆಚ್.ಟಿ	:	ಕಾಶ್ಮೀರದ ದುರಂತ (ಹೊಸ ದೆಹಲಿ, 1968)
ವಶಿಷ್ಠ್, ಸತೀಶ್	:	ಶೇಕ್ ಅಬ್ದುಲ್ಲಾ ಅಂದು ಮತ್ತು ಇಂದು (ಹೊಸದೆಹಲಿ 1968)
ದ, ಟೈಮ್ಸ್ ಆಫ್ ಇಂಡಿಯಾ	:	9ನೇ, 10ನೇ ಮತ್ತು 19ನೇ ಸೆಪ್ಟೆಂಬರ್ 1982 (ಹೊಸದೆಹಲಿ)
ದ ಹಿಂದೂಸ್ಥಾನ್ ಟೈಮ್ಸ್	:	9ನೇ ಮತ್ತು 10ನೇ ಸೆಪ್ಟೆಂಬರ್ 1982 (ಹೊಸದೆಹಲಿ)
ದ ಪೆಟ್ರಿಯಾಟ್	:	9ನೇ ಮತ್ತು 10ನೇ ಸೆಪ್ಟೆಂಬರ್ 1982 (ಹೊಸದೆಹಲಿ)
ದ ಇಂಡಿಯನ್ ಎಕ್ಸ್‌ಪ್ರೆಸ್	:	9ನೇ ಮತ್ತು 10ನೇ ಸೆಪ್ಟೆಂಬರ್ 1982 (ಹೊಸದೆಹಲಿ)
ದ ಟೈಮ್ಸ್ (ಲಂಡನ್)	:	10ನೇ ಸೆಪ್ಟೆಂಬರ್ 1982

ಭಾಗ - 2

ಶೇಕ್ ಅಬ್ದುಲ್ಲಾ

ಸಮಕಾಲೀನರು ಕಂಡಂತೆ

ಕಾಶ್ಮೀರದ ಕೇಸರಿ ಅಬ್ದುಲ್ಲಾ

- ಡಾ. ಸುಶೀಲಾ ನಯ್ಯರ್ *

ಕಾಶ್ಮೀರದ ಕೇಸರಿಯೆಂದೆ ಜನಪ್ರಿಯರಾಗಿದ್ದ ಶೇಕ್ ಅಬ್ದುಲ್ಲಾರವರು ಶ್ರೀನಗರದ ಸಮೀಪದ ಹಳ್ಳಿಯೊಂದರಲ್ಲಿ ಶಾಲು ವ್ಯಾಪಾರ ಮಾಡುತ್ತಿದ್ದ ಕುಟುಂಬದಲ್ಲಿ 1905ರಂದು ಜನಿಸಿದರು. ತಮ್ಮ ಜನನಕ್ಕೆ ಇನ್ನು ಕೆಲವು ವಾರಗಳಿರುವಾಗಲೆ ಶೇಕ್ ಸಾಹೇಬ್ ತಂದೆಯನ್ನು ಕಳೆದುಕೊಂಡರು. ತಾಯಿ ಮತ್ತು ಅಣ್ಣಂದಿರ ಆರೈಕೆಯಲ್ಲಿ ಬೆಳೆದರು.

ಇವರ ಶಾಲಾ ವಿದ್ಯಾಭ್ಯಾಸ ಮತ್ತು ಪ್ರಾರಂಭಿಕ ಕಾಲೇಜು ವಿದ್ಯಾಭ್ಯಾಸವು ಶ್ರೀನಗರದಲ್ಲಿ ನಡೆಯಿತು. ಉನ್ನತ ವ್ಯಾಸಂಗಕ್ಕಾಗಿ ಶೇಕ್ ರವರನ್ನು ಲಾಹೋರ್ ಹಾಗೂ ಅಲಿಘರ್ ವಿಶ್ವವಿದ್ಯಾನಿಲಯಕ್ಕೆ ಸೇರಿಸಲಾಯಿತು. 1930ರಲ್ಲಿ ಅಲಿಘರ್ ಮುಸ್ಲಿಂ ವಿಶ್ವವಿದ್ಯಾನಿಲಯದಿಂದ ಎಂ.ಎಸ್‌ಸಿ ಪದವಿ ಪಡೆದು ಅಧ್ಯಾಪಕ ವೃತ್ತಿಯಲ್ಲಿ ತೊಡಗಿದರು. ಆದರೆ ಭೋಧನಾ ವೃತ್ತಿಯು ಅವರ ಮನಸ್ಸಿಗೆ ಒಗ್ಗಲಿಲ್ಲ, ರಾಜ ಹರಿಸಿಂಗ್‌ನ ಡೋಗ್ರ ಆಳ್ವಿಕೆಯಲ್ಲಿ ಕಾಶ್ಮೀರಿ ಕಣಿವೆಯ ಮುಸ್ಲಿಂ ಜನರು ಅನುಭವಿಸುತ್ತಿದ್ದ ಸಂಕಟಗಳನ್ನು ಗಮನಿಸಿದ್ದರು. ನಿರಂಕುಶ ಆಳ್ವಿಕೆಯಲ್ಲಿ ಜನರಿಗೆ ಯಾವುದೇ ಸವಲತ್ತು, ಉದ್ಯೋಗಾವಕಾಶಗಳಿರಲಿಲ್ಲ ಇದು ಸ್ವತಃ ಶೇಕ್ ರ ಅನುಭವಕ್ಕೆ ಬಂದ ಸಂಗತಿ. ಪದವಿಧರರಾದ ಅಬ್ದುಲ್ಲಾ ತಮ್ಮ ರಾಜ್ಯದ ಸಾರ್ವಜನಿಕ ಆಡಳಿತದಲ್ಲಿ ಸೇವೆ ಸಲ್ಲಿಸುವ ಆಪೇಕ್ಷೆಯಿಂದ ಮನವಿ ಸಲ್ಲಿಸಿದ್ದರು. ಆದರೆ ಉದ್ಯೋಗ ಸಿಗಲಿಲ್ಲ, ಸರ್ಕಾರದ ಉನ್ನತ ಅಧಿಕಾರವನ್ನು ಪಂಜಾಬಿಗಳಿಗೆ ಮೀಸಲಾಗಿಡಲಾಗಿತ್ತು ಮತ್ತು ಸೈನಿಕ ಖಾತೆಯಲ್ಲಿ ಡೋಗ್ರಾರವರಿಗೆ ಮಾತ್ರವೇ ಅಧಿಕಾರ ಉದ್ಯೋಗಗಳನ್ನು ನೀಡಲಾಗುತ್ತಿತ್ತು. ಕಾಶ್ಮೀರಿಯನ್ನರಿಗೆ ಅವರು ಹಿಂದೂಗಳಾಗಲಿ ಅಥವಾ ಮುಸಲ್ಮಾನರಾಗಲಿ ಅಥವಾ ಲಡಕ್‌ನ ಜನತೆಗಾಗಲಿ ಸರ್ಕಾರಿ ಸೇವೆಯಲ್ಲಿ ಪ್ರವೇಶವಿರಲಿಲ್ಲ. ಉದ್ಯೋಗಾವಕಾಶಗಳಿರಲಿಲ್ಲ, ಈ ಎಲ್ಲಾ ದೌರ್ಜನ್ಯಗಳ ವಿರುದ್ಧ ಸಾರ್ವಜನಿಕರ ಸೇವೆಗೆ ಸಾಮಾಜಿಕ ಕರೆಗೆ ಓಗೊಟ್ಟು ಶೇಕ್‌ರವರು ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಶೇಕ್ ಅಬ್ದುಲ್ಲಾರವರು ತಮ್ಮೊಂದಿಗೆ ಅಲಿಘರ್ ಮುಸ್ಲಿಂ ವಿಶ್ವವಿದ್ಯಾನಿಲಯದ ಯುವಕರನ್ನು ಸಂಘಟಿಸಿ ಕಾಶ್ಮೀರದ ವಿದ್ಯಮಾನಗಳ ಬಗ್ಗೆ ಚಿಂತನೆ ನಡೆಸಿದರು ಮತ್ತು ತಮ್ಮ ರಾಜ್ಯದಲ್ಲಿ ತಮ್ಮವರಿಗಾಗುತ್ತಿದ್ದ ಅನ್ಯಾಯ, ಶೋಷಣೆಗಳ ವಿರುದ್ಧ ಅಂದೋಳನ ನಡೆಸಲು ಯೋಚಿಸಿದರು. ಆದರೆ ಇದು ಅಷ್ಟೊಂದು ಸುಲಭಸಾಧ್ಯವಾದ ಕೆಲಸವಾಗಿರಲಿಲ್ಲ. ಕಾಶ್ಮೀರದ ಮುಸ್ಲಿಂ ಜನರು ಕಡುಬಡತನ, ಅನಕ್ಷರತೆ ಮತ್ತು ಅಜ್ಞಾನದಲ್ಲಿ ಮುಳುಗಿದ್ದರು.

ಅಧ್ಯಕ್ಷರು, ಕಸ್ತೂರ್‌ಬಾ ಆರೋಗ್ಯ ಸಂಸ್ಥೆ ಮತ್ತು ನಿರ್ದೇಶಕರು ಮಹಾತ್ಮಗಾಂಧಿ ಆರೋಗ್ಯ ಸಂಸ್ಥೆ ಮತ್ತು ಅಧ್ಯಕ್ಷಿಣಿ, ಕಸ್ತೂರ್‌ಬಾ ಗಾಂಧಿ ರಾಷ್ಟ್ರೀಯ ಸ್ಮರಣಾ ಸಂಸ್ಥೆ.

ಮತ್ತು ಮುಸ್ಲಿಂ ಧಾರ್ಮಿಕ ಮುಖಂಡರು ಹೇಗೆ ಹೇಳಿದರೆ ಹಾಗೆ ಕೇಳುತ್ತಿದ್ದರಾದ್ದರಿಂದ ಶೇಕ್ ಸಾಹೇಬ್ ಮತ್ತವರ ಸಂಗಡಿಗರು ಮುಲ್ಲಾಗಳ ನೆರವನ್ನು ಮತ್ತು ಮುಸ್ಲಿಂ ಧರ್ಮವನ್ನು ತಮ್ಮ ಚಳುವಳಿಗೆ ಬಳಸಿಕೊಂಡು ಊಳಿಗಮಾನ್ಯ ಆಡಳಿತವನ್ನು ಕೊನೆಗಾಣಿಸಲು ಹೊರಾಟ ನಡೆಸಿದರು. ಇಸ್ಲಾಂ ಜನರು ತಮ್ಮನ್ನು ತಾವೇ ಸಂಘಟಿಸಿಕೊಂಡು ಚಳುವಳಿಗೆ ಇಂಬು ಕೊಡಲು ಮಸೀದಿಗಳಿಂದ ಚಳುವಳಿಯ ಕರೆಯು ಮೊಳಗಿತು. ಮಹಾರಾಜನ ದುಷ್ಟ ನಿರಂಕುಶ ಆಡಳಿತದಲ್ಲಿ ಜರ್ಜರಿತವಾಗಿದ್ದ ಹಿಂದೂಗಳೂ ಕೂಡ ಈ ಆಂದೋಳನಕ್ಕೆ ತಮ್ಮ ಬೆಂಬಲ ನೀಡಿದರು.

ಚಳುವಳಿಯು ವ್ಯಾಪಕಗೊಂಡು ಇಡೀ ಕಾಶ್ಮೀರದಲ್ಲಿ ಧಾರ್ಮಿಕ ಗೊಂದಲಮಯ ವಾತಾವರಣ ಉಂಟಾಯಿತು. ಪರಿಣಾಮ 1931ರ ಜುಲೈ 13 ರಂದು ಶೇಕ್ ಅಬ್ದುಲ್ಲಾರವರನ್ನು ಬಂಧಿಸಿ ಸೆರೆಮನೆಯಲ್ಲಿಡಲಾಯಿತು. ಇದರಿಂದ ಪ್ರತಿಭಟನೆ ಮತ್ತಷ್ಟು ತೀವ್ರವಾಯಿತು. ಕಾಶ್ಮೀರದಲ್ಲಿ ಧಾರ್ಮಿಕ ಗಲಭೆ ಎದ್ದಿತು. ಸರ್ಕಾರವು ಗೋಲಿಬಾರ್ ಮತ್ತು ಲಾಟಿಚಾರ್ಜ್‌ಗಳನ್ನು ಕಾಶ್ಮೀರದ ಬೇರೆ ಬೇರೆ ಜಾಗಗಳಲ್ಲಿ ನಡೆಸಿತು. ದಿನದಿಂದ ದಿನಕ್ಕೆ ಜನರ ಹೋರಾಟವು ಇಮ್ಮಡಿಯಾಯಿತು. ವಂಚನೆಯ, ದೌರ್ಜನ್ಯದ ಆಳ್ವಿಕೆಗೆ ದಿಕ್ಕಾರವೆಂದು ಜನ ಸಾರಿದರು.

ರಾಜ್ಯದಲ್ಲಿ ಪುನಃ ಶಾಂತಿ ನೆಲೆಸುವಂತೆ ಮಾಡಲು 1932ರ ಅಂತ್ಯಭಾಗದಲ್ಲಿ ಸರ್ಕಾರವು ಒಂದು ಆಯೋಗವನ್ನು ನೇಮಿಸಿತು. ಇದರಡಿಯಲ್ಲಿ ಮುಸ್ಲಿಮರ ಸಮಸ್ಯೆಗಳನ್ನು ಕುರಿತು ಚರ್ಚಿಸಲು ಮತ್ತು ಅವರ ಕುಂದುಕೊರತೆಗಳನ್ನು ನಿವಾರಿಸುವ ಭರವಸೆ ನೀಡಲಾಯಿತು. ಕೆಲವು ಧಾರ್ಮಿಕ ಕಟ್ಟಡಗಳನ್ನು ಮುಸ್ಲಿಮರಿಗೆ ಬಿಟ್ಟುಕೊಟ್ಟು ಅವರ ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡಲಾಯಿತು. ಸರ್ಕಾರಿ ಕೆಲಸಗಳಲ್ಲಿ ಮುಸ್ಲಿಮರು ಪ್ರವೇಶ ಪಡೆಯಲು ಕನಿಷ್ಠ ಪ್ರಾಥಮಿಕ ಹಂತದವರೆಗೂ ವಿದ್ಯಾಭ್ಯಾಸ ಮಾಡಿರಬೇಕೆಂದು ಈ ಆಯೋಗವು ತಿಳಿಸಿತು. ಮತ್ತು ಶಾಸನ ಸಭೆಗಳಲ್ಲಿನ ಒಟ್ಟು 72 ಮಂದಿ ಸದಸ್ಯರ ಪೈಕಿ 33 ಶಾಸಕರು ಚುನಾಯಿತ ಪ್ರತಿನಿಧಿಗಳಾಗಿರಬೇಕೆಂದು ಅಂಗೀಕರಿಸಲಾಯಿತು ಈ ಅಂಗೀಕಾರಕ್ಕೆ ಮಹಾರಾಜರು ತಮ್ಮ ಸಮ್ಮತಿ ಸೂಚಿಸಿದರು.

ನಿರಂಕುಶ ಪ್ರಭುತ್ವದ ವಿರುದ್ಧವಾದ ತಮ್ಮ ಆಂದೋಳನದಲ್ಲಿ ಹಿಂದೂಗಳನ್ನು ಸಿಖ್ಖರನ್ನು ಮತ್ತು ಇತರ ಅಲ್ಪಸಂಖ್ಯಾತ ವರ್ಗದವರನ್ನು ಸೇರ್ಪಡೆಗೊಳಿಸಲು ಅಬ್ದುಲ್ಲಾ ಮತ್ತವರ ಸಂಗಡಿಗರು ನಿರ್ಧರಿಸಿದರು. ತಮ್ಮ ಮುಸ್ಲಿಂ ಪರವಾದದ ಇಸ್ಲಾಂ ವೇದಿಕೆಯನ್ನು 1938ರಲ್ಲಿ ರಾಷ್ಟ್ರೀಯ ವೇದಿಕೆಯನ್ನಾಗಿ ಪರಿವರ್ತಿಸಿ ಈ ವೇದಿಕೆಗೆ ಸರ್ವರನ್ನು ಸ್ವಾಗತಿಸಲಾಯಿತು. ಈ ಸಂಘಟನೆಯು ಜೂನ್ 11, 1939ರಂದು ಅಸ್ತಿತ್ವಕ್ಕೆ ಬಂತು. ಶೇಕ್ ಅಬ್ದುಲ್ಲಾ ಇದರ

ಮುಖಂಡರಾದರು ಈ ಸಂಘಟನೆಯ ಕಾರ್ಯಕಾರಿ ಸಮಿತಿಯಲ್ಲಿ ಹಿಂದೂಗಳೂ ಮತ್ತು ಸಿಖ್ಖರೂ ಇದ್ದರು.

ಪ್ರಥಮ ಅಧಿವೇಶನದಲ್ಲಿ ರಾಷ್ಟ್ರೀಯ ಸಮಾವೇಶವು 1939ರ ಅಕ್ಟೋಬರ್‌ನಲ್ಲಿ ಅಬ್ದುಲ್ಲಾರ ಅಧ್ಯಕ್ಷತೆಯಲ್ಲಿ ತನ್ನ 'ರಾಷ್ಟ್ರೀಯ ಬೇಡಿಕೆ' ಮುಂದಿಟ್ಟಿತು. ಮಹಾರಾಜರ ಆಶ್ರಯದಲ್ಲಿ ರಾಜ್ಯದಲ್ಲಿ ಸ್ವಯಂ ಸರ್ಕಾರವು ಅಸ್ತಿತ್ವಕ್ಕೆ ಬರಬೇಕೆಂದೂ ಈ ಸ್ವಯಂ ಸರ್ಕಾರದಲ್ಲಿ ಚುನಾಯಿತ ಪ್ರಜಾಪ್ರತಿನಿಧಿಗಳಾಗಬೇಕೆಂದು, ಶಾಸನ ಬದ್ಧವಾದ ಸಂವಿಧಾನದ ವ್ಯವಸ್ಥೆಯ ಅಡಿಯಲ್ಲಿ ಜವಾಬ್ದಾರಿ ಸರ್ಕಾರಬೇಕೆಂದು ಸಭೆ ತೀರ್ಮಾನಿಸಿತು.

ಯುದ್ಧದ ಸಂದರ್ಭದಲ್ಲಿ ಶೇಕ್ ಮತ್ತು ಅವರ ಅನುಯಾಯಿಗಳು ಸರ್ಕಾರದ ಅಧಿಕಾರ ರಹಿತ ಹೋರಾಟದ ಉದ್ದೇಶವನ್ನು ಕಂಡುಕೊಂಡರು. ರಾಷ್ಟ್ರೀಯ ಸಭೆಯು ಸರ್ಕಾರಕ್ಕೆ ಬೆಂಬಲ ನೀಡಿತ್ತು. (ಯುದ್ಧದ ಸಮಯದಲ್ಲಿ) ಇವರು ಆಹಾರ ಸಮಿತಿಯನ್ನು ಸಂಘಟನೆ ಕಾಶ್ಮೀರದ ಜನರನ್ನು ಹಸಿವಿನಿಂದ ಪಾರುಮಾಡಲು ಯತ್ನಿಸಿದರು.

ಸಮಾಜವಾದದಲ್ಲಿ ಅಬ್ದುಲ್ಲಾರಿಗೆ ತುಂಬಾ ಕಾಳಜಿ ಇತ್ತು ರಷ್ಯ ದೇಶದ ಕ್ರಾಂತಿ ಮತ್ತು ಆ ದೇಶದ ಸಾಮಾಜಿಕ ಪ್ರಯೋಗಗಳಿಂದ ಇವರು ತುಂಬಾ ಪ್ರಭಾವಿತರಾಗಿದ್ದರು. ಇದೇ ಉತ್ತೇಜನದಿಂದಲೆ ಜರ್ಮನಿಯ ನಾಜಿಗಳ ವಿರುದ್ಧ ಸೋವಿಯತ್ ಜಯವನ್ನು ಗಳಿಸಿದ್ದು ಅಬ್ದುಲ್ಲಾರವರ ನೆಹರೂಜಿಯವರ ಅತ್ಮೀಯ ಸ್ನೇಹಿತರಾಗಿದ್ದು ಅವರಿಂದ ತುಂಬಾ ಪ್ರಭಾವಿತರಾಗಿದ್ದರು. ನೆಹರೂರವರ ಮಾರ್ಗದರ್ಶನ ಮತ್ತು ಸಲಹೆಗಳು ಅಬ್ದುಲ್ಲಾರ ರಾಜಕೀಯರಂಗದಲ್ಲಿ ಆಳವಾದ ಪ್ರಭಾವ ಬೀರಿದವು.

ಯುದ್ಧ ಮುಗಿದ ಮೇಲೆ ರಾಷ್ಟ್ರೀಯ ಸಭೆಯು ಸ್ವಯಂ ಸರ್ಕಾರ ಬೇಕೆಂದಷ್ಟೆ ಅಲ್ಲದೆ, ಮಹಾರಾಜನ ಕ್ರೂರ ಡೋಗ್ರ ಊಳಿಗಮಾನ್ಯ ವ್ಯವಸ್ಥೆಯಿಂದ ಕಾಶ್ಮೀರದ ಜನರನ್ನು ಮುಕ್ತಗೊಳಿಸಲು ಸಂಪೂರ್ಣ ಸ್ವಾತಂತ್ರಕ್ಕಾಗಿ ಬೇಡಿಕೆ ಒಡ್ಡಿದರು. ಮತ್ತು ರಾಷ್ಟ್ರೀಯ ಸಭೆಯು 1846ರಲ್ಲಿ ಅಮೃತಸರದ ಒಪ್ಪಂದವನ್ನು ರದ್ದುಪಡಿಸುವಂತೆ ಕೇಳಿತು. ಈ ಒಪ್ಪಂದದನ್ವಯ ಜಮ್ಮು ಮತ್ತು ಕಾಶ್ಮೀರದ ಸಾರ್ವಭೌಮತ್ವ ಅಧಿಕಾರವನ್ನು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಮಹಾರಾಜ ಗುಲಾಬ್‌ಸಿಂಗ್ ರವರಿಗೆ ಎಪ್ಪತ್ತೈದು ಲಕ್ಷಕ್ಕೆ ವಹಿಸಿಕೊಟ್ಟಿತು.

ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತೀಯರು ಹೋರಾಟ ನಡೆಸುತ್ತಿರುವ ಭಾಗವಾಗಿ ಕಾಶ್ಮೀರ ಜನತೆಯು ಹೋರಾಡುತ್ತಿರುವುದನ್ನು ಅಬ್ದುಲ್ಲಾ ಕಂಡರು. ಇದು ಹೋರಾಟದ ಅಂತಿಮ ಘಟ್ಟವಾಗಿತ್ತು. ರಾಜಪ್ರಭುತ್ವವು ದೇಶದಲ್ಲಿ ನಿರ್ಮೂಲನವಾಗಬೇಕು. ಅಂತಯೇ ಬ್ರಿಟಿಷರು ಭಾರತ ಬಿಟ್ಟು ತೊಲಗಬೇಕೆಂದು ಚಳುವಳಿ ನಡೆಯುತ್ತಿತ್ತು. 1946ರ ಮೇ 20 ರಂದು ಜವಾಹರ್‌ಲಾಲ್‌ರ ಆಹ್ವಾನದ ಮರೆಗೆ ಅಬ್ದುಲ್ಲಾರವರು ದೆಹಲಿಗೆ ತೆರಳುತ್ತಿದ್ದಾಗ ಮಾರ್ಗ ಮಧ್ಯದಲ್ಲಿ ಇವರನ್ನು ಮಹಾರಾಜನ ಪೋಲೀಸರು ಬಂಧಿಸಿದರು.

ನೆಹರೂರವರ 'ಕ್ಯಾಬಿನೆಟ್ ಮಿಷನ್' ನೊಂದಿಗೆ ಅಬ್ದುಲ್ಲಾರು ಸಂಧಾನ ನಡೆಸಲು ಹೋಗುತ್ತಿದ್ದರು. ಕಾಶ್ಮೀರದ ಕೇಸರಿ ಅಬ್ದುಲ್ಲಾರ ಬಂಧನವನ್ನು ನೆಹರೂಜಿಯವರು ತೀವ್ರವಾಗಿ ಖಂಡಿಸಿದರು.

ಜವಾಹರ್ ಲಾಲ್ ನೆಹರೂರವರು ಕಾಶ್ಮೀರಿ ದೊರೆಯ ಇಂತಹ ಕೃತ್ಯಗಳಿಂದ ರೋಸಿ ಹೋಗಿದ್ದರು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಲು ನಿರ್ಧರಿಸಿದರು. ತಾವು ಜೂನ್ 19ರಂದು ಶ್ರೀನಗರಕ್ಕೆ ಆಗಮಿಸುತ್ತಿರುವುದಾಗಿ ಮಹಾರಾಜನಿಗೆ ಸುದ್ದಿ ಮುಟ್ಟಿಸಿದ್ದರು. ಇವರ ಆಗಮನವನ್ನು ರಾಜ್ಯಾಡಳಿತ ತಿರಸ್ಕರಿಸಿತು. ಆದರೆ ನೆಹರೂರವರು ಇವರ ಅನುಮತಿಗಾಗಿ ಎದುರು ನೋಡದೆ ಶ್ರೀನಗರಕ್ಕೆ ಬಂದಳಿದಾಗ ಜೂನ್ 20 ರಂದು ರಾಜ್ಯ ರಕ್ಷಕದಳ ಇವರನ್ನು ಬಂದಿಸಿ ಸೆರೆಯಲ್ಲಿಟ್ಟಿತು. ಇಡೀ ದೇಶವೆ ಈ ದುರ್ನಡತೆಯ ವಿರುದ್ಧ ಆಕ್ರೋಶ ಮತ್ತು ಅಚ್ಚರಿಯನ್ನು ವ್ಯಕ್ತಪಡಿಸಿತು. ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ಮೌಲಾನ ಆಜಾದ್‌ರವರು, ಬ್ರಿಟಿಷ್‌ರೊಂದಿಗೆ ದೇಶದ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಮಹತ್ವಪೂರ್ಣವಾದ ಸಂಧಾನ ನಡೆಯುತ್ತಿದ್ದ ದಿನಗಳಲ್ಲಿ ನೆಹರೂರವರು ದೆಹಲಿಯಿಂದ ದೂರ ಹೋಗುವುದನ್ನು ತಡೆದಿದ್ದರು. ದೇಶದ ಭವಿಷ್ಯವು ನಿರ್ಣಾಯಕ ಹಂತದಲ್ಲಿದ್ದಾಗ ತಮ್ಮೊಂದಿಗೆ ದೆಹಲಿಯ ಸಭೆಯಲ್ಲಿ ಪಾಲ್ಗೊಳ್ಳುವಂತೆ ಹೇಳಿದ್ದರು. ಭವಿಷ್ಯದ ಪ್ರಧಾನ ಮಂತ್ರಿಯಾದ ನೆಹರೂರವರ ಬಂಧನಕ್ಕೆ ಲಾರ್ಡ್‌ಮೌಂಟ್ ಬ್ಯಾಟನ್‌ರವರೂ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದರು. ಮರುದಿನ ನೆಹರೂರವರನ್ನು ಬಿಡುಗಡೆ ಮಾಡಲಾಯಿತು.

ಕಾಶ್ಮೀರದ ಜನತೆಯ ಜನಪರ ಹಕ್ಕುಗಳನ್ನು ಪಡೆಯುವ ಸಲುವಾಗಿ ಅಬ್ದುಲ್ಲಾ ಮತ್ತವರ 'ರಾಷ್ಟ್ರೀಯ ವೇದಿಕೆ' ಎಚ್ಚೆತ್ತು ಕೊಂಡಿತು. ಬಹುಪಾಲು ಕಾಶ್ಮೀರದ ಮುಸ್ಲಿಮರು ಕಾಶ್ಮೀರಿ ಪಂಡಿತರಿಂದ ಮುಖಾಂತರ ಹೊಂದಿದವರು ಮತ್ತು ಹಲವಾರು ಮಂದಿ ಹಿಂದೂಗಳೂ ತಮ್ಮ ಸಂಪ್ರದಾಯಗಳನ್ನು ತ್ಯಜಿಸಿದರು ಬಹುತೇಕ ಪಂಜಾಬಿ ಮುಸ್ಲಿಮರಲ್ಲಿ ಕಂಡು ಬರುತ್ತಿದ್ದ ಧರ್ಮಾಂಧತೆ ಮತ್ತು ಆಕ್ರಮಣಕಾರಿ ಮನೋಭಾವ ಕಾಶ್ಮೀರಿ ಮುಸಲ್ಮಾನರಲ್ಲಿ ಕಂಡುಬರುತ್ತಿರಲಿಲ್ಲ. ಸೂಫಿಗಳು ತಮ್ಮ ಪ್ರಭಾವ ಮತ್ತು ಬೋಧನೆಗಳಿಂದ ಹಿಂದೂ ಮುಸಲ್ಮಾನರ ನಡುವೆ ಉತ್ತಮ ಸ್ನೇಹ ಸೌಹಾರ್ದತೆಗಳನ್ನು ಉಂಟು ಮಾಡಿದ್ದರು. ಇದರ ಫಲದಿಂದ ಜಮ್ಮು ಮತ್ತು ಕಾಶ್ಮೀರದಲ್ಲಿ ಹಿಂದೂ ಮುಸಲ್ಮಾನರಲ್ಲಿ ಸ್ನೇಹ ಮತ್ತು ನಿಕಟ ಬಾಂಧವ್ಯಗಳು ನೆಲೆಸಿದ್ದವು ಮತ್ತು ರಾಷ್ಟ್ರೀಯ ವೇದಿಕೆ ಸಭೆಯಲ್ಲಿ ಹಿಂದೂ ಮುಸಲ್ಮಾನರಿಬ್ಬರೂ ಒಳಗೊಂಡಿತ್ತು. ರಾಷ್ಟ್ರೀಯ ವೇದಿಕೆಯು ಸತತವಾಗಿ ತನ್ನ ಬೇಡಿಕೆಗಳನ್ನು ಮಹಾರಾಜನ ವಿರುದ್ಧ ಮುಂದಿಡುತ್ತಾ ಬಂದಿತು. ಜನರು ತಮ್ಮ ಹಕ್ಕುಗಳಿಗಾಗಿ ಎಚ್ಚೆತ್ತುಕೊಂಡರು. ಆದರೆ ಮಹಾರಾಜನು ಅಧಿಕಾರ ಹಸ್ತಾಂತರ ಮಾಡಲು ಇಚ್ಛಿಸಲಿಲ್ಲ. ಒಂದು ಕಡೆ ಭಾರತದ ಇತರ ರಾಜ್ಯಗಳಲ್ಲಿ ಜನರು ತಮ್ಮ ಹಕ್ಕು-ಬಾಧ್ಯತೆಗಳಿಗಾಗಿ ಪ್ರಬಲ ಹೋರಾಟ ನಡೆಸುತ್ತಿದ್ದರು.

1947ರಲ್ಲಿ ಅಬ್ದುಲ್ಲಾರನ್ನು ಮತ್ತೆ ಬಂಧನದಲ್ಲಿಡಲಾಯಿತು ಇವರ ಜೈಲಿನಲ್ಲಿದ್ದಾಗಲೇ 'ರಾಜ್ಯದ ಜನತೆ ಸಮಾವೇಶ' ದ ಅಧ್ಯಕ್ಷರಾಗಿ ಚುನಾಯಿತರಾಗಿದ್ದರು. ಜವಾಹರ್‌ಲಾಲ್ ನೆಹರೂರವರು ಪ್ರಧಾನಮಂತ್ರಿಗಳಾಗಿ ಹಂಗಾಮಿ ಸರ್ಕಾರವನ್ನು ರೂಪಿಸಿದ್ದರು. ಕಾಶ್ಮೀರದ ಕೇಸರಿಯನ್ನು ಕಾಣುವ ಇಚ್ಛೆಯನ್ನು ವ್ಯಕ್ತಪಡಿಸಿದರು ಕಾಶ್ಮೀರದ ಮಹಾರಾಜ ನೆಹರೂರವರ ಬರುವಿಕೆಗೆ ಅಸಮಧಾನ ತೋರಿದರು. ಒಂದು ವೇಳೆ ಜವಾಹರಲಾಲ್‌ರು ಕಾಶ್ಮೀರಕ್ಕೆ ಹೋಗಲೇಬೇಕೆಂದು ಪಣತೊಟ್ಟರೆ, ಅವರನ್ನು ಮಹಾರಾಜರು ಬಂಧಿಸಿದರೆ ಇದು ಇಡೀ ರಾಷ್ಟ್ರಕ್ಕೆ ತುಂಬಾ ಅಪಾಯವನ್ನುಂಟು ಮಾಡುವ ಪರಿಸ್ಥಿತಿಯಾಗುವುದೆಂದು ಮೌಂಟ್ ಬ್ಯಾಟನ್ ಮತ್ತು ಗಾಂಧೀಜಿಯವರು ದುಃಖಪಟ್ಟರು. ಕಡೆಗೆ ಗಾಂಧೀಜಿಯವರು ಕಾಶ್ಮೀರಕ್ಕೆ ನೆಹರೂರವರ ಬದಲಿಗೆ ಹೋಗುವುದೆಂದು ನಿರ್ಧರಿಸಲಾಯಿತು. ಮೌಂಟ್‌ಬ್ಯಾಟನ್‌ರವರು ಗಾಂಧೀಜಿಯವರೂ ಹೋಗುವುದು ಬೇಡವೆಂದರು. ಆದರೆ ಗಾಂಧೀಜಿಯವರು ಹೋಗಲೇಬೇಕೆಂದು ತೀರ್ಮಾನಿಸಿದರು ಗಾಂಧೀಜಿಯವರು ಕಾಶ್ಮೀರಕ್ಕೆ ಬಂದಾಗ ಅವರನ್ನು ಸ್ವಾಗತಿಸಲು ಮಹಾರಾಜರು ಒಪ್ಪಿದರು.

ಗಾಂಧೀಜಿಯವರು ಆಗಸ್ಟ್ 1ನೇ ತಾರೀಖು 1947ರಂದು ಕಾಶ್ಮೀರವನ್ನು ತಲುಪಿ ಸೆರೆವಾಸದಲ್ಲಿದ್ದ ಶೇಕ್ ಅಬ್ದುಲ್ಲಾರವರನ್ನು ಸಂಧಿಸಿದರು ಮತ್ತು ಶೇಕರವರ ನಿವಾಸಕ್ಕೆ ತೆರಳಿ ಅವರ ಕುಟುಂಬದ ಸದಸ್ಯರನ್ನು ಸ್ನೇಹಿತರನ್ನು ರಾಷ್ಟ್ರೀಯ ವೇದಿಕೆಯ ಕಾರ್ಯಕರ್ತರನ್ನು ಭೇಟಿಯಾದರು. ಗಾಂಧೀಜಿಯವರು ಮಹಾರಾಜರನ್ನು ಭೇಟಿಯಾಗಿ ಅವರೊಂದಿಗೆ ವೈಯಕ್ತಿಕವಾಗಿ ಮಾತನಾಡುತ್ತ ಶೇಕ್ ಅಬ್ದುಲ್ಲಾರಿಂದ ನೆರವು ಮತ್ತು ಸಹಕಾರವನ್ನು ಪಡೆದುಕೊಳ್ಳವಂತೆ ಸಲಹೆ ನೀಡಿದರು. ಅಬ್ದುಲ್ಲಾರವರು ಮಹಾರಾಜ ಮತ್ತು ಕಾಶ್ಮೀರದ ನಾಗರೀಕರ ನಡುವಿನ ಸೇತುವೆಯಾಗಿದ್ದರು ಆಗಸ್ಟ್ 3 ರಂದು ಶ್ರೀನಗರದಿಂದ ಹಿಂದಿರುಗಿದರು.

1947ರ ಅಧಿಕಾರ ಹಸ್ತಾಂತರದ ಸಮಯದಲ್ಲಿ ಪಾಕಿಸ್ತಾನವು ಕಾಶ್ಮೀರವನ್ನು ತನ್ನೊಂದಿಗೆ ವಿಲೀನವಾಗುವಂತೆ ಒತ್ತಾಯಿಸಿತು ಕಾಶ್ಮೀರಿ ಮೂಲದ ಪಶ್ಚಿಮ ಪಂಜಾಬಿನಲ್ಲಿ ನೆಲೆಸಿದ್ದ ಪಾಕಿಸ್ತಾನದ ಕೆಲವು ಮಂದಿ ನಾಯಕರು ಶ್ರೀನಗರಕ್ಕೆ ಆಗಮಿಸಿ ಶೇಕ್ ಅಬ್ದುಲ್ಲಾರವರನ್ನು ಕಂಡು ಎಂ.ಎ ಜಿನ್ನಾರವರನ್ನು ಭೇಟಿಯಾಗಲು ಲಾಹೋರಿಗೆ ಬರುವಂತೆ ಆಹ್ವಾನಿಸಿದರು. ಆದರೆ ಶೇಕ್‌ಸಾಹೇಬರು ಪಾಕಿಸ್ತಾನಿ ನಾಯಕರ ಬಲೆಗೆ ಬೀಳಲಿಲ್ಲ. ಈ ಕುರಿತು ತಮ್ಮ ಜೀವನಚರಿತ್ರೆಯಲ್ಲಿ ಬರೆದಿದ್ದಾರೆ. ಒಂದು ವೇಳೆ ತಾನೇನಾದರೂ ಲಾಹೋರಿಗೆ ಜಿನ್ನಾರವರನ್ನು ಕಾಣಲು ಹೋದರೆ ಅವರು ತನ್ನನ್ನು ಬಂಧಿಸಿ ಬಲವಂತವಾಗಿ ತನ್ನಿಂದ ಕಾಶ್ಮೀರವು ಪಾಕಿಸ್ತಾನದೊಂದಿಗೆ ವಿಲೀನವಾಗಲು ಸಮ್ಮತಿ ನೀಡಲಾಗಿದೆಯೆಂದು ಸಹಿ ಮಾಡಿಸಿಕೊಂಡು ವಂಚಿಸುವ ಸಾಧ್ಯತೆಗಳು ಇತ್ತೆಂದು ಅಬ್ದುಲ್ಲಾ ಹೇಳಿದ್ದಾರೆ.

ತಮ್ಮ ಬಲೆಗೆ ಬೀಳದ ಕಾರಣ ಪಾಕಿಸ್ತಾನದ ಸರ್ಕಾರವು ಕಾಶ್ಮೀರದ ಮೇಲೆ ದಾಳಿ ನಡೆಸಲು ನಿರ್ಧರಿಸಿತು ಮಹಾರಾಜರು ಭಯಗೊಂಡು ಭಾರತದ ಸಹಾಯವನ್ನು ಕೋರಿದರು. ಇದಕ್ಕೆ ರಾಜ್ಯದ ಶಾಸಕಾಂಗದ ಸಮ್ಮತಿಯೂ ಬೇಕಾಗಿದ್ದರಿಂದ ಭಾರತ ನೆರವನ್ನು ಅಪೇಕ್ಷಿಸಿ ಸಮ್ಮತಿಗೆ ಶಾಸಕಾಂಗದಲ್ಲಿ ಸಹಿ ಮಾಡಲು ಒಪ್ಪಿದರು. ಪ್ರಧಾನ ಮಂತ್ರಿಗಳಾಗಿದ್ದ ನೆಹರೂಜಿಯವರು ಈ ಬಗ್ಗೆ ಸಲಹೆ ಪಡೆಯಲು ಗಾಂಧೀಜಿಯವರ ಬಳಿಗೆ ಬಂದಾಗ ನಾನು ಅಲ್ಲಿ ಉಪಸ್ಥಿತಳಾಗಿದ್ದೆ.

ಮಹಾರಾಜರ ಕೋರಿಕೆಯ ಹಿನ್ನೆಲೆಯಲ್ಲಿ ಕಾಶ್ಮೀರದ ನಾಗರೀಕ ಸಮ್ಮತಿ ಇದೆಯೇ ಎಂದು ಗಾಂಧೀಜಿಯವರು ನೆಹರೂರವರನ್ನು ಕೇಳಿದಾಗ, ರಾಷ್ಟ್ರೀಯ ವೇದಿಕೆಯ ಸದಸ್ಯರೂ ಮತ್ತು ಅವರ ಮುಖಂಡರಾಗಿರುವ ಶೇಕ್ ಅಬ್ದುಲ್ಲಾರವರೂ ಕೂಡ ಭಾರತದ ನೆರವನ್ನು ಕೇಳಿದ್ದಾರೆಂದು ಪಂಡಿತ್‌ಜೀ ತಿಳಿಸಿದರು. ಮತ್ತು ಭಾರತವು ಇದಕ್ಕೆ ಸಮ್ಮತಿ ನೀಡುತ್ತದೆಯೆಂಬ ನಂಬಿಕೆಯನ್ನು ಹೊಂದಿರುವುದಾಗಿ ಅಬ್ದುಲ್ಲಾ ಭಾವಿಸಿರುವುದಾಗಿಯೂ ಹೇಳಿದರು ಗಾಂಧೀಜಿಯವರು ಅಹಿಂಸೆಯಲ್ಲಿ ನಂಬಿಕೆಯುಳ್ಳವರಾದ್ದರಿಂದ ನೆಹರೂರವರಿಗೆ ಹೀಗೆಂದರು "ನನ್ನ ಮನೋಭಾವಗಳೇನೆಂಬುದು ನಿನಗೆ ಚೆನ್ನಾಗಿ ಗೊತ್ತು ಅದು ನಿನ್ನ ಮಾರ್ಗಕ್ಕೆ ಒಪ್ಪುವುದಿಲ್ಲ ಸರ್ಕಾರದ ಪ್ರಮುಖ ಅಧಿಕಾರಿಯಾಗಿ ನೀನು ಜಮ್ಮು ಕಾಶ್ಮೀರದ ನೆರವಿಗೆ ಸೇನೆಯನ್ನು ಕೂಡಲೆ ಕಳುಹಿಸಿ ಅವರಿಗೆ ಸಹಾಯ ಮಾಡು" ಎಂದರು. ಶಾಸನ ರೀತ್ಯ ಮಹಾರಾಜ ಸಹಿಮಾಡಿದಂತೆ 1947ರ ಅಕ್ಟೋಬರ್ 27ರಂದು ಭಾರತ ಸೇನೆಯು ಶ್ರೀನಗರವನ್ನು ತಲುಪಿತು.

ಶ್ರೀನಗರ ಪ್ರಮುಖ ನಗರಗಳು ಹಾಗೂ ಹಳ್ಳಿಗಳು ಪಾಕಿಸ್ತಾನದ ಧಾಳಿಗೆ ಬಲಿಯಾದವು ಅವರು (ಆಕ್ರಮಣಕಾರರು) ಶ್ರೀನಗರದತ್ತ ಮುನ್ನುಗ್ಗಿದರು. ಬರಾಮುಲ್ಲಾಯೆಂಬ ಸುಸಜ್ಜಿತ ನಗರವು ತೀವ್ರ ದಾಳಿಯಿಂದಾಗಿ ಜರ್ಜರಿತವಾಯಿತು. ಧಾಳಿಕೋರರಿಂದ ತಮ್ಮ ಆತ್ಮಗೌರವವನ್ನು ಕಾಪಾಡಿಕೊಳ್ಳುವ ಸಲುವಾಗಿ ಅನೇಕ ಸ್ತ್ರೀ-ಪುರುಷರು ಆತ್ಮಹತ್ಯೆ ಮಾಡಿಕೊಂಡರು ಕಾಶ್ಮೀರ ಕಣಿವೆಯ ಕಣ್ಣು ಕುಕ್ಕುವಂತಹ ಶ್ರೀಮಂತಿಕೆಗೆ ಅಮಿಷಗಳಿಗೆ ಒಳಗಾದ ದಾಳಿಕೋರರು ಕಾಶ್ಮೀರದ ಸಂಪತ್ತನ್ನೆಲ್ಲಾ ದೋಚಿದರಲ್ಲದೆ ಕಾಶ್ಮೀರಿ ಜನರಿಗೆ ಅಪಾರ ಕಿರುಕುಳ ತೊಂದರೆಗಳನ್ನುಂಟು ಮಾಡಿದರು. ಮಾರ್ಗಮಧ್ಯದಲ್ಲಿ ಹಬ್ಬ-ಔತಣ ಕೂಟಗಳ ಸಂತೋಷ ಸಂಭ್ರಮಗಳಲ್ಲಿ ಅಧಿಕ ಸಮಯ ಕಳೆದದ್ದರಿಂದ ಭಾರತೀಯ ಸೇನೆಯು ಶ್ರೀನಗರ ವಿಮಾನ ನಿಲ್ದಾಣವನ್ನು ತಲುಪುವುದು ವಿಳಂಬವಾಯಿತು.

ಪಾಕಿಸ್ತಾನಿ ಆಕ್ರಮಣಕಾರರ ವಿರುದ್ಧ ಪ್ರತಿಭಟಿಸಲು ಮತ್ತು ಭಾರತೀಯ ಸೇನೆಗೆ ಸಹಾಯ ಮಾಡುವ ದೃಷ್ಟಿಯಿಂದ ಶೇಕ್ ಅಬ್ದುಲ್ಲಾ ಮತ್ತು ಅವರ ರಾಷ್ಟ್ರೀಯ ವೇದಿಕೆಯ ಸದಸ್ಯರೆಲ್ಲಾ ಒಗ್ಗೂಡಿ ಒಂದು ಸಂಘವನ್ನು ಆಯೋಜಿಸಿದರು. ಕಾಶ್ಮೀರವು ಅರಕ್ಷಿತ

ಸ್ಥಿತಿಯಲ್ಲಿದ್ದಾಗ ಇದರ ಪ್ರಯೋಜನವನ್ನು ಪಡೆದುಕೊಳ್ಳಲು ಹವಣಿಸಿದ ಪಾಕಿಸ್ತಾನದ ವಿರುದ್ಧ ಕಾಶ್ಮೀರದ ನಾಗರೀಕರು ದಂಗೆಯೆದ್ದರು. ವರ್ಷಾಂತರಗಳ ನಿರಂಕುಶ ಪ್ರಭುತ್ವದಿಂದ ಮುಕ್ತರಾಗಲು ಆಶಿಸಿದ್ದ ಇವರಿಗೆ ಸ್ವಾತಂತ್ರ್ಯ ಇನ್ನೇನು ಕೈಗೆಟುಕವುದಿದೆಯೆಂದಾಗ ಅನಿರೀಕ್ಷಿತ ದಾಳಿಯ ಅವರನ್ನು ತತ್ತರಿಸುವಂತೆ ಮಾಡಿತು. ಪಾಕಿಸ್ತಾನ ಮತ್ತು ಅದರ ಆಕ್ರಮಣಕಾರಿ ಪಂಜಾಬಿನ ಮುಲ್ಲಾಗಳ ಸ್ವಾಧೀನಕ್ಕೆ ಒಳಪಡಲು ಕಾಶ್ಮೀರಿಯನ್ನರು ಇಚ್ಛಿಸಲಿಲ್ಲ. ಪಂಡಿತ್ ನೆಹರೂ ಹಾಗೂ ಮಹಾತ್ಮ ಗಾಂಧಿಯವರುಗಳ ಆದರ್ಶ ಮತ್ತು ಮೌಲ್ಯಗಳಿಂದ ಇವರು ತುಂಬಾ ಆಕರ್ಷಿತರಾಗಿದ್ದರು. ಭಾರತೀಯ ಸೇನಾ ಪಡೆ ಹಾಗೂ ವಾಯು ಪಡೆಗಳು ಕಾಶ್ಮೀರದ ನೆಲದಿಂದ ಪಾಕಿಸ್ತಾನಿ ಆಕ್ರಮಣಕಾರನ್ನು ಹೊರಗಟ್ಟಲು ಸತತವಾಗಿ ಶ್ರಮಿಸತೊಡಗಿದವು, ನನಗೆ ತುಂಬಾ ವರ್ಷಗಳ ನಂತರ ಜನರಲ್ ತಿಮ್ಮಯ್ಯ ಹೇಳಿದರು. ಪಾಕಿಸ್ತಾನಿ ದಾಳಿಕೋರರನ್ನು ಅಂತರರಾಷ್ಟ್ರೀಯ ಗಡಿಯಿಂದ ಹೊರದೂಡಲು ತಮ್ಮ ಸೇನೆಗೆ ಕೇವಲ 48 ಗಂಟೆಗಳ ಅವಧಿ ಸಾಕಾಗಿತ್ತೆಂದು ಆದರೆ, ದುರಾದೃಷ್ಟವಶಾತ್ ಲಾರ್ಡ್ ಮೌಂಟ್‌ಬ್ಯಾಟನ್ ಉದ್ದೇಶಪೂರ್ವಕವಾಗಿ ನೆಹರೂರವರ ಮನವೊಲಿಸಿ ಕಾಶ್ಮೀರ-ಪಾಕಿಸ್ತಾನದ ವಿವಾದವನ್ನು ವಿಶ್ವಸಂಸ್ಥೆಗೆ ವಹಿಸಿಕೊಂಡುವಂತೆ ತಿಳಿಸಿದರು. ಮೂಲತಃ ಆತುರದ ಸ್ವಭಾವದವರಾದ ನೆಹರೂರವರು ಹಿಂದೆ-ಮುಂದೆ ಯೋಚಿಸದೆ ಸೇನಾ ಮುಖಂಡರನ್ನು, ಕಾಶ್ಮೀರದ ನಾಯಕನನ್ನೂ ಸಂಧಿಸದೆ ಅವರೊಂದಿಗೆ ಸಮಾಲೋಚನೆ ನಡೆಸದೆ ಆ ಕೂಡಲೇ ಯುದ್ಧವನ್ನು ನಿಲ್ಲಿಸುವಂತೆ ಆಜ್ಞಾಪಿಸಿದರು. ಸತತ ಹೋರಾಟದಿಂದ ಸಾಕಷ್ಟು ನಷ್ಟ ತೊಂದರೆಗಳನ್ನು ಅನುಭವಿಸಿ ಭಾರತೀಯ ಸೇನೆ ವಶಪಡಿಸಿಕೊಂಡಿದ್ದ ಪ್ರದೇಶಗಳನ್ನು ಬಿಟ್ಟುಕೊಡುವಂತೆ ಸೂಚನೆ ನೀಡಲಾಯಿತು. ಅರವತ್ತರ ದಶಕದಲ್ಲಿ ನಾನು ದಿವಂಗತ ಪಾಟಿಯಾಲದ ಮಹಾರಾಜರೊಂದಿಗೆ ಮಾತುಕತೆಯಲ್ಲಿ ತೊಡಗಿದ್ದಾಗ ಅವರಿಂದ ಈ ಸಂಗತಿ ತಿಳಿಯಿತು. ಮಹಾರಾಜ ಅವರ ಪ್ರಧಾನ ಮಂತ್ರಿ ಮತ್ತು ಅವರ ಕುಟುಂಬವು ಜಮ್ಮುವಿಗೆ ಪಲಾಯನ ಮಾಡಬೇಕಾಯಿತು. ಯುವರಾಜ ಕರುಣ್‌ಸಿಂಗ್‌ಗೆ ಅಧಿಕಾರವನ್ನು ವಹಿಸಿ ರಾಜ್ಯವನ್ನು ಬಿಟ್ಟು ಹೊರಡುವಂತೆ ಭಾರತ ಸರ್ಕಾರವು ಮಹಾರಾಜನಿಗೆ ಸಲಹೆ ನೀಡಿತ್ತು. 5ನೇ ಮಾರ್ಚಿ 1948ರಂದು ಶೇಕ್ ಅಬ್ದುಲ್ಲಾರವರು ಪ್ರಧಾನಮಂತ್ರಿಗಳಾಗಿ ತಮ್ಮದೇ ಆದ ಸಚಿವ ಸಂಪುಟವನ್ನು ರಚಿಸಿದರು. ಈ ಸಚಿವ ಮಂಡಳಿಯಲ್ಲಿ ಹಿಂದೂ ಹಾಗೂ ಮುಸಲ್ಮಾನರು ಸಮಾನ ಸಂಖ್ಯೆಯಲ್ಲಿ ಸೇರ್ಪಡೆಯಾಗಿದ್ದರು.

ಹೊಸ ಸರ್ಕಾರವು ಭೂ ಸುಧಾರಣೆ, ಶೈಕ್ಷಣಿಕ ಪ್ರಸರಣ, ಪ್ರವಾಸ ಕೈಗಾರಿಕೆ, ಸುಧಾರಿತ ವೈದ್ಯಕೀಯ ಸೌಲಭ್ಯ ಇವೇ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಒಳ್ಳೆಯ ಕೆಲಸಗಳನ್ನು ಮಾಡಿತು. ಉತ್ತಮ ಯೋಜನೆಗಳನ್ನು ರೂಪಿಸಿತು. ಆದರೆ, ದುರಾದೃಷ್ಟವೆಂಬಂತೆ ಭ್ರಷ್ಟಾಚಾರ ಹಾಗೂ ಪಕ್ಷಪಾತಗಳಂತಹ ಕೆಡಕುಗಳು ಆಡಳಿತದಲ್ಲಿ ಕಂಡು ಬಂದವು.

ಭಾರತದಲ್ಲಿ ಕಾಶ್ಮೀರ ರಾಜ್ಯಕ್ಕೆ ವಿಶೇಷ ಮನ್ನಣೆ ಸವಲತ್ತುಗಳನ್ನು ಒದಗಿಸುವ ಸಲುವಾಗಿ ಭಾರತ ಸಂವಿಧಾನವು 370ನೇ ಕಾಯಿದೆಯನ್ವಯ ಈ ಭರವಸೆಯನ್ನು ನೀಡಿತು. ರಾಜ್ಯಸಭೆಯು ಶಾಸನಸಭೆಯಿಂದ ಚುನಾಯಿತ ರಾಜ್ಯಪಾಲನನ್ನು ಐದು ವರ್ಷಗಳ ಅವಧಿಯವರೆಗೆ ನೇಮಿಸಿತು. ಇವರು ಪ್ರಧಾನಮಂತ್ರಿಯ ಸಲಹೆಯ ಮೇರೆಗೆ ಕಾರ್ಯನಿರ್ವಹಿಸಬೇಕಾಗಿತ್ತು. ಕರಣ್‌ಸಿಂಗ್‌ರವರು ಸಾದರ್-ಇ-ರಿಯಾಸತ್ (ರಾಜ್ಯಪಾಲ)ಯಾಗಿ 17ನೇ ನವೆಂಬರ್, 1952ರಂದು ಪ್ರಮಾಣ ವಚನ ಸ್ವೀಕರಿಸಿದರು. 20 ವರ್ಷಗಳವರೆವಿಗೂ ಇವರು ಈ ಸ್ಥಾನದಲ್ಲಿ (ಅಧಿಕಾರ) ಮುಂದುವರಿಸಿದರು.

ಶೇಕ್ ಅಬ್ದುಲ್ಲಾರವರು ರಾಷ್ಟ್ರೀಯ ವೇದಿಕೆಯ ನಾಯಕರಾಗಿ ಜಮ್ಮುಮತ್ತು ಕಾಶ್ಮೀರದ ಪ್ರಧಾನಮಂತ್ರಿಗಳಾಗಿ ಅತ್ಯುನ್ನತ ಸ್ಥಾನವನ್ನು ಪಡೆದಿದ್ದರು. ಇವರಿಗೆ ಎಲ್ಲಾ ತರಹದ ವ್ಯಕ್ತಿಗಳೊಡನೆ ಸಂಪರ್ಕವಿದೆಯೆಂದು ಕೆಲವರು ಇವರ ಮೇಲೆ ಸಂಶಯಪಡುತ್ತಿದ್ದರು ಭಾರತ ಸರ್ಕಾರವೂ ಕೂಡ ಇವರ ಮೇಲೆ ಕಣ್ಣಿಟ್ಟಿತ್ತು ಕಾಶ್ಮೀರಕ್ಕೆ ತನ್ನದೇ ಆದ ಸಂವಿಧಾನ ರಚಿಸುವ ಮಂಡಲಿಯೊಂದಿದೆ ಅದು ಸಂವಿಧಾನವನ್ನು ರಚನೆ ಮಾಡುವ ಕಾರ್ಯದಲ್ಲಿ ಕಾಶ್ಮೀರ ತೊಡಗಿದೆ ಇದಕ್ಕೆ 370ರ ಕಾಯಿದೆ ಪ್ರಕಾರ ವಿಶೇಷವಾದ ಸ್ಥಾನವಿದೆ ಪ್ರಧಾನಮಂತ್ರಿಯವರೂ ಇದ್ದಾರೆ ಆದರೆ ಇದಕ್ಕೆ ಮೊದಲು ಶೇಕ್ ಅಬ್ದುಲ್ಲಾರವರು ಭಾರತ ಮತ್ತು ಕಾಶ್ಮೀರದ ನಡುವಿನ ಸಂಬಂಧವನ್ನು ಬಲಪಡಿಸುತ್ತಾರೆಂದು ದೇಶದ ಜನತೆ ನಂಬಿದ್ದರು ಆದರೆ ಈಗ ಕಾಶ್ಮೀರಕ್ಕೆ ತನ್ನದೇ ಆದ ಪ್ರತ್ಯೇಕ ಸ್ಥಾನಬೇಕೆಂದು ಅದು ಘೋಷಿಸುತ್ತದೆ ಈಗ ಸ್ವಿಡ್ಜರ್‌ಲ್ಯಾಂಡ್ ಇರುವ ಹಾಗೆ ಈ ಒಲವಿಗೆ ಸಂಯುಕ್ತ ಸಂಸ್ಥಾನವೂ ಕೂಡ ಭರವಸೆ ಕೊಡುತ್ತಿದೆ. ಕಾಶ್ಮೀರದ ಘೋಷಣೆಯು ದೇಶದ ನಾಯಕರನ್ನೆಲ್ಲಾ ಚಿಂತೆಗೀಡು ಮಾಡುತ್ತಿದೆ.

ರಾಷ್ಟ್ರೀಯ ಸಭೆಯ ವಲಯದಲ್ಲೂ ಮುಖ್ಯವಾಗಿ ಅಬ್ದುಲ್ಲಾರ ಹಳೆಯ ಸಹೋದ್ಯೋಗಿಗಳಲ್ಲಿ ಇವರ ಬಗ್ಗೆ ಅಸಮಾಧಾನ ಬೆಳೆಯತೊಡಗಿತು. ಶೇಕ್‌ರವರ ಸಂಘಟನೆ ಚಟುವಟಿಕೆಗಳಲ್ಲಿ ಅವರ ಬೆಂಬಲಿಗರಾಗಿ ನಿಂತು ಭುಜಕ್ಕೆ ಭುಜಕೊಟ್ಟು ಹೋರಾಡಿದ್ದರು ಮತ್ತು ನವಕಾಶ್ಮೀರ ನಿರ್ಮಾಣ ಕಾರ್ಯದಲ್ಲಿ ಹಾಗೂ ಕಾಶ್ಮೀರವೂ ಜಾತ್ಯಾತೀತ, ಸಮಾಜವಾದದ ಪ್ರಕ್ರಿಯೆಯಲ್ಲಿ ಸಂಪೂರ್ಣವಾಗಿ ಭಾರತದೊಂದಿಗೆ ವಿಲೀನವಾಗಲು ಇವರೆಲ್ಲರೂ ಶ್ರಮಿಸಿದ್ದರು. ಪ್ರಮುಖ ಮುಖಂಡರಾದ ಭಕ್ಷಿ ಗುಲಾಂ ಮೊಹಮ್ಮದ್. ಜಿ.ಎಮ್. ಸಾಧಿಕ್ ಸೈಯದ್ ಮೀರ್ ಖಾಸಿಂ ಮತ್ತು ಡಿ.ಪಿ. ದಾರ್ ಇವರುಗಳಿಗೆ ಸಿಕ್ಕಿದ ಸುಳಿವು, ಸೂಚನೆಗಳಿಂದ ಅಬ್ದುಲ್ಲಾರ ಮೇಲಿನ ಸಿಟ್ಟು, ಅಸಮಾದಾನ ಮತ್ತೂ ತೀಕ್ಷ್ಣವಾಯಿತು. ಅಬ್ದುಲ್ಲಾ ಸಂಶಯಾಸ್ಪದ ವ್ಯಕ್ತಿಯಾಗಿ ಪರಿಣಮಿಸಿದರು. ವರಿಷ್ಠ ಆಡಳಿತಾಧಿಕಾರಿಯಾದ ಶೇಕ್‌ರವರು ತಮ್ಮ ಅಧಿಕಾರ ಸಾಮರ್ಥ್ಯದಿಂದ ಕಾಶ್ಮೀರವನ್ನು ಸ್ವತಂತ್ರ ರಾಜ್ಯವೆಂದು ಘೋಷಿಸುವ (ಪ್ರಕಟಿಸು) ಸನ್ನಾಹದಲ್ಲಿ ಕಾರ್ಯಮಗ್ನರಾಗಿದ್ದಾರೆಂದು

ಮತ್ತು ಕಾಶ್ಮೀರದಲ್ಲಿ ಹೊಸ ರಾಜ ಮನೆತನವನ್ನು ಸ್ಥಾಪಿಸುವರೆಂದು ಭಾವಿಸಿದರು. ಈ ಕುರಿತು ನೆಹರೂರವರು ಯಾವುದಾದರೂ ಕ್ರಮ ಕೈಗೊಳ್ಳಬೇಕೆಂದು ಇವರುಗಳು ಬಯಸಿದರು.

9ನೇ ಆಗಸ್ಟ್, 1953ರಂದು ಅಬ್ದುಲ್ಲಾರ ವಿರುದ್ಧ ಮೊಕದ್ದಮೆ ಹೂಡಲಾಯಿತು. ಭಕ್ತಿ ಗುಲಾಂ ಮೊಹಮ್ಮದ್‌ರವರ ಸಲಹೆಯ ಮೇರೆಗೆ ಅಬ್ದುಲ್ಲಾರನ್ನು ಪ್ರಧಾನಮಂತ್ರಿ ಪದವಿಯಿಂದ ರಾಜ್ಯಪಾಲರಾಗಿದ್ದ ಕರಣಸಿಂಗ್‌ರವರು ವಜಾ ಮಾಡಿದರು. ತೆರವಾದ ಪ್ರಧಾನಮಂತ್ರಿ ಸ್ಥಾನಕ್ಕೆ ಭಕ್ಷಿ ಗುಲಾಂ ಮೊಹಮ್ಮದ್‌ರವರನ್ನು ಆಗಸ್ಟ್ 8, 1953ರ ಮಧ್ಯರಾತ್ರಿಯಲ್ಲಿ ನೇಮಕ ಮಾಡಲಾಯಿತು. 1958ರಲ್ಲಿ ನೆಹರೂರವರಿಂದ ಶೇಕ್ ಅಬ್ದುಲ್ಲಾ ಬಿಡುಗಡೆ ಪಡೆದರು. ಇವರ ಬಿಡುಗಡೆಯಂದು ಇವರನ್ನು ಮಹಾಪುರುಷನಂತೆ ಸ್ವಾಗತಿಸಲಾಯಿತು. ಇವರಿಂದ ಜಮ್ಮು ಮತ್ತು ಕಾಶ್ಮೀರದಲ್ಲಿ ಅಧಿಕಾರದಲ್ಲಿದ್ದವರಿಗೆ ಹೆದರಿಕೆಯಾಯಿತು. ಅಬ್ದುಲ್ಲಾ ಇದನ್ನು ಆತೀಶ್-ಇ-ಚೀನಾರ್‌ನಲ್ಲಿ ಬರೆದಿದ್ದಾರೆ. ಮೂರೂವರೆ ತಿಂಗಳ ನಂತರ ಶೇಕ್‌ರವರು ಅಪರಾಧವೊಂದರಲ್ಲಿ ಕೈಜೋಡಿಸಿದ್ದಾರೆಂಬ ಆಪಾದನೆಯ ಮೇಲೆ ಮತ್ತೆ ಜೈಲಿಗೆ ಹೋದರು ಆರು ವರ್ಷಗಳ ನಂತರ 8ನೇ ಏಪ್ರಿಲ್ 1964ರಂದು ಈ ಮೊಕದ್ದಮೆಯನ್ನು ಅನಾವಶ್ಯಕವಾಗಿ ಹೂಡಲಾಗಿದ್ದೆಂದು ಹಿಂದಕ್ಕೆ ಪಡೆದು ಅಬ್ದುಲ್ಲಾರನ್ನು ಬಿಡುಗಡೆ ಮಾಡಿದರು. ಶೇಕ್ ಮತ್ತೆ ಸ್ವತಂತ್ರರಾದರು. ನೆಹರೂರವರನ್ನು ಕಂಡು ರಾಷ್ಟ್ರದ ಗಡಿ ಪ್ರದೇಶದಲ್ಲಿ ಶಾಂತ ವಾತಾವರಣವನ್ನು ರೂಪಿಸಲು ಸಲುವಾಗಿ ಪಾಕಿಸ್ತಾನದೊಡನೆ ಮಾತುಕತೆ ನಡೆಸಬೇಕೆಂದು ವಿನಯಪೂರ್ವಕವಾಗಿ ತಿಳಿಸಿದರು. ಆ ಸಂದರ್ಭದಲ್ಲಿ ನೆಹರೂರವರು ಆರೋಗ್ಯದ ಸ್ಥಿತಿ ತೀರಾ ಹದಗೆಟ್ಟಿತ್ತು. ಆದ್ದರಿಂದ ಆಯೂಬ್‌ಖಾನ್‌ರವರನ್ನು ದೆಹಲಿಗೆ ಬರುವಂತೆ ಸಲಹೆ ನೀಡಿ ಅಬ್ದುಲ್ಲಾರನ್ನು ಕಳುಹಿಸಿ ಕೊಟ್ಟರು. ಅಂತಯೇ ಅಬ್ದುಲ್ಲಾರವರು ರಾವಲ್ ಪಿಂಡಿಗೆ ಹೊರಟರು. ಅಲ್ಲಿ ಅವರಿಗೆ ಅಭೂತಪೂರ್ವ ಸ್ವಾಗತ ನೀಡಲಾಯಿತು. ಜೊತೆಗೆ ಅಯೂಬ್‌ಖಾನ್‌ರವರು ಮಾತುಕತೆಗಾಗಿ ದೆಹಲಿಗೆ ಬರಲು ಸಮ್ಮತಿಸಿದರು. ಶೇಕ್ ಇನ್ನೂ ರಾವಲ್ ಪಿಂಡಿಯಲ್ಲಿರುವಾಗಲೇ ನೆಹರೂಜಿಯವರ ಮರಣ ವಾರ್ತೆ ತಲುಪಿತು. ಸುದ್ದಿ ತಿಳಿದ ಅಬ್ದುಲ್ಲಾಗೆ ಅಪಾರ ದುಃಖವಾಯಿತು. ತಮ್ಮನೆಚ್ಚಿನ ನಾಯಕ, ಆತ್ಮೀಯ ಸ್ನೇಹಿತನಿಗೆ ಅಂತಿಮ ಗೌರವವನ್ನು ಸಲ್ಲಿಸಲು ಆ ಕೂಡಲೇ ದೆಹಲಿಗೆ ಹೊರಟು ಬಂದರು.

ಆನಂತರ ಶೇಕ್ ಹಜ್ ಯಾತ್ರೆಗೆ ತೆರಳಿದರು. ಈ ಸಂದರ್ಭದಲ್ಲಿ ಲಂಡನ್, ಪ್ಯಾರಿಸ್ ಇನ್ನೂ ಹಲವಾರು ರಾಷ್ಟ್ರಗಳಿಗೆ ಭೇಟಿ ನೀಡಿದರು. ಎಲ್ಲೆಡೆಗಳಿಂದಲೂ ಇವರಿಗೆ ಅಭೂತಪೂರ್ವ ಸ್ವಾಗತ ದೊರೆಯಿತು. ಇವರ ಕೆಲವು ವಿದೇಶ ಭಾಷಣಗಳ ವರದಿಗಳು ಗೊಂದಲವನ್ನುಂಟು ಮಾಡಿ ಇವರು ಭಾರತಕ್ಕೆ ಮರಳಿದ ಕೂಡಲೇ ಮತ್ತೊಮ್ಮೆ ಐದು ವರ್ಷಗಳವರೆಗೆ ಇವರನ್ನು ದಸ್ತಗಿರಿ ಮಾಡಲಾಯಿತು. ಭಾರತ ಹೊರಗಿನ ಇವರ ಕಾರ್ಯಚಟುವಟಿಗಳು ದೇಶದ ಹಿತಾಸಕ್ತಿಗೆ ಮಾರಕವಾಗಿದೆಯೆಂದು ಭಾರತ ಸರ್ಕಾರವು

ಪರಿಗಣಿಸಿತು. ವಿದೇಶಗಳಲ್ಲಿರುವ ಭಾರತದ ರಾಯಭಾರಿಗಳು ಕಳುಹಿಸಿರುವ ತಪ್ಪು ವರದಿಗಳ ಪರಿಣಾಮದಿಂದ ಹೀಗಾಯಿತೆಂಬುದು ಶೇಕ್ ರವರ ಅಭಿಪ್ರಾಯ.

ಜನವರಿ 2, 1968ರಂದು ಶ್ರೀಮತಿ ಇಂದಿರಾಗಾಂಧೀಯವರಿಂದ ಶೇಕ್‌ರವರ ಬಿಡುಗಡೆಯಾಯಿತು. ಅಂದು ಈದ್ ದಿನವಾಗಿತ್ತು. ಅಂದಿನ ದಿನ ಈದ್ಗಾ ಮೈದಾನದ ತಮ್ಮ ಭಾಷಣದಲ್ಲಿ "ಒಬ್ಬ ಸಾಮಾನ್ಯ ವ್ಯಕ್ತಿಯೂ ಕೂಡ ಶಾಂತಿ ಹಾಗೂ ಸ್ವಾತಂತ್ರ್ಯದಿಂದೊಡಗೂಡಿದ ಭಯರಹಿತ ಜೀವನ ನಡೆಸುವುದನ್ನು ತಾವು ಕಣ್ಣಾರೆ ನೋಡಬೇಕೆಂದೂ ಇದಕ್ಕಾಗಿ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಎದ್ದಿರುವ ದ್ವೇಷದ ಕಂದರಗಳನ್ನು ಒಡೆದುರುಳಿಸಬೇಕೆಂಬುದೇ ತಮ್ಮ ಜೀವನದ ಮುಖ್ಯ ಉದ್ದೇಶ" ವೆಂದು ತಿಳಿಸಿದರು.

ತಮ್ಮ ಬಿಡುಗಡೆಯ ನಂತರ ಅಬ್ದುಲ್ಲಾರವರು ಜಮ್ಮುವಿನಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಕರೆದರು. ಬೇರೆ ಬೇರೆ ರಾಜ್ಯಗಳಿಂದ ಈ ಸಮ್ಮೇಳನದಲ್ಲಿ ಭಾಗವಹಿಸಲು ಪ್ರತಿನಿಧಿಗಳು ಜಮ್ಮುವಿಗೆ ಬಂದರು. ಈ ಸಭೆಯನ್ನುದ್ದೇಶಿಸಿ ಜಯಪ್ರಕಾಶ್ ನಾರಾಯಣರವರು ಮಾತನಾಡುತ್ತಾ "ಶೇಕ್ ಅಬ್ದುಲ್ಲಾ ಹಾಗೂ ಖಾನ್ ಅಬ್ದುಲ್ ಗಫರ್ ಖಾನ್‌ರವರನ್ನು ಜಾತ್ಯಾತೀತವಾದ ಪ್ರತೀಕವೆಂದು ಬಣ್ಣಿಸಿದರು. ಇವರು ಎರಡು ರಾಷ್ಟ್ರಗಳ ತತ್ವವನ್ನು ಎಂದೂ ಒಪ್ಪಿಸಿಕೊಂಡಿಲ್ಲವೆಂದರು. ತಮ್ಮ ಸಮಸ್ಯೆಗಳಿಗೆ ಭಾರತದಲ್ಲೆ ಪರಿಹಾರ ಕಂಡುಕೊಳ್ಳಬೇಕೆಂದು ಕಾಶ್ಮೀರಿ ಜನತೆಗೆ ಸಲಹೆ ನೀಡಿದರು. ನಿಮ್ಮೆಲ್ಲ ಉತ್ಕಟಾಕಾಂಕ್ಷೆಗಳಿಗೆ ಭಾರತೀಯರೆಲ್ಲರೂ ಬೆಂಬಲ, ನೆರವು ನೀಡುವರೆಂದು ಅವರು ಹೇಳಿದರು. ಶೇಕ್‌ರವರ ಸಮ್ಮತಿ ಇಲ್ಲದೆ ಕಾಶ್ಮೀರದ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವೇ ಇಲ್ಲ" ವೆಂದು ತಮ್ಮ ಭಾಷಣದಲ್ಲಿ ತಿಳಿಸಿದರು

ಈ ಮಧ್ಯೆ ಪಾಕಿಸ್ತಾನದ ಪರಿಸ್ಥಿತಿ ತೀರಾ ಹದಗಟ್ಟಿತ್ತು. ಪೂರ್ವ ಬಂಗಾಳದಲ್ಲಿ ಯುದ್ಧ ನಡೆಯುತ್ತಿತ್ತು. ಇದರ ಫಲವಾಗಿ ಪಾಕಿಸ್ತಾನದಿಂದ ಪೂರ್ವ ಬಂಗಾಳ (ಬಾಂಗ್ಲಾದೇಶ) ವಿಭಜನೆಯಾಯಿತು. ಭಾರತೀಯ ಸೇನೆಯು ಪೂರ್ವ ಬಂಗಾಳ ಮತ್ತು ಕಾಶ್ಮೀರಗಳಲ್ಲಿ ಪಾಕಿಸ್ತಾನವನ್ನು ಸೋಲಿಸಿ ಆಜಾದ್ ಕಾಶ್ಮೀರದ ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡಿತು. ಕಾಶ್ಮೀರದ ಆಂತರಿಕ ಅತೃಪ್ತಿ ಹೆಚ್ಚಾಗತೊಡಗಿತು. ಭಾರತ ಸರ್ಕಾರದಿಂದ ಅದು ಬೇಸರಗೊಂಡಿತು.

ಆಲ್ ಇಂಡಿಯಾ ಮೆಡಿಕಲ್ ಸೈನ್ಸ್ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದ ಶೇಕ್ ಸಾಹೇಬರು ಅಲ್ಲಿಂದಲೇ ಇಂದಿರಾರವರಿಗೆ ಪತ್ರ ಬರೆದರು. 1975ಕ್ಕೂ ಮೊದಲು ಇವರೀರ್ವರನಡುವೆ ಅನೇಕ ಬಾರಿ ಮಾತುಕತೆಗಳು ನಡೆದಿದ್ದವು. ಈ ಮಾತುಕತೆಗಳ ಪರಿಣಾಮದಿಂದಾಗಿ ಭಾರತ ಮತ್ತು ಕಾಶ್ಮೀರ ಹೊಸದಾಗಿ ಚುನಾವಣೆ ನಡೆಯಿಸಬೇಕೆಂದು

ಸಲಹೆ ನೀಡಿದ್ದರು. ದೇಶದಲ್ಲಿ ಆರ್ಥಿಕ ಅವ್ಯವಯ ಭರ್ತಿ ಮಾಡಬೇಕಾಗಿರುವ ಸನ್ನಿವೇಶದಲ್ಲಿ ಚುನಾವಣಾ ವೆಚ್ಚವನ್ನು ಭರಿಸಲು ಅಸಾಧ್ಯವೆಂದು ಬಗೆದು ಇಂದಿರಾಜಿಯವರು ಇದಕ್ಕೆ ಸಮ್ಮತಿ ನೀಡಲಿಲ್ಲ. ಬದಲಿಗೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಮುಖಂಡರಾಗಿದ್ದ ಮೀರ್ ಖಾಸಿಂರವರಿಂದ ಮುಖ್ಯಮಂತ್ರಿ ಸ್ಥಾನವನ್ನು ಪಡೆಯುವಂತೆ ಅಬ್ದುಲ್ಲಾರಿಗೆ ಸಲಹೆ ನೀಡಿದರು. ಅಂತೆಯೇ ಫೆಬ್ರವರಿ 24, 1975ರಂದು ಕಾಂಗ್ರೆಸ್ ಸದಸ್ಯತ್ವವನ್ನು ಹೊಂದಿಲ್ಲದಿದ್ದರೂ ಕಾಂಗ್ರೆಸ್ ಶಾಸನ ಸಭೆಯಲ್ಲಿ ಅವಿರೋಧವಾಗಿ ಅಬ್ದುಲ್ಲಾ ಆಯ್ಕೆಯಾದರು. ಇವರ ನಾಯಕತ್ವದ ಸಚಿವ ಮಂಡಳಿಯ ಆಡಳಿತದಲ್ಲಿ ದಕ್ಷತೆ ಹಾಗೂ ಪ್ರಾಮಾಣಿಕತೆಗಳು ನೆಲೆಸಿದವು.

ಜೂನ್ 20, 1975ರಂದು ಶ್ರೀಮತಿ ಇಂದಿರಾಗಾಂಧಿ ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿದರು. ರಾಜಕೀಯ ನಿರ್ಬಂಧ ಹಾಗೂ ರಾಜ್ಯದಲ್ಲಿ ವೃತ್ತ ಪತ್ರಿಕೆಗಳ ದೋಷ ವಿಮರ್ಶನಾಧಿಕಾರದ ವಿರುದ್ಧ ಶೇಕ್‌ರವರು ತಮ್ಮ ಅಸಮ್ಮತಿ ಸೂಚಿಸಿದರು.

ಜುಲೈ 1977ರ ಕಾಂಗ್ರೆಸ್‌ನ ಸೋಲಿನಿಂದ ಎಚ್ಚೆತ್ತುಕೊಂಡ ಜನತಾ ಪಕ್ಷದ ಉದಯವಾಯಿತು. ಜಮ್ಮು ಮತ್ತು ಕಾಶ್ಮೀರದಲ್ಲಿ ಮರು ಚುನಾವಣಾ ನಡೆಯಿತು. ಕಡೆಗಣಿಸಲಾಗಿದ್ದ ಆರೋಗ್ಯ ಹಾಗೂ ನಿಶ್ಶಕ್ತಿಯಿಂದಾಗಿ ಚುನಾವಣಾ ಪ್ರಚಾರಕ್ಕಳಿಯಲಾಗಲಿಲ್ಲ. ಆದರೂ ಶೇಕ್ ಮತ್ತವರ ಪಕ್ಷವು ಪ್ರಚಂಡ ಜಯಭೇರಿ ಪಡೆಯಿತು. ಅಬ್ದುಲ್ಲಾರ ಪತ್ನಿ ಬೇಗಂ ಶೇಕ್ ಅಬ್ದುಲ್ಲಾ ಮತ್ತು ಅವರ ಮಗ ಡಾ: ಫಾರೂಕ್ ಅಬ್ದುಲ್ಲಾ ತುಂಬಾ ಶ್ರಮವಹಿಸಿದ್ದರು. ಜುಲೈ 9, 1977ರಂದು ಅಂತಿಮ ಬಾರಿಗೆ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಅಬ್ದುಲ್ಲಾರವರು ದುರಾದೃಷ್ಟವಶಾತ್ ಹೆಚ್ಚು ದಿನ ಬದುಕಲಿಲ್ಲ.

1984ರಲ್ಲಿ ಪ್ರಕಟಗೊಂಡ ತಮ್ಮ ಜೀವನ ಚರಿತ್ರೆಯಾದ "ಆತೀಶ್-ಇ-ಚಿನಾರ್"ನಲ್ಲಿ ತಾವು ಕಾಶ್ಮೀರದ ಶಾಸನಸಭೆಯನ್ನು ನೇಮಿಸಿದ್ದರ ಹಿನ್ನೆಲೆಯಲ್ಲಿ ತಮ್ಮ ಪ್ರಾರಂಭಿಕ ಭಾಷಣದಲ್ಲಿ ತಮ್ಮ ಮುಂದಿರುವ ಮೂರು ಐಚ್ಛಿಕ ಅಂಶಗಳನ್ನು ಕುರಿತಂತೆ 1) ಭಾರತದೊಂದಿಗೆ ಒಪ್ಪಂದ 2) ಪಾಕಿಸ್ತಾನದೊಂದಿಗೆ ಒಪ್ಪಂದ 3) ರಾಜ್ಯ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಕೇವಲ ಭಾರತದೊಂದಿಗೆ ಮಾತ್ರವೆ ತನ್ನ ಸಮ್ಮತಿ. ತಮ್ಮ ಪ್ರಾರಂಭಿಕ ಭಾಷಣಗಳಲ್ಲಿ ಕಾಶ್ಮೀರದಲ್ಲಿ ಚುನಾವಣೆ ನಡೆದ ಸಂದರ್ಭದಲ್ಲಿ ಕಾಶ್ಮೀರಿಯನ್ನರು ಸ್ವಇಚ್ಛೆಯಿಂದ ಭಾರತದೊಂದಿಗೆ ವಿಲೀನವಾಗಬೇಕೆಂದು ತಮ್ಮ ಅಭಿಪ್ರಾಯವನ್ನು ದೃಢಪಡಿಸಿದ್ದರು. ಕಳೆದ 30 ವರ್ಷಗಳಲ್ಲಿ ತಾವು ಮತ್ತು ತಮ್ಮ ಕಾಶ್ಮೀರಿ ಜನರು ಅನುಭವಿಸಿದ ಅಸಂಖ್ಯಾತ ತೊದರೆ, ತೊಡಕುಗಳನ್ನು ತಮ್ಮ ಆತ್ಮ ಕಥೆಯಲ್ಲಿ ಸೇರ್ಪಡಿಸಿದ್ದಾರೆ. ಆದರೂ ಅವರು ಭಾರತದೊಂದಿಗೆ ವಿಲೀನವಾಗಿರಬೇಕೆಂದೇ ತಮ್ಮ ಕಾಶ್ಮೀರಿಯನ್ನರಿಗೆ ನೀಡುತ್ತಾ ಬಂದಿರುವ ಅತ್ಯುತ್ತಮ ಸಲಹೆ.

1953ರ ತಮ್ಮ ಬಂಧನಕ್ಕೆ ಸಂಬಂಧಿಸಿದಂತೆ ಮುಚ್ಚಮರೆಯಿಲ್ಲದೆ ತಮ್ಮನ್ನು ಮತವಿಧಿಯ ಪಿತೂರಿ ನಡೆಸಿ ಜೀವಂತವಾಗಿ ಆಹುತಿ ತೆಗೆದುಕೊಳ್ಳಲಾಯಿತೆಂದೂ, ಇದನ್ನು (ಪಿತೂರಿ) ಬಯಲಿಗೆಳೆಯುವ ಮುನ್ನವೇ ತಮ್ಮನ್ನು ಬಂಧಿಸಲಾಯಿತೆಂದೂ, ಇದರಿಂದ ನಿಜಾಂಶ ಸಾಬೀತು ಪಡಿಸಲು ಸಾಧ್ಯವಾಗಲಿಲ್ಲವೆಂದು ಅಬ್ದುಲ್ಲಾ ತಮ್ಮ ಆತ್ಮಕಥೆಯಲ್ಲಿ ಉಲ್ಲೇಖಿಸಿದ್ದಾರೆಂದು ತಮ್ಮ ಹಾಗೂ ಭಾರತ ಸರ್ಕಾರದ ನಡುವಿನ ಭಿನ್ನಾಭಿಪ್ರಾಯವನ್ನು ಪ್ರಾರಂಭದ ಹಂತದಲ್ಲಿ ತೊಡೆದು ಹಾಕಲು ಯೋಚಿಸದ್ದೇ ಆದರೆ ಕೆಲವು ಮಂದಿ ಹುಚ್ಚು ಕಾಶ್ಮೀರಿಯನ್ನರು ನನ್ನನ್ನು ತಡೆದರು ಎಂದಿದ್ದಾರೆ. ವಿಶಾಲ ಹೃದಯದ ಕ್ಷಮಾಶೀಲ ಸ್ವಭಾವದವರಾದ ಅಬ್ದುಲ್ಲಾ ಹಿಂದಿನ ಕಹಿಗಳನ್ನೆಲ್ಲಾ ಮರೆತರು. ಶೇಕ್ ಅಧಿಕಾರಕ್ಕೆ ಹಿಂತಿರುಗಿ ಬಂದ ಮೇಲೆ ಭಾರತವನ್ನು ಬಲಪಡಿಸುವ ಮತ್ತು ಭಾರತದ ಸಂವಿಧಾನದೊಂದಿಗೆ ಕಾಶ್ಮೀರವನ್ನು ಬಂಧಿಸುವ ಮತ್ತೊಂದು ಅವಕಾಶ ದೊರೆಯಿತು. ಸೆಪ್ಟೆಂಬರ್ 8, 1982ರ ಅಬ್ದುಲ್ಲಾರ ಮರಣದಿಂದ ಅವರು ಕೈಗೊಂಡ ಕಾರ್ಯವು ಅರ್ಧದಲ್ಲೇ ನಿಂತಿತು.

ಸಂಕೀರ್ಣ ಹಾಗೂ ಚರ್ಚಾಸ್ಪದ ವ್ಯಕ್ತಿಯಾಗಿದ್ದ ಅಬ್ದುಲ್ಲಾರವರು ಶ್ರೇಷ್ಠ ಭಾರತೀಯ. ಅವರ ದೇಶಪ್ರೇಮ ಮತ್ತು ಜಾತ್ಯಾತೀತ ಮನೋಭಾವವನ್ನು ಪ್ರಶ್ನಿಸಲಾಗದು.

ಭಾರತ ರಾಜಕೀಯದಲ್ಲಿ ಶೇಕ್ ಅಬ್ದುಲ್ಲಾ ಅರಿತದ್ದೇನು?

ಪ್ರೊ: ರಶೀದುದ್ದೀನ್ ಖಾನ್ *

ಭಾರತೀಯ ಸಾತಂತ್ರ್ಯ ಸಂಗ್ರಾಮದಲ್ಲಿ ಕೊಡುಗೆಯಿತ್ತವರಲ್ಲಿ ಹೆಚ್ಚಿನವರು ನಮ್ಮೊಂದಿಗೆ ಈಗಿಲ್ಲ. ರಾಜಕೀಯದಂತೆಯೇ ಬದುಕಿನ ಇತರ ವಲಯಗಳಲ್ಲಿಯೂ ಸಂಭಾವಿತ ವ್ಯಕ್ತಿಗಳೆನಿಸಿಕೊಂಡವರ ಸಂಖ್ಯೆ ಇಂದು ಇಳಿಮುಖವಾಗುತ್ತಿದೆ. ತತ್ಪರಿಣಾಮವೆಂಬಂತೆ 'ಭ್ರಷ್ಟತೆ' ಇಂದು ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಬಹಳ ಗಂಭೀರವಾಗಿ ವಿವರಿಸಲ್ಪಡುವಂತೆ ಸೇರಿ ಹೋಗುತ್ತಿದೆ. ಒಬ್ಬ ಒಳ್ಳೆಯ ಮನುಷ್ಯ ಇಂದು ಹಳೆಯ ಪೀಳಿಗೆಯ ಒಂದು ಉಳಿಕೆ, ವ್ಯವಸ್ಥೆಯ ಕುಂಠಿತ ಅಂಗ.

1982ರಲ್ಲಿ ನಿಧನ ಹೊಂದಿದ ಶೇಕ್ ಮಹಮ್ಮದ್ ಅಬ್ದುಲ್ಲಾ ಕೂಡ ತಮ್ಮ ಜೀವಿತ ಕಾಲದಲ್ಲಿಯೇ ಇಂತಹ ಹಳೆಯ ಪೀಳಿಗೆಯ ಉಳಿಕೆ. ಕೇವಲ ಕಾಶ್ಮೀರದಲ್ಲಷ್ಟೇ ಅಲ್ಲದೇ ಭಾರತದಲ್ಲೆಲ್ಲಾ ಲಕ್ಷಾಂತರ ಜನರು ಇವರ ಸಾವಿನಿಂದ ಶೋಕಿಸಿದರು. ಅವರ ಸಾವು ದೇಶಕ್ಕೆ ತುಂಬಲಾರದ ನಷ್ಟವನ್ನುಂಟು ಮಾಡಿತು. ಶೇಕ್ ಅಬ್ದುಲ್ಲಾರವರು ದೇಶಪ್ರೇಮದ ಚೈತನ್ಯವನ್ನು ಧ್ಯೇಯೋದ್ದೇಶಗಳನ್ನು, ತ್ಯಾಗ ಮನೋಭಾವ, ಸಾಮಾಜಿಕ ಗುರಿಗಳತ್ತ ತಾಳ್ಮೆಯ ನಡೆ ಸಮಗ್ರ ವ್ಯಕ್ತಿತ್ವದ ಬೆಳವಣಿಗೆ ಇವುಗಳನ್ನು ಸಾರ್ವಜನಿಕರಲ್ಲಿ ತುಂಬಿದ ಕಾಲಘಟ್ಟವೊಂದರಲ್ಲಿ ಕೊಂಡಿಯಾಗಿದ್ದರು.

ವ್ಯಕ್ತಿಗಳನ್ನು ಕಾಲಘಟ್ಟವೊಂದು ಹೇಗೆ ವಿಶಿಷ್ಟವಾಗಿಸುವುದೋ ಅಂತೆಯೇ ವ್ಯಕ್ತಿಗಳು ಕೂಡ ಕಾಲಘಟ್ಟಗಳನ್ನು ವಿಶಿಷ್ಟವಾಗಿಸಬಲ್ಲರು. ಸ್ವಾತಂತ್ರ್ಯ ಸಂಗ್ರಾಮ ದೇಶಪ್ರೇಮಗಳ ವೀರಾವೇಶಗಳಿಗೆ ನೀಡಿದ ರೂಪ ಇಂದು ಇತಿಹಾಸವಾಗಿದೆ. ತಮ್ಮ ಪೀಳಿಗೆಯ ಶ್ರೇಷ್ಠರಲ್ಲಿ ಒಬ್ಬರಾದ ಶೇಕ್ ಸಾಹೇಬರ ಸಾವು ರಾಷ್ಟ್ರೀಯ ರಾಜಕೀಯದಲ್ಲಿ ತಮ್ಮ ಸಾವಿನಿಂದ ತುಂಬಲಾರದ ನಷ್ಟವನ್ನು ತಂದಿತ್ತ ಅನೇಕ ಮಹತ್ವದ ವ್ಯಕ್ತಿಗಳನ್ನು ನೆನಪಿಸುತ್ತದೆ. ಖ್ಯಾತ ಕವಿ ಇಕ್ಬಾಲ್‌ರವರ ಪದ್ಯದ ಈ ಕೆಳಗಿನ ಸಾಲುಗಳ ಮೇಲಿನ ಮಾತುಕತೆಗಳಿಗೊಂದು ಉತ್ತಮ ನಿದರ್ಶನ.

"ಜೋ ಬಡ ಕಾಶ್ ಥೇ ಪುರಾನೆ ವೋ ಉಡಾಯೇ ಜಾತೆ ಹೈ

ಕಹೀಂ ಸೆ ಅಬ್-ಎ-ಬಾಕೆ-ದವಾಂ ಲಾ ಸಕೆ"

ರಾಜಕೀಯ ಹೇಗೆ ಉನ್ನತ ವ್ಯಕ್ತಿಗಳೆನಿಸಿಕೊಂಡಿದ್ದರೋ ಅಂತೆಯೇ ಶೇಕ್ ಅಬ್ದುಲ್ಲಾ ಶಾರೀರಿಕವಾಗಿಯೂ ಎತ್ತರದ ಗಡುಸಾದ ಸುಂದರ ವ್ಯಕ್ತಿ. ಎತ್ತರದ ವ್ಯಕ್ತಿಗಳೆಲ್ಲರೂ ಎತ್ತರದ ಕೆಲಸಗಳನ್ನೇ ಮಾಡುವರು ಎಂದಾದರೆ ಶೇಕ್ ಸಾಹೇಬರ ಸಾಧನೆಗಳಲ್ಲಿ ಎರಡಾದರೂ

---

* ನಿರ್ದೇಶಕರು ತೃತೀಯ ಪ್ರಪಂಚದ ಅಧ್ಯಯನ ಅಕಾಡೆಮಿ: ಸಂಸತ್ತಿನ ಮಾಜಿ ಸದಸ್ಯರು

ನಮ್ಮ ಮುಂದೆ ನಿಲ್ಲುತ್ತವೆ. ರಾಷ್ಟ್ರೀಯ ರಾಜಕಾರಣ ಬ್ರಿಟಿಷ್ ಆಡಳಿತದ ಕೊನೆಯ ಹಂತ ಮತ್ತು ಸ್ವಾಂತ್ರ್ಯ ನಂತರದ ಬೆಳವಣಿಗೆಯ ದಶಕಗಳಲ್ಲಿ ಅವರು ಮಾಡಿದ ಸಾಧನೆಗಳು. ಶತಮಾನಗಳಿಂದ ಪರತಂತ್ರ ಔದಾಸೀನ್ಯ ಮತ್ತು ಕಸಿದು ಕೊಳ್ಳುವಿಕೆಯಿಂದ ಕುಸಿದಹೋಗಿದ್ದ ತಮ್ಮ ತಾಯ್ನೆಲದ ಜನರಲ್ಲಿ ಘನತೆ ಮತ್ತು ಹೆಮ್ಮೆಯ ಪ್ರಜ್ಞೆಯ ಬೀಜಗಳು ಬಿತ್ತಿದವು. ಎರಡನೆಯದಾಗಿ, ಸುಮಾರು ಅರ್ಧ ಶತಮಾನದಷ್ಟು ಕಾಲ ರಾಷ್ಟ್ರೀಯ ರಾಜಕಾರಣದಲ್ಲಿ ದೈತ್ಯನಾಗಿ ಧರ್ಮನಿರಪೇಕ್ಷತೆ, ಸಮಾನತೆ, ಇವುಗಳ ಪರವಾಗಿ ನಿಂತು ಕೋಮುವಾದ, ಊಳಿಗಮಾನ್ಯ ಪದ್ಧತಿ ಮತ್ತು ಸಾಮಾಜಿಕ ಅಸಮಾನತೆಯ ವಿರುದ್ಧವಾಗಿ ಹೋರಾಡಿದರು. ಹಿಂದೂ ಪದ್ಧತಿಯ ವಿವಿಧ ಅಂಶಗಳನ್ನು ರಾಷ್ಟ್ರೀಯತೆಯ ಅಂಶಗಳನ್ನಾಗಿ ಮಾರ್ಪಡಿಸಿಕೊಂಡಂತಹ, ಜನಸಂಖ್ಯೆಯ ಬಹುಭಾಗವಾಗಿ ಹಿಂದುಗಳನ್ನು ಹೊಂದಿರುವ ದೇಶದಲ್ಲಿ ಅಲ್ಪಸಂಖ್ಯಾತ ಕೋಮಿನಿಂದ ಬಂದ ಒಬ್ಬ ವ್ಯಕ್ತಿ ಧರ್ಮನಿರಪೇಕ್ಷ ತತ್ವಕ್ಕೆ ಬದ್ಧನಾಗಿ ಜೀವನಪರ್ಯಂತ ಹೋರಾಡಿದುದನ್ನು ಸರಿಯಾಗಿ ಗುರುತಿಸಲಿಲ್ಲವೆನ್ನಬಹುದು. ನಿಶ್ಚಿತ ರೂಪವಿರದ ಹಿಂದೂ ತತ್ವಗಳು ಸತ್ಯದ ಅನ್ವೇಷಣೆಗೆಂದು ಹಲವು ದಾರಿಗಳತ್ತ ಕೈ ತೋರಿದರೂ ಸಹನೆ, ಸಹಮತಗಳನ್ನು ಬೆಳೆಸುವುದಲ್ಲದೆ ಧರ್ಮನಿರಪೇಕ್ಷ ತತ್ವದ ಸಾರವನ್ನು ಎತ್ತಿಹಿಡಿಯುತ್ತದೆ. ಆದರೆ. ಮತ್ತೊಂದು ಕಡೆ ಅದು ಮುಸ್ಲಿಮರಲ್ಲಿ ಧರ್ಮನಿರಪೇಕ್ಷತೆಯೆಂದು ಸಾಂಪ್ರದಾಯಿಕ ಇಸ್ಲಾಮಿಕ್ ಸಿದ್ಧಾಂತಗಳಿಂದ ಕವಲೊಡೆಯುವುದಾಗುತ್ತದೆ. ಹಾಗಾಗಿ, ಮುಸ್ಲಿಮನಾಗಿದ್ದುಕೊಂಡು ಧರ್ಮನಿರಪೇಕ್ಷತೆಯ ಬೆಂಬಲಿಗನಾಗಿರುವುದು ಹೊಸ ದೃಷ್ಟಿ. ಸ್ವಾತಂತ್ರ್ಯಕ್ಕಾಗಿ ತಮ್ಮ ಇತರ ಧರ್ಮೀಯ ಬಂಧುಗಳೊಂದಿಗೆ ಸರಿಸಮನಾಗಿ ಅನೇಕ ಪ್ರಥಮದರ್ಜೆಯ ನೇತಾರರು ಹೋರಾಡಲು ಸಾಧ್ಯವಾದುದ್ದು ಅವರಲ್ಲಿದ್ದ ಆಗಾಧ ರಾಜಕೀಯ ಜ್ಞಾನ ಮತ್ತು ಬಹುಧರ್ಮೀಯ ಮತ್ತು ಬಹುಸಾಂಪ್ರದಾಯಿಕ ರಾಷ್ಟ್ರೀಯತೆಯಲ್ಲಿದ್ದ ನಂಬಿಕೆಯ ಕಾರಣದಿಂದ, ಇವರಲ್ಲಿ ಬಾದ್‌ಷ್‌ಖಾನ್ (ಖಾನ್ ಅಬ್ದುಲ್ ಗಫರ್ ಖಾನ್) ಮತ್ತು ಶೇಕ್ ಅಬ್ದುಲ್ಲಾ ಪ್ರತ್ಯೇಕವಾಗಿ ನಿಲ್ಲುತ್ತಾರೆ.

ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿದ್ದ ಭಾಗದ ನೇತಾರರಾಗಿಯೂ ಪ್ರತ್ಯೇಕ ಮುಸ್ಲಿಂ ರಾಷ್ಟ್ರದ ಬಗೆಗಿನ ಸಂಘರ್ಷ ತೀವ್ರವಾಗಿದ್ದ ಕಾಲದಲ್ಲಿಯೂ ಮುಸ್ಲಿಂ ಧರ್ಮ ತತ್ವಗಳಿಗೆ ಬದ್ಧವಾಗಿ ನಡೆದು ಸ್ವಹಿತಸಾಧನೆಯತ್ತ ಗಮನಹರಿಸದೆ ಎಲ್ಲಕ್ಕಿಂತ ಮುಖ್ಯವಾದ ರಾಷ್ಟ್ರೀಯತೆಯ ದೃಷ್ಟಿಯನ್ನು ಗಮನದಲ್ಲಿರಿಸಿ ಧರ್ಮ ನಿರಪೇಕ್ಷವಾಗಿ ಉಳಿದದ್ದೇ ಇದಕ್ಕೆ ಕಾರಣ. ಶೇಕ್ ಸಾಹೇಬ್ ರಾಷ್ಟ್ರದ ಧರ್ಮನಿರಪೇಕ್ಷ. ಗುಣಕ್ಕೆ ಸಂಕೇತವಾಗಿ ನಿಂತಿದ್ದೇ ಅಲ್ಲದೆ ಅದರ ಪ್ರಸ್ತುತತೆಯನ್ನು ಉತ್ಸಾಹದಿಂದ ಮತ್ತು ಎಡೆಬಿಡದೆ ಪ್ರತಿಪಾದಿಸಿದ್ದು ಅನನ್ಯವೇ ಸರಿ, ಇಂತಹ ಅಪರೂಪದ ಸ್ಥೈರ್ಯ ಮತ್ತು ನಂಬಿಕೆಯುಳ್ಳ ವ್ಯಕ್ತಿಯಾದುದರಿಂದಲೇ

ಕಾಶ್ಮೀರದ ಭವಿಷ್ಯದ ಬಗ್ಗೆ ಸಂದಿಗ್ಧ ಪರಿಸ್ಥಿತಿಯಿದ್ದ ಕಾಲದಲ್ಲಿ ಶೇಕ್ ಸಾಹೇಬ್ ಈ ಮಾತುಗಳನ್ನು ತಮ್ಮವರಿಗೆ ಹೇಳಲು ಸಾಧ್ಯವಾಗಿದ್ದು.

> "ನಾನು ಕಾಶ್ಮೀರದ ಮುಸ್ಲಿಮರನ್ನು ಕುರಿತು ಮಾತನಾಡುತ್ತಿದ್ದೇನೆ. ತಮ್ಮ ಜೀವಿತ ಕಾಲದಲ್ಲಿಯ ಬಹುಮುಖ್ಯ ನಿರ್ಣಯವೊಂದನ್ನು ಕೈಗೊಳ್ಳುವ ಜವಾಬ್ದಾರಿಯನ್ನು ವಿಧಿ ಅವರ ಮೇಲೆ ಹೊರಿಸಿದೆ. ಯಾವುದೇ ಸೈನಿಕನಾಗಲಿ ಅಥವಾ ಮಹಾರಾಜರ ಸೇವಕನಾಗಲಿ ಅವರನ್ನು ತಡೆಯಲಾರ. ಪಾಕಿಸ್ತಾನದ ಆಕ್ರಮಣಕಾರರು ಶ್ರೀನಗರದಿಂದ ಕೆಲವೇ ಮೈಲುಗಳ ದೂರದಲ್ಲಿದ್ದಾರೆ. ಅವರು ಇಸ್ಲಾಮಿಕ್ ಘೋಷಣೆಗಳನ್ನು ಕೂಗುತ್ತಿದ್ದಾರೆ. ಅವರೊಂದಿಗಿರುವಿರೋ ಅಥವಾ ನಮ್ಮೊಂದಿಗಿರುವಿರೋ ನೀವೇ ನಿರ್ಧರಿಸಿ. ನನ್ನೊಂದಿಗಿರುವುದಾದರೇ ಎಲ್ಲಾ ಕಾಲಕ್ಕೂ ಹಿಂದೂಗಳು, ಮುಸ್ಲಿಮರು ಮತ್ತು ಸಿಖ್ಖರೊಂದಿಗೆ ಸಹೋದರರಂತೆ ಇರುವ ತತ್ವಕ್ಕೆ ಬದ್ಧರಾಗಿರಬೇಕು. ಅದು ಕಾಫರನಾಡುವ ಮಾತುಗಳಾದರೆ ನನ್ನ ಮೇಲೆ ನಿಮ್ಮ ಕತ್ತಿಯನ್ನು ಬೀಸಿ ಕಾಫರನನ್ನು ನಾಶಗೊಳಿಸುವುದೇ ನಿಮ್ಮ ಗುರಿಯಾದರೆ ಅದನ್ನು ನನ್ನ ಮನೆಯವರೊಂದಿಗೆ ನನ್ನ ಸ್ಥಳದಲ್ಲೇ ಪ್ರಾರಂಭಿಸಿ"

ಅವರ ಜೈವಿಕ ಅಪೇಕ್ಷೆಗಳು ಅವರು ಕಂಡ ಕನಸುಗಳಲ್ಲಿ ಕೆಲವು ಅವರ ನಾಡಿನ ಜನರನ್ನು ಪ್ರಭಾವಿಸಿದ ಹೇಳಿಕೆಗಳನ್ನು ಸಾಕಾರಗೊಳಿಸುವಲ್ಲಿ ಅಡ್ಡಿಯಾದವು. ಇತಿಹಾಸದ ಪ್ರಕ್ರಿಯೆಗಳು ಮತ್ತು ಇತಿಹಾಸವನ್ನು ಸೃಷ್ಟಿಸುವವರ ದೃಷ್ಟಿ ಇವುಗಳ ನಡುವೆ ಯಾವಾಗಲೂ ಹೊಂದಾಣಿಕೆ ಇರುತ್ತದೆಯೆಂದೇನಿಲ್ಲ. ತತ್ವ ಮತ್ತು ಬಳಕೆಯ ನಡುವೆ, ಧ್ಯೇಯ ಮತ್ತದರ ಸಾಕಾರದ ನಡುವೆ ಬಗೆಹರಿಸಲು ಸಾಧ್ಯವಾಗದ ಅಂತರವಿದೆ. ಕಾಶ್ಮೀರದ ಸಂದರ್ಭದಲ್ಲಿ ಈ ರೀತಿಯ ಸಂಕೀರ್ಣತೆಗಳು ಸ್ವಲ್ಪ ಹೆಚ್ಚಾಗಿ ಮತ್ತು ಇತರ ಭಾಗಗಳಲ್ಲಿದ್ದುದಕ್ಕಿಂತ ಭಿನ್ನವಾಗಿದ್ದವು.

ಆಂಗ್ಲರ ವಶದಲ್ಲಿದ್ದ ಭಾರತೀಯ ಪ್ರಾಂತ್ಯಗಳನ್ನು ಭಾರತ ಮತ್ತು ಪಾಕಿಸ್ತಾನ ಪ್ರಾಂತ್ಯಗಳಾಗಿ ವಿಭಾಗಿಸಲು ಸಿದ್ಧವಾದ 'ಎರಡು ದೇಶಗಳ ತತ್ವ'ದ ಅನ್ವಯ ಜಮ್ಮು-ಕಾಶ್ಮೀರ ರಾಜ್ಯದ ವಿಚಿತ್ರ ಸಂದರ್ಭದಲ್ಲಿ ಮತ್ತಷ್ಟು ಅಸ್ಪಷ್ಟತೆಗಳನ್ನು ತಂದೊಡ್ಡಿತು. ಇದೇ ಸಂದರ್ಭದಲ್ಲಿ ಅಲ್ಲಿನ ಮುಸ್ಲಿಂ ಜನತೆ ಶೇಕ್ ಅಬ್ದುಲಾರ ಮತ್ತು ರಾಷ್ಟ್ರೀಯ ಸಭೆ (National Conference) ಯ ಮಾರ್ಗದರ್ಶನದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿ ಹಿಂದೂ ಮಹಾರಾಜರು ನಡೆಸುತ್ತಿದ್ದ ಡೋಗ್ರಾ ಊಳಿಗಮಾನ್ಯ ಪದ್ಧತಿ ಮತ್ತು ಮುಸ್ಲಿಂ ಲೀಗ್ ಪ್ರತಿಪಾದಿಸುತ್ತಿದ್ದ ಕೋಮುವಾದದ ವಿರುದ್ಧ ಹೋರಾಡುತ್ತಿತ್ತು. ಬ್ರಿಟಿಷ್ ಸಾರ್ವಭೌಮತೆಯಿಂದಾಗಿ ಕೈಬಿಟ್ಟು ಹೋಗುತ್ತಿದ್ದ ರಾಜಪ್ರಭುತ್ವದ ಆಳ್ವಿಕೆಗೆ ಒಳಗಾಗಿದ್ದ ಪ್ರಾಂತ್ಯಗಳಲ್ಲಿ ಕ್ಲಿಷ್ಟ ಪರಿಸ್ಥಿತಿ ತಲೆದೋರಿತು. ವಿಶ್ವಾಸಘಾತುಕ ಸನ್ನಿವೇಶಗಳು ಸೃಷ್ಟಿಯಾದವು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಮಹಾರಾಜ

ಹರಿಸಿಂಗ್ 'ಸ್ಟ್ಯಾಂಡ್‌ಸ್ಟಿಲ್' (Stand still) ಒಪ್ಪಂದಕ್ಕೆ ಭಾರತ ಹಾಗೂ ಪಾಕಿಸ್ತಾನ ಪ್ರಾಂತ್ಯಗಳೆರಡರಲ್ಲಿಯೂ ಸಹಿ ಹಾಕಿದೆ. ಈ ಸಂದರ್ಭದಲ್ಲಿ ಶೇಕ್ ಅಬ್ದುಲ್ಲಾರವರು ಸೆರಮನೆಯಲ್ಲಿದ್ದರು ಮತ್ತು 'ರಾಷ್ಟ್ರೀಯ ವೇದಿಕೆ' ಯನ್ನು 'ಕ್ವಿಟ್ ಕಾಶ್ಮೀರ್' ಚಳುವಳಿಯ ಹಿನ್ನೆಲೆಯಲ್ಲಿ ಬಹಿಷ್ಕರಿಸಿದರು. ಈ ಚಳುವಳಿಯನ್ನು (I.N.C) ಮತ್ತು ನೆಹರೂಜಿಯವರು ಪುರಸ್ಕರಿಸಿದ್ದರೆಂಬುದು ಗಮನಾರ್ಹ ವಿಷಯ. ಜೋದ್‌ಪುರದ ಮಹಾರಾಜರು ಆಗಲೇ 'ಸ್ಟ್ಯಾಂಡ್‌ಸ್ಟಿಲ್' ಒಪ್ಪಂದಕ್ಕೆ ಪಾಕಿಸ್ತಾನದೊಂದಿಗೆ ಸಹಿ ಮಾಡಿದ್ದ ಕಾರಣ (ಜೋದ್ ಪುರ್ ಪಾಕಿಸ್ತಾನಕ್ಕೆ ಸೇರ್ಪಡೆಯಾಗುವ ಮುನ್ನ) ಕಾಶ್ಮೀರದ ಮಹಾರಾಜ ಕೂಡ ತನ್ನ ಅಧಿಕಾರ ಮತ್ತು ಸವಲತ್ತುಗಳನ್ನು ಭದ್ರಪಡಿಸಿಕೊಂಡು ಸಹಿ ಹಾಕಬಹುದೆಂಬ ಅಭಿಪ್ರಾಯವಿತ್ತು. ಕಾಶ್ಮೀರಿ ಕಣಿವೆಯತ್ತ ಪಾಕಿಸ್ತಾನಿ ಆಕ್ರಮಣಕಾರರ ಆಗಾಧ ಮುನ್ನಡೆ ಕಾಶ್ಮೀರದ ಮೀರದ ಮಹಾರಾಜರ ನಿರ್ಣಯವನ್ನು ಬದಲಾಯಿಸುವಂತೆ ಮಾಡಿತು. (ಈ ಆಕ್ರಮಣಕ್ಕೆ ಪಾಕಿಸ್ತಾನಿ ಸೇನಾಧಿಕಾರಿಗಳ ಬೆಂಬಲವಿದ್ದುದು ತಿಳಿದಿರುವ ಸಂಗತಿ) ಹಾಗಾಗಿ, ಕಾಶ್ಮೀರದ ಮಹಾರಾಜನು ಭಾರತದೊಂದಿಗೆ ವಿಲೀನಮಾಗುವಿಕೆ ಪಾಕಿಸ್ತಾನದ ಈ ವಿರೋಧ ಮನೋಭಾವ ಬಲವಂತವಾಗಿ ಒತ್ತಡ ತಂದ ಕ್ರಮವೇ ಹೊರತು ಮಹಾರಾಜನ ದೇಶಪ್ರೇಮ, ನಂಬಿಕೆ ಮತ್ತು ದೂರದೃಷ್ಟಿಯನ್ನು ಇದು ಸೂಚಿಸಿರುವುದಿಲ್ಲ. ಆದರೆ. ಇದಕ್ಕೆ ವಿರುದ್ಧವಾಗಿ ಬ್ರಿಟಿಷ್ ವಸಾಹತುಶಾಹಿಯ ಪ್ರಕ್ರಿಯೆ ಡೋಗ್ರ ಊಳಿಗಮಾನ್ಯ ಪದ್ಧತಿ ಮತ್ತು ಮುಸ್ಲಿಂ ರಾಷ್ಟ್ರದ ವಿಭಜನೆಈ ಮೂರು ಅಂಶಗಳು (ಸಮಸ್ಯೆಗಳು) ಜನರ ಮುಖ್ಯ ಹಾಗೂ ಪರಸ್ಪರ ಸಂಬಂಧಿತ ವೈರಿಗಳೆಂಬುದು ಶೇಕ್ ಅಬ್ದುಲ್ಲಾರ ಅಭಿಪ್ರಾಯವಾಗಿತ್ತು.

ಅಖಿಲಭಾರತ ರಾಜ್ಯಗಳ ಜನರ ಒಕ್ಕೂಟದಲ್ಲಿ ಜವಾಹರಲಾಲ್ ನೆಹರೂರವರ ಉತ್ತರಾಧಿಕಾರಿಯಾಗಿ ರಾಷ್ಟ್ರೀಯ ವಿಮೋಚನಾ ಚಳುವಳಿಯಲ್ಲಿನ ಸಾಧನೆ, ಸ್ವಾತಂತ್ರ್ಯ ಪ್ರಜಾಪ್ರಭುತ್ವ ಭಾರತದ ನಿರ್ಮಾಣದಲ್ಲಿನ ಕಾರ್ಯವೈಖರಿ ನಿಯೋಜಿತ 'ಪ್ರಜಾಪ್ರತಿನಿಧಿ ಸಭೆ' ಯ ಸದಸ್ಯನಾಗಿ ರಾಷ್ಟ್ರೀಯ ನಾಯಕರಾಗಿ ಹೀಗೆ ಹಲವು-ಹತ್ತು ತರಹಗಳಲ್ಲಿ ತಮ್ಮನ್ನು ಕ್ರಿಯಾಶೀಲವಾಗಿ ತೊಡಗಿಸಿಕೊಂಡು ಜನಪರ ಹೋರಾಟ ನಡೆಸಿದ ಅಪರೂಪದ ವ್ಯಕ್ತಿಯಾದ ಶೇಕ್ ಮಹಮ್ಮದ್ ಅಬ್ದುಲ್ಲಾರ ಸಾಧನೆಗಳನ್ನು ಸಾಮರ್ಥ್ಯವನ್ನು ರಾಷ್ಟ್ರ ಮತ್ತಷ್ಟು ಗುರುತಿಸಬೇಕಾಗಿದೆ. ಈ ವ್ಯಕ್ತಿಯ ಹೋರಾಟದ ಹಾದಿಯಲ್ಲಿ ಎದುರಾದ ಅಡೆತಡೆಗಳು. ಇವರ ವಾಗ್ವೈಖರಿ ಇವುಗಳನ್ನು ಕೆಲವರು ತಿರಸ್ಕರಿಸಿದ್ದೂ ಉಂಟು. ಬೆಳೆಯುವ ವ್ಯಕ್ತಿಗೆ ಟೀಕೆಗಳೂ ಕೂಡ ಅವಶ್ಯಕವೆ. ಅಭಿಮಾನ ಮತ್ತು ಸಾಮ್ಯತೆ, ಎಲ್ಲರಲ್ಲೂ ಸಹಜವಾಗಿ ಬೆರೆಯುವ ಅವರ ಸೌಹಾರ್ದತೆಗಳು ಅವರ ವ್ಯಕ್ತಿತ್ವದ ಅಂಗಗಳಾಗಿದ್ದವು. ಜನಪ್ರಿಯರೆನ್ನಿಸಿದ್ದ ಅನೇಕ ಮಂದಿ ನಾಯಕರನ್ನು ಮುಲಾಜಿಲ್ಲದೆ ಖಂಡಿಸಿದ್ದಾರೆ. ಅದರ ಪ್ರತಿಘಾತಗಳನ್ನೂ ಅನುಭವಿಸಿದ್ದಾರೆ.

ಸಾರ್ವಜನಿಕ ಕೆಲಸ ಮತ್ತು ಸಾರ್ವಜನಿಕ ಗಮನ ತುಂಬಿಕೊಂಡಿದ್ದ ಇಂತಹ ಒಂದು ಜೀವನದಲ್ಲಿ ಭಿನ್ನಾಭಿಪ್ರಾಯಗಳು, ವಿವಾದಗಳು ಮತ್ತು ರಾಜಕೀಯ ಘರ್ಷಣೆಗಳು ಅನಿವಾರ್ಯವಾಗಿದ್ದವು. ಶೇಕ್ ಸಾಹೇಬರಂತೆ ಒತ್ತಾಯಪೂರ್ವಕವಾಗಿ ರಾಜಕೀಯ ಏಕಾಂಗಿತನವನ್ನು ಸಕ್ರಿಯ ರಾಜಕೀಯದಿಂದ ಒಂದು ರೀತಿಯ ಬಹಿಷ್ಕಾರವನ್ನು ಅದರಲ್ಲೂ ಯಾವುದೇ ಕಹಿ ಮತ್ತು ಅಸಮಾಧಾನವಿಲ್ಲದೆ ಸಹಿಸಿದವರು ಕೆಲವೇ ನಾಯಕರು ಜವಹರ್‌ಲಾಲ್ ನೆಹರೂರವರು ನನ್ನ ಮೇಲೆ ಪ್ರಭಾವ ಬೀರಿದಂತೆ ಮತ್ತಾರೂ ಮಾಡಿಲ್ಲ ಎಂದು ಒಮ್ಮೆ ಹೇಳಿದ್ದ ಅವರು ನೆಹರೂರವರ ಬಗ್ಗೆ ಆಳವಾದ ಪ್ರೀತಿಯನ್ನು ಹೊಂದಿದ್ದರು ಹಾಗೂ ಇಂದಿರಾರವರ ಬಗ್ಗೆಯೂ ಅವರು ಬಹಳ ಮಮತೆಯಿಂದಿದ್ದರು ಇವರಿಬ್ಬರೊಂದಿಗೂ ಶೇಕ್ ಸಾಹೇಬರು ರಾಜಕೀಯ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದರೂ ಸಹ ಈ ಪ್ರತಿ ಮಮತೆಗಳು ಎಂದೂ ಅವರನ್ನು ಬಿಟ್ಟಿರಲಿಲ್ಲ ಹಿಂದೂ ಮುಸ್ಲಿಂ ಸಿಖ್ಖ್ ಭಾತೃತ್ವದ ರಾಜಕೀಯ ವ್ಯವಸ್ಥೆ, ಪ್ರಜಾಸತ್ತಾತ್ಮಕ ಗಣರಾಜ್ಯ ವ್ಯವಸ್ಥೆ, ಮೂಲಭೂತ ಭೂಸುಧಾರಣೆಗಳು, ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳು ಮತ್ತು ದೌರ್ಬಲ್ಯಗಳ ನಿವಾರಣೆ, ವಿದೇಶಿ ವ್ಯವಹಾರಗಳು ವಿಶ್ವಶಾಂತಿ ಸ್ಥಾಪನೆಯಲ್ಲಿ ಹಾಗೂ ವಸಾಹತುವಾದ, ಜನಾಂಗವಾದ ಮತ್ತು ದಬ್ಬಾಳಿಕೆಯ ರಾಜಕೀಯದ ವಿರುದ್ಧ ಭಾರತದ ರಚನಾತ್ಮಕ ಪಾತ್ರ ಈ ಮೂಲ ರಾಷ್ಟ್ರೀಯ ಗುರಿಗಳಿಗೆ ಅವರು ಸದಾ ಬದ್ಧರಾಗಿದ್ದರು ಹಾಗೂ ವೃಧ್ಯಾಪ್ಯವಾಗಲಿ, ಪರಿಸ್ಥಿತಿಗಳಾಗಲೀ ಅವರ ಈ ಬದ್ಧತೆಯನ್ನು ಎಂದೂ ದುರ್ಬಲಗೊಳಿಸಲಿಲ್ಲ. ರಾಜಕೀಯ ಕ್ಷೇತ್ರದಲ್ಲಿ ಅಬ್ದುಲ್ಲಾರವರು ನಿಸ್ಸಂಶಯವಾಗಿ ಒಬ್ಬ ಧೀಮಂತ ವ್ಯಕ್ತಿಯಾಗಿದ್ದರು ಹಾಗೂ ಅದರ ಆಚೆಗೂ ಸಹ ಅವರು ಸುಸಂಸ್ಕೃತ ಪ್ರಜ್ಞಾವಂತ ವ್ಯಕ್ತಿಯಾಗಿದ್ದರು ಒಂದು ಗುಲಾಬಿ ಹೂವನ್ನು ಆಘ್ರಾಣಿಸಿ ಅದರ ಸುವಾಸನೆಯನ್ನು ಮೆಚ್ಚಬಲ್ಲವರಾಗಿದ್ದರು ಸೌಂದರ್ಯವನ್ನು ಅದರ ಎಲ್ಲಾ ರೂಪಗಳಿಂದಲೂ ಕಂಡು ಪ್ರಶಂಸಿಸ ಬಲ್ಲವರಾಗಿದ್ದರು ಮನಃಪೂರ್ತಿಯಾಗಿ ಊಟಮಾಡಿ ನಂತರ ಏನಾದರೂ ತೊಂದರೆಯಾದರೆ ಅದನ್ನು ಬೇಸರವಿಲ್ಲದೆ ಅನುಭವಿಸಬಲ್ಲವರಾಗಿದ್ದರು. ಕವಿತೆಗಳ ಪುಸ್ತಕಗಳನ್ನು ಉತ್ಸಾಹದಿಂದ ಓದಬಲ್ಲವರಾಗಿದ್ದರು ಮೂಶೈರಾಗಳಲ್ಲಿ ಉತ್ಸುಕತೆಯಿಂದ ಭಾಗವಹಿಸುತ್ತಿದ್ದರು ಅವರಿಗೆ ಉರ್ದುಭಾಷೆಯಲ್ಲಿ ಆಳವಾದ ಪರಿಶ್ರಮವಿತ್ತು ನನಗಿನ್ನು ನೆನಪಿರುವ ಹಾಗೆ ನಾನು ರಾಜ್ಯ ಸಭೆಯಲ್ಲಿ ಇಂದಿರಾಗಾಂಧಿಯವರ ಸಮಾರಂಭವೊಂದರಲ್ಲಿ ಭಾಷಣ ಮಾಡುತ್ತಿದ್ದೆ ವೀರ್ ಧಾರ್ ವೀರ್‌ರವರ ಒಂದು ಕವನವನ್ನು ಅಬ್ದುಲ್ಲಾರನ್ನು ಗಮನದಲ್ಲಿಟ್ಟುಕೊಂಡು ವಚನ ಮಾಡಿದ್ದೆ ಅದು ಕಾಶ್ಮೀರಿ ರಾಜ್ಯದ ಹೊಸ ರಾಜಕೀಯ ಮತ್ತು ಕೇಂದ್ರ-ರಾಜ್ಯ ಸಂಬಂಧವನ್ನು ಕುರಿತದ್ದಾಗಿತ್ತು ಆ ಕವನದ ಪ್ರಾರಂಭಿಕ ಸಾಲುಗಳು ಇಂತಿದ್ದವು.

"ಲೋ ಸಾನ್ಸ್ ಭಿ ಅಹೆಸ್ಥಾಕೆ ನಾಜೂಕ್ ಹೈ ಬಹುತ್ ಕಾಮ್ ಆಫಾಕ್ ಕೆ ಇಸ್ ಕಾರ್‌ಗಾಹೈ ಶೀಷಾ ಗರಿ ಕಾ."

ಶೇಕ್ ಮಹಮ್ಮದ್ ಅಬ್ದುಲ್ಲಾ ಆದರ್ಶ ನಾಯಕ

– ಬೇಗಂ ಶೇಕ್ ಅಬ್ದುಲ್ಲಾ *

ನನ್ನ ದಿವಂಗತ ಪತಿ ಶೇಕ್ ಮಹಮ್ಮದ್ ಅಬ್ದುಲ್ಲಾ ಅವರ 85ನೇ ಹುಟ್ಟು ಹಬ್ಬ ಸಂದರ್ಭದಲ್ಲಿ ಅವರು ಕಾಶ್ಮೀರದ ಜನರಿಗೆ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಸಲ್ಲಿಸಿರುವ ನಿಸ್ವಾರ್ಥ ಸೇವೆಯನ್ನು ಸ್ಮರಿಸುವುದೇ ನಿಜವಾದ ಶ್ರದ್ಧಾಂಜಲಿ. ಶೇಕ್ ಸಾಹೇಬರು ರಾಷ್ಟ್ರಮಟ್ಟದ ನಾಯಕರಾಗಿದ್ದರು. ಇವರ ಸಮತಾವಾದ, ಜಾತ್ಯಾತೀತ ಮನೋಭಾವಗಳು ಪ್ರಜಾಪ್ರಭುತ್ವವನ್ನು ಬಲಪಡಿಸಿದವು. ಅಂದಿನ ಅವರ ಸಾಧನೆ ಇಂದು ಇತಿಹಾಸದ ಒಂದು ಭಾಗವಾಗಿದೆ. ಬಹುತೇಕ ಇವರ ರಾಜಕೀಯ ಜೀವನ ಮತ್ತು ದೇಶದ ಆಧುನಿಕ ರಾಜಕೀಯ ಇತಿಹಾಸವು ಒಂದು ಇನ್ನೊಂದರ ತದ್ರೂಪದಂತಿದೆ. ಜಮ್ಮು ಮತ್ತು ಕಾಶ್ಮೀರ ಜನರ ಆಂಧೋಳನಕ್ಕೆ ಶೇಕ್ ಸಾಹೇಬ್‌ರವರು ಮುಖ್ಯ ಸ್ಫೂರ್ತಿಯಾಗಿದ್ದರು. ಅಲ್ಲದೆ, ಮಹಾತ್ಮಗಾಂಧಿ ಮತ್ತು ನೆಹರೂಜಿಯವರು ಆರಂಭಿಸಿದ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯ ಮುಖಂಡರೂ ಆಗಿದ್ದರು.

ಕಾಶ್ಮೀರದ ವೈವಿಧ್ಯಮಯವಾದ ಸಂಸ್ಕೃತಿಗೆ ಶೇಕ್ ಸಾಹೇಬ್‌ರವರು ಪ್ರತೀಕವಾಗಿದ್ದರು. ನಮ್ಮ ಸಂಸ್ಕೃತಿ-ಪರಂಪರೆ ಸಹೋದರತ್ವ ಹಾಗೂ ಮಾನವೀಯತೆಯ ಸಂಗಮವಾಗಿದ್ದರು. ಈ ಶತಮಾನದ ಮೂವತ್ತರ ದಶಕದಲ್ಲಿ ಶೇಕ್‌ರವರು ಕಾಶ್ಮೀರದ ರಾಜಕೀಯ ರಂಗದಲ್ಲಿ ಜನಪದ ಹೋರಾಟಗಾರರಾಗಿ ಕಾಣಿಸಿಕೊಂಡರು. ಆ ಸಂದರ್ಭದಲ್ಲಿ ಜಮ್ಮು ಮತ್ತು ಕಾಶ್ಮೀರ ನಿರಂಕುಶಾಧಿಕಾರದ ಊಳಿಗಮಾನ್ಯ ಪದ್ಧತಿಯ ಕಪಿಮುಷ್ಟಿಯಲ್ಲಿತ್ತು. ಕಾಶ್ಮೀರವನ್ನು ಕಡುಬಡತನ ಆಂಧಾನುಕರಣೆಗಳು ಕಾಡುತ್ತಿದ್ದವು. ಸಾಕ್ಷರತೆಯ ಪ್ರಮಾಣ ತೀರಾ ಕೆಳಸ್ತರದಲ್ಲಿತ್ತು. ಜನರಿಗೆ ಆರೋಗ್ಯದ ಬಗ್ಗೆ ಹೆಚ್ಚಿನ ಅರಿವಿರಲಿಲ್ಲ. ತಿಳಿವಳಿಕೆಯಿಲ್ಲದ ಪ್ರಾಣಿಗಳಂತೆ ಜೀವನ ನಡೆಸುತ್ತಿದ್ದರು.ಈ ಎಲ್ಲಾ ಅಂಶಗಳು ಶೇಕ್ ಸಾಹೇಬರ ಮನವನ್ನು ಕಲುಕಿದವು. ಇದರ ಪರಿಣಾಮವಾಗಿ 'ಜಮ್ಮು-ಕಾಶ್ಮೀರ ರಾಷ್ಟ್ರೀಯ ವೇದಿಕೆ' ಅಸ್ತಿತ್ವಕ್ಕೆ ಬಂತು. ಈ ವೇದಿಕೆಯಡಿಯಲ್ಲಿ ಕಾಶ್ಮೀರದಾದ್ಯಂತ ಜನರನ್ನು ಸಂಘಟಿಸಿದರು. ಇವರ ಮುಖ್ಯ ಧ್ಯೇಯ ಸ್ವಯಂ ಸರ್ಕಾರದ ನಿರ್ಮಾಣವಾಗಿತ್ತು. ನಿರಂಕುಶಪ್ರಭುತ್ವದ ವಿರುದ್ಧ ದಾಸ್ಯದ ಶೃಂಖಲೆಗಳನ್ನು ಕಿತ್ತೊಗೆದು ಪ್ರಜಾಪ್ರಭುತ್ವದ ಅಸ್ತಿತ್ವಕ್ಕಾಗಿ ಹೋರಾಟ ನಡಸಿದರು. ಇದಕ್ಕಾಗಿ ಹಲವು ಬಗೆಯ ಅಡೆತಡೆಗಳನ್ನು ಎದುರಿಸಿದರು. 1947ರಲ್ಲಿ ಭಾರತವು ಸ್ವತಂತ್ರವನ್ನು ಪಡೆಯಿತು. ಮರು ವರ್ಷದ 1948ರ ಮಾರ್ಚಿ ತಿಂಗಳಿನಲ್ಲಿ ಶೇಕ್ ಸಾಹೇಬರವರು ಕಾಶ್ಮೀರದ ಮೊಟ್ಟ ಮೊದಲ ಜನಪ್ರಿಯ ಸರ್ಕಾರದ ನಾಯಕರಾದರು. ಹೊಸ ಕಾಶ್ಮೀರ (ನಯ ಕಾಶ್ಮೀರ)ವು ಹೊಸ ಆಳ್ವಿಕೆಯಲ್ಲಿ ತನ್ನದೇ ಆದ ರೂಪುರೇಷೆಗಳನ್ನು ಪಡೆಯತೊಡಗಿತು.

* ಸಂಸತ್ತಿನ ಮಾಜಿ ಸದಸ್ಯೆ.

ಹೊಸ ಆಳ್ವಿಕೆಯಲ್ಲಿ ಯಾವುದೇ ಬಗೆಯ ಶೋಷಣೆಗೆ ಅವಕಾಶವಿರಲಿಲ್ಲ. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹೀಗೆ ಎಲ್ಲಾ ರಂಗಗಳಲ್ಲೂ ಜನರಿಗೆ ನ್ಯಾಯ ಸಿಗುವಂತೆ ಹೊಸ ವ್ಯವಸ್ಥೆಯನ್ನು ರೂಪಿಸಿದರು.

ಶೇಕ್ ಸಾಹೇಬರ ನಾಯಕತ್ವದಲ್ಲಿ ಜಮ್ಮು ಮತ್ತು ಕಾಶ್ಮೀರದ ಹೊಸ ಸರ್ಕಾರವು ವಂಶಪಾರಂಪರ್ಯ ಆಡಳಿತವನ್ನು ನಾಶಪಡಿಸಿತು. ಜಹಗೀರುದಾರಿ ಪದ್ಧತಿಯನ್ನು ರದ್ದುಪಡಿಸಲಾಯಿತು. ಉಳುವವನಿಗೇ ಭೂಮಿಯ ಒಡೆತನವನ್ನು ವಹಿಸಲಾಯಿತು, ಹೊಸ ಕಾನೂನುಗಳನ್ನು ರೂಪಿಸಲಾಯಿತು. ಶತ ಶತಮಾನಗಳಿಂದ ದಾಸ್ಯಕ್ಕೆ ಒಳಗಾಗಿ ತಮ್ಮ ಪ್ರಜಾ ಹಕ್ಕುಗಳನ್ನು ಕಳೆದುಕೊಂಡಿದ್ದ ಜನರಿಗೆ ಅವರ ಹಕ್ಕುಗಳನ್ನು ಹಿಂತಿರುಗಿಸುವುದರ ಮೂಲಕ ಜಮ್ಮು-ಕಾಶ್ಮೀರದ ಜನರ ಜೀವನದಲ್ಲಿ ಹೊಸ ಚೈತ್ಯನ್ಯವನ್ನು ತುಂಬಿದರು. ಜನತೆ ಮತ್ತು ಅಸ್ತಿತ್ವವನ್ನು ಕಂಡುಕೊಂಡು ಆತ್ಮ ವಿಶ್ವಾಸವನ್ನು ಹೊಂದಿ ಹೊಸ ಜೀವನವನ್ನು ನಡೆಸಲು ಶೇಕ್ ಅಬ್ದುಲ್ಲಾರವರು ಶ್ರಮಿಸಿದರು. ಗಾಂಧೀಜಿಯವರು ಭಾರತೀಯರಲ್ಲಿ ಸ್ವಾಭಿಮಾನವನ್ನು ಮೂಡಿಸಿದುತೆ ಕಾಶ್ಮೀರದ ಜನರ ಹೃದಯಗಳಲ್ಲಿ ಆತ್ಮವಿಶ್ವಾಸ ಸ್ವಾಭಿಮಾನದ ಬೀಜಗಳನ್ನು ಶೇಕ್ ಸಾಹೇಬರವರು ಬಿತ್ತಿದರು. ನಿರಂಕುಶ, ಊಳಿಗಮಾನ್ಯ ಆಡಳಿತದಲ್ಲಿ ಶತಮಾನಗಳಿಂದ ಸಂಕಷ್ಟಗಳನ್ನು ಅನುಭವಿಸಿದ್ದ ಈ ಜನರು ಮಾನಸಿಕವಾಗಿ ತುಂಬಾ ನೊಂದಿದ್ದರು. ಇವರಿಗೆ ಹೊಸ ಮಾರ್ಗದರ್ಶನದಲ್ಲಿ ಭರವಸೆಯ ನಾಯಕತ್ವದ ಅವಶ್ಯಕತೆಯಿತ್ತು. ಶೇಕ್ ಸಾಹೇಬರು ಅವರೆಲ್ಲಾ ಕನಸುಗಳನ್ನು ನನಸು ಮಾಡಲು ಯತ್ನಿಸಿದರು. ಇಂದು ಕಾಶ್ಮೀರದ ಕಣಿವೆಯಲ್ಲಿ ಮಧ್ಯಯುಗದ ಅಂಧಕಾರದಿಂದ ಹೊರ ಬಂದ ಆಧುನಿಕತೆಯ ತಂಗಾಳಿ ಬೀಸುತ್ತಿದ್ದರೆ ಅದರ ಕೀರ್ತಿ ಶೇಕ್ ಅಬ್ದುಲ್ಲಾರವರಿಗೆ ಸಲ್ಲಬೇಕು. ಅವರು ಪಟ್ಟ ಶ್ರಮ ಅನುಭವಿಸಿದ ನೋವುಗಳು, ಎದುರಿಸಿದ ಅಡೆತಡೆಗಳು, ನಡೆಸಿದ ಅಂದೋಳನಗಳು ಎಲ್ಲವೂ ಜಮ್ಮು-ಕಾಶ್ಮೀರದ ಸ್ವಾತಂತ್ರ್ಯಕ್ಕಾಗಿ, ಏಳಿಗೆಗಾಗಿ ಮತ್ತು ಪ್ರಜಾಪರ ಹಕ್ಕುಬಾಧ್ಯತೆಗಳ ಸಂರಕ್ಷಣೆಗಾಗಿ. ಅವರ ಜನ್ಮದಿನದ ಇಂದಿನ ಶುಭ ಸಂದರ್ಭದಲ್ಲಿ ನಮ್ಮನ್ನಗಲಿರುವ ಶೇಕ್ ಸಾಹೇಬರಿಗೆ ನಾವುಸಲ್ಲಿಸಬೇಕಾಗಿರುವ ನಿಜವಾದ ಶ್ರದ್ಧಾಂಜಲಿಯೆಂದರೆ ಇವರ ಸಾಧನೆಗಳನ್ನು ಸ್ಮರಿಸಿ ಅವರ ಆದರ್ಶಗಳನ್ನು ಎತ್ತಿಹಿಡಿಯುವುದರ ಮೂಲಕ ಅವರು ನಂಬಿಕೊಂಡು ಬಂದಿದ್ದ ತತ್ವಗಳಿಗಾಗಿ ಶ್ರಮಿಸೋಣವೆಂದು ನಾವೆಲ್ಲರೂ ದೀಕ್ಷೆ ತೊಡಬೇಕಾಗಿದೆ. ಅವರು ತೋರಿಸಿಕೊಟ್ಟಿರುವ ಹಾದಿಯಲ್ಲಿ ನಾವೆಲ್ಲರೂ ನಡೆಯೋಣ, ಅವರ ಕನಸುಗಳನ್ನು ನನಸಾಗಿಸಲು ಶ್ರಮಿಸೋಣ.

ಸ್ವಾತಂತ್ರ್ಯ ಹೋರಾಟಗಾರರಾಗಿ ಶೇಕ್ ಅಬ್ದುಲ್ಲಾ

- ರೇಣುಕಾ ರೇ *

ನಾನು ಮೊಟ್ಟಮೊದಲು ಶೇಖ್ ಅಬ್ದುಲ್ಲಾರವರನ್ನು ಗಾಂಧೀಜಿಯವರ ಜೊತೆಯಲ್ಲಿ ದೆಹಲಿಯಲ್ಲಿ ಭೇಟಿ ಮಾಡಿದ್ದೆ. ಅವರ ಎತ್ತರದ ವ್ಯಕ್ತಿತ್ವ ಮತ್ತು ಗಾಂಧೀಜಿಯವರ ಬಗ್ಗೆ ಅವರಿಗಿದ್ದ ಸಮರ್ಪಣಾಭಾವ ಇವುಗಳಿಂದ ಅವರನ್ನು ಮೆಚ್ಚಿಕೊಂಡೆ. ಪಾಕಿಸ್ತಾನವು ಭಾರತದಿಂದ ವಿಭಜನೆಯಾಗುವುದನ್ನು ತೀವ್ರವಾಗಿ ವಿರೋಧಿಸಿದ ಪ್ರಮುಖರಲ್ಲಿ ಇವರೂ ಒಬ್ಬರು, ಪಾಕಿಸ್ತಾನವು ವಿಭಜನೆಯಾಗುವುದು ಅನಿವಾರ್ಯವಾದ ಸಂದರ್ಭದಲ್ಲಿ ಇವರ ಹೋರಾಟ, ಪರಿಶ್ರಮದಿಂದಾಗಿಯೇ ಕಾಶ್ಮೀರ ರಾಜ್ಯವು ಭಾರತದ ಅವಿಭಾಜ್ಯ ಅಂಗವಾಗಿ ಉಳಿದುಕೊಳ್ಳಲು ಸಾಧ್ಯವಾಯಿತು. (ಈ ವೇಳೆಗಾಗಲೇ ಕಾಶ್ಮೀರದ ಕೆಲವು ಭಾಗಗಳು ಕೈತಪ್ಪಿ ಹೋಗಿದ್ದವು) ಲೋಕಸಭೆಯ ಸದಸ್ಯರಾದ ಇವರ ಸಲಹೆಯ ಮೇರೆಗೆ ನೆಹರೂಜಿಯವರು ಕಾಶ್ಮೀರಪರ ಕೆಲವು ಷರತ್ತುಗಳನ್ನು ನಮ್ಮ ಸಂವಿಧಾನದಲ್ಲಿ ಸೇರಿಸಲು ಸಾಧ್ಯವಾಯಿತು. 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಶೇಕ್‌ರವರು ಸೆರವಾಸವನ್ನು ಅನುಭವಿಸಿದರು. 'ಕಾಶ್ಮೀರ ರಾಷ್ಟ್ರೀಯ ವೇದಿಕೆ' (ಸಮಾವೇಶ)ಗೆ ಇವರು ಅಧ್ಯಕ್ಷರಾಗಿದ್ದರು. ಇದರೊಂದಿಗೆ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲೂ ಕೆಲಸ ಮಾಡಿದರು.

1953ರ ಅವಧಿಯಲ್ಲಿ ನೆಹರೂಜಿಯವರು ವಿದೇಶದಲ್ಲಿದ್ದಾಗ ಪಾಕಿಸ್ತಾನದೊಂದಿಗೆ ಗುಪ್ತ ಸ್ನೇಹವಿದೆಯೆಂಬ ಆರೋಪ ಇವರ ಮೇಲೆ ಬಂತು. ಇದರಿಂದ ವಿವಾದಕ್ಕೆ ಒಳಗಾದರು. 1953ರಲ್ಲಿ ಇವರನ್ನು ಬಂಧಿಸಿ ಸೆರೆಯಲ್ಲಿಡಲಾಯಿತು. ಆದರೆ. ಪಾಕಿಸ್ತಾನವು ವಶಪಡಿಸಿಕೊಂಡಿದ್ದ ಪ್ರಾಂತ್ಯಗಳನ್ನು ಮತ್ತೆ ವಶಪಡಿಸಿಕೊಳ್ಳುವುದು ಇವರ ಉದ್ದೇಶವಾಗಿತ್ತು. ಪ್ರಾರಂಭದಿಂದಲೂ ಇವರ ಆಶಯ ಇದೇ ಆಗಿತ್ತು. ಈ ಮಾರ್ಗದಲ್ಲಿ ಅವರು ಹೋಗುವುದಾದರೆ ಕಾಶ್ಮೀರವೊಂದು ಪ್ರತ್ಯೇಕ ರಾಜ್ಯವಾಗಿ ವಿಭಜನೆಯಾಗುವುದು ಅಬ್ದುಲ್ಲಾರಿಗೆ ಒಪ್ಪಿಗೆ ಎಂಬ ಗುಮಾನಿ ಭಾರತ ಸರ್ಕಾರಕ್ಕೆ ಬಂದುಬಿಟ್ಟಿತು. ಇವರು ವಿಭಜನೆಗೆ ವಿರೋಧಿಯಾಗಿದ್ದರಿಂದ ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ ಒಂದು ಮಧುರ ಬಾಂಧವ್ಯ ತರುವ ಉದ್ದೇಶ ಇವರಿಗಿತ್ತೆಂದು ಹೇಳುತ್ತಿದ್ದರು.

ಆದರೆ, ದುರದೃಷ್ಟವಶಾತ್ ಆಜಾದ್ ಕಾಶ್ಮೀರದ ಅಸ್ತಿತ್ವವನ್ನು ವಿರೋಧಿಸಲು ಕಾಶ್ಮೀರಕ್ಕೆ ಭೇಟಿ ನೀಡಿದ್ದ ಶ್ಯಾಂ ಪ್ರಸಾದ್ ಮುಖರ್ಜಿಯವರು ಬಂಧಿತರಾಗಿ ಸೆರೆಮನೆಯಲ್ಲಿದ್ದಾಗಲೇ ಸಾವಿಗೀಡಾದರು. ಈ ಸಂದರ್ಭದಲ್ಲಿ ಭಾರತ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಶೇಕ್ ಅಬ್ದುಲ್ಲಾರವರು 1964ರವರೆವಿಗೂ ಸೆರೆಯಲ್ಲೇ ಇದ್ದರು. ಇವರ ಅನುಯಾಯಿಗಳೂ ಕೂಡ ಬಂಧನದಲ್ಲಿದ್ದರು. ಇದು ದುರಂತದ ಸಂಗತಿಯೆಂದು ಇವರ ಆತ್ಮೀಯರು ಮತ್ತು

---

* ಸದಸ್ಯೆ ಸಂವಿಧಾನ ಸಭೆ ಹಾಗೂ, ಸಂಸತ್ತಿನ ಮಾಜಿ ಸದಸ್ಯೆ

ಮಹಾತ್ಮಗಾಂಧೀಜಿಯವರು ಭಾವಿಸಿದ್ದರು. ತನ್ನ ಉದ್ದೇಶವು ಭಾರತದಿಂದ ಕಾಶ್ಮೀರವು ಪ್ರತ್ಯೇಕವಾಗುವುದಲ್ಲ, ಎರಡೂ ಒಂದುಗೂಡಬೇಕೆಂಬುದು ಕಾಶ್ಮೀರವು ಎಂದೆಂದಿಗೂ ಭಾರತದ ಜೊತೆಯಲ್ಲಿಯೇ ವಿಲೀನವಾಗಿರಬೇಕು, ಆದರೆ, ಕಾಶ್ಮೀರಕ್ಕೆ ಒಳ್ಳೆಯ ಸವಲತ್ತುಗಳನ್ನು, ಸ್ವಾನಮಾನಗಳನ್ನು ಭಾರತ ಸರ್ಕಾರವು ಒದಗಿಸಬೇಕೆಂದು ಹೇಳಿಕೆ ನೀಡಿದ್ದರಿಂದ ಅಬ್ದುಲ್ಲಾರವರನ್ನು ಬಿಡುಗಡೆ ಮಾಡಲಾಯಿತು.

ಭಾರತ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಶೇಕ್ ಅಬ್ದುಲ್ಲಾರವರು ಭಾಗವಹಿಸಿ ತುಂಬಾ ಶ್ರಮಿಸಿದರೆಂಬುದರಲ್ಲಿ ಎರಡು ಮಾತಿಲ್ಲ. ಇವರ ರಾಷ್ಟ್ರೀಯ ವೇದಿಕೆಯ ಸಂಘಟನೆಯು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಜೊತೆಗೂಡಿ ಕೆಲಸ ಮಾಡಿತು. ಗಾಂಧೀಜಿಯವರು ಆರಂಭಿಸಿದ ಅಹಿಂಸೆ ಮತ್ತು ಅಸಹಕಾರ ಚಳವಳಿಗಳಲ್ಲಿ ಬ್ರಿಟಿಷರ ವಿರುದ್ಧ 'ರಾಷ್ಟ್ರೀಯ ಸಭೆ' ಹೋರಾಡಿತು. ಅಬ್ದುಲ್ಲಾರೊಂದಿಗೆ ನನ್ನ ಕೊನೆಯ ಭೇಟಿಯಾದದ್ದು ಕಲ್ಕತ್ತಾ ರಾಜಭವನದಲ್ಲಿ. ಆಗ ಶೇಕ್ ಸಾಹೇಬರೊಂದಿಗೆ ಅವರ ಪತ್ನಿಯವರೂ ಬಂದಿದ್ದರು. ಅವರ ಬಿಡುಗಡೆಯೂ ಆಗಿತ್ತು. ಶೇಕ್ ಅಬ್ದುಲ್ಲಾ ತುಂಬಾ ಗಂಭೀರ ವ್ಯಕ್ತಿ. ಹೋರಾಟಗಳ ಒಡನಾಟವಿದ್ದರೂ ಅವರಲ್ಲಿ ಗಮನಾರ್ಹವಾದ ಬದಲಾವಣೆಯಾಗಿತ್ತು. ಪಾಕಿಸ್ತಾನವು ಆಕ್ರಮಿಸಿಕೊಂಡಿದ್ದ ಕಾಶ್ಮೀರದ ಭಾಗಗಳನ್ನು ವಶಪಡಿಸಿಕೊಂಡು ಮತ್ತು ಕಾಶ್ಮೀರದೊಂದಿಗೆ ವಿಲೀನಗೊಳಿಸಬೇಕೆಂಬ ಹಿರಿಯ ಕನಸನ್ನು ಅಬ್ದುಲ್ಲಾ ಕಂಡಿದ್ದರು. ಕಾಶ್ಮೀರವು ವಿಶಾಲ ಭಾರತದೊಂದಿಗೆ ಅದರ ಅವಿಭಾಜ್ಯ ಅಂಗವಾಗಿರಬೇಕೆಂದು ಅವರು ಬಯಸಿದ್ದರು. ಈ ಎಲ್ಲಾ ಸಾಧನೆಗಳಿಂದ ಶೇಕರವರಿಗೆ ನಾವು ಗೌರವದ ಶ್ರದ್ಧಾಂಜಲಿಯನ್ನು ಅರ್ಪಿಸಬೇಕು.

ನಾನು ಸಂಸತ್ ಸದಸ್ಯನಾಗಿ ಬಹಳಷ್ಟು ಸಾರಿ ಅವರನ್ನು ಭೇಟಿಯಾಗಿದ್ದೇನೆ. ಅವರಿಗೆ ಸಂವಿಧಾನದ ಬಗೆಗಿದ್ದ ಗೌರವ, ನಂಬಿಕೆಗಳನ್ನು ಹತ್ತಿರದಿಂದ ಕಂಡುಕೊಂಡಿದ್ದೇನೆ. ಸಂಸತ್ ಸದಸ್ಯರೆಲ್ಲರೂ ಜನವರಿ 26, 1956ರಂದು ಸಹಿ ಮಾಡಿದರು. ಇವರೆಲ್ಲರ ಪೈಕಿ ಶೇಕ್ ಸಾಹೇಬರು ಅತ್ಯಂತ ಉನ್ನತ, ಎದ್ದು ಕಾಣುವ ವ್ಯಕ್ತಿಗಳಾಗಿದ್ದರು.

ಇವರು ಮತ್ತು ಇವರಂತೆ ಕೆಲಸ ಮಾಡಿದ ರಾಷ್ಟ್ರೀಯ ಸ್ತ್ರಿ-ಪುರುಷರೆಲ್ಲರನ್ನು ಗಾಂಧೀಜಿಯವರ ಅನುಯಾಯಿಗಳಾಗಿ ದುಡಿದ ಮಹನೀಯರಾದ ಸರೋಜಿನಿ ನಾಯ್ಡು ಮುಂತಾದವರನ್ನು ನಾವು ಸ್ಮರಿಸಿ ತುಂಬು ಹೃದಯದಿಂದ ಗೌರವದ ಶ್ರದ್ಧಾಂಜಲಿ ಸಲ್ಲಿಸಬೇಕಾಗಿದೆ. ಅವರ ಸಾಧನೆಯ ಹಾದಿಯಲ್ಲಿ ನಾವುಗಳು ನಡೆಯಬೇಕಾಗಿದೆ. ಮಾನವೀಯತೆ ಉಳಿಯುವುದು ಯುದ್ಧಗಳಿಂದಲ್ಲ. ಬದಲಿಗೆ ಅಹಿಂಸೆಯ ಮಾರ್ಗವನ್ನು ಅನುಸರಿಸಿ ನಡೆಯುವುದರಿಂದ. ಗಾಂಧೀಜಿಯವರು ಅಹಿಂಸೆಯ ಮೂಲಕವೇ ನಮಗೆ ಸ್ವಾತಂತ್ರ್ಯವನ್ನು ತಂದುಕೊಟ್ಟಿದ್ದು. ಗಾಂಧೀಜಿಯವರ ಮಾರ್ಗವನ್ನೇ ಅನುಸರಿಸಿ ಮಾರ್ಟಿನ್ ಲೂಥರ್ ಕಿಂಗ್ ತನ್ನ ಕಪ್ಪು ಜನರನ್ನು ದಾಸ್ಯದಿಂದ ಮುಕ್ತಗೊಳಿಸಿದ್ದು. ಅನೇಕ ಬಾರಿ ಹಲವು ತರಹದ ಅಹಿತಕರ ಘಟನೆಗಳು, ಕಹಿ ಪ್ರಸಂಗಗಳು ನಡೆದಿರಬಹುದು. ಆದರೆ, ಶೇಕ್ ಅಬ್ದುಲ್ಲಾರವರು ಜಾತ್ಯಾತೀತ ಮತ್ತು ಪ್ರಜಾಪರ ಕಾಳಜಿಯುಳ್ಳ ಆದರ್ಶ ವ್ಯಕ್ತಿ ಎಂಬುದನ್ನು ಮರೆಯಬಾರದು.

ಶೇಕ್ ಅಬ್ದುಲ್ಲಾರವರಿಗೆ ನೆನಪಿನ ಕಾಣಿಕೆ

– ಚೌದುರಿ ರಣಧೀರ್‌ಸಿಂಗ್ *

ಶೇಕ್ ಅಬ್ದುಲ್ಲಾರವರದು ವೈವಿಧ್ಯಮಯವಾದ ವ್ಯಕ್ತಿತ್ವ, ಅತ್ಯಂತ ಬಡ ಕುಟುಂಬದಿಂದ ಬಂದ ವ್ಯಕ್ತಿ ಜಮ್ಮು ಮತ್ತು ಕಾಶ್ಮೀರದ ರಾಜಕೀಯ ರಂಗದಲ್ಲಿ ಅತ್ಯಂತ ಎತ್ತರಕ್ಕೆ ಏರಿದರು. ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಜನಪ್ರಿಯತೆಯ ಉತ್ತುಂಗ ಶೃಂಗವನ್ನು ತಲುಪಿದ್ದರು. ಮಹಾರಾಜರ ವಿರುದ್ಧ ಇವರು ನಡೆಸಿದ ಹೋರಾಟ ಆಂದೋಲನಗಳು ಇವರನ್ನು ಕಾಶ್ಮೀರದ ಜನಪ್ರಿಯ ನಾಯಕರನ್ನಾಗಿ ಮಾಡಿತು. ನೆಹರೂ ರವರ ನೆರವು, ಸಹಕಾರ ಪ್ರೋತ್ಸಾಹಗಳೂ ಅಬ್ದುಲ್ಲಾರಿಗಿದ್ದವು.

ಶೇಕ್ ಅಬ್ದುಲ್ಲಾ ಹಿಂದೂ-ಮುಸ್ಲಿಮರ ಐಕ್ಯತೆಗೆ ಸಂಕೇತವಾಗಿದ್ದರು. ಪಾಕಿಸ್ತಾನದ ಪಿತಾಮಹರಾದ ಎಂ.ಎ. ಜಿನ್ನಾರವರಿಗೂ ಕೂಡ ಇವರನ್ನು ಹತೋಟಿಯಲ್ಲಿಡಲು ಕಷ್ಟವಾಗಿತ್ತು. ಇವರಿಗೆ ಜಾತ್ಯಾತೀತ ಒಲವು ಅಪಾರವಾಗಿತ್ತು. ಇವರು ಕಟ್ಟಿದ ಐಕ್ಯತೆಯ (ಹಿಂದೂ-ಮುಸ್ಲಿಂ) ಕಟ್ಟಡವನ್ನು ವಿಭಜನೆಯ ಬೆಂಕಿ ಸುಡಲಿಲ್ಲ. ಇಂದಿಗೂ ಕೂಡ ಅಬ್ದುಲ್ಲಾರ ಸಾಧನೆ, ಜನಪ್ರಿಯತೆ ಇಡೀ ಭಾರತದಲ್ಲೆಲ್ಲಾ ಮನೆಮಾತಾಗಿದೆ. ಭಾರತ ಗಡಿ ಪ್ರಾಂತ್ಯಗಳ ಒಗ್ಗಟ್ಟಿನಿಂದಿರುವುದಾದರೆ ಅದರ ಕೀರ್ತಿಯು ಶೇಕ್ ಸಾಹೇಬರಿಗೆ ಸಲ್ಲುತ್ತದೆ.

ಮುಸ್ಲಿಂ ಲೀಗ್‌ನ 'ಎರಡು ದೇಶಗಳ ತತ್ವ' ವನ್ನು ಅಬ್ದುಲ್ಲಾ ತೀವ್ರವಾಗಿ ವಿರೋಧಿಸಿದರು. ಮುಸ್ಲಿಂ ಲೀಗ್‌ನ ಮುಖ್ಯ ಉದ್ದೇಶ ದೇಶದ ವಿಭಜನೆಯಾಗಿತ್ತು. ಕೋಮುವಾದದ ಪರ ಅದು ಜನರನ್ನು ಉದ್ರೇಕಗೊಳಿಸುತ್ತಿತ್ತು. ಆದರೆ, ಅಬ್ದುಲ್ಲಾರವರು ಕಾಶ್ಮೀರಿ ಜನರಲ್ಲಿ ಸೌಹಾರ್ದವನ್ನು ಐಕ್ಯತೆಯನ್ನುಂಟುಮಾಡಲು ಶ್ರಮಿಸಿದರು. ಒಬ್ಬ ನಿಷ್ಠಾವಂತ ದೇಶಪ್ರೇಮಿಯಾಗಿ ತಾನು ನಂಬಿದ್ದ ತನ್ನ ಧ್ಯೇಯಗಳಾಗಿದ್ದ ಪ್ರಮುಖ ಮೂರು ಗುರಿಗಳಿಗಾಗಿ ಹೋರಾಟ ನಡೆಸಿದರು. ಅವುಗಳೆಂದರೆ, ಕಾಶ್ಮೀರದ ಮಹಾರಾಜನ ವಿರುದ್ಧ, ಬ್ರಿಟಿಷರ ವಿರುದ್ಧ ಮತ್ತು ಪಾಕಿಸ್ತಾನದ ನಿರ್ಮಾಪಕನ ಕೋಮುವಾದದ ವಿರುದ್ಧ.

ಶೇಕ್ ಅಬ್ದುಲ್ಲಾರವರು ದಕ್ಷ ಆಡಳಿತಗಾರರು, ವಾಗ್ಮಿ ಸಂಘಟನಾ ಚತುರರೂ ಆಗಿದ್ದರು. ತನ್ನ ರಾಜ್ಯಕ್ಕೆ ದಕ್ಷ ಆಡಳಿತವನ್ನು ನೀಡಿದರು. ಇವರನ್ನು ಕಾಶ್ಮೀರದ ಕೇಸರಿ ಎಂದು ಕರೆಯಲಾಗುತ್ತಿತ್ತು. ಜಮ್ಮು ಮತ್ತು ಕಾಶ್ಮೀರಗಳು ಇಂದು ಭಾರತದ ಒಕ್ಕೂಟದಲ್ಲಿ ವಿಲೀನವಾಗಲು ಮುಖ್ಯ ಕಾರಣಕರ್ತರು ಶೇಕ್ ಅಬ್ದುಲ್ಲಾರವರು. ರಾಷ್ಟ್ರೀಯ ಹೋರಾಟದ ದಿಗ್ಗಜರಲ್ಲಿ ಇವರೂ ಒಬ್ಬರಾಗಿದ್ದು, ಇವರ ತ್ಯಾಗ ಮತ್ತು ಸಾಧನೆಗಳಿಂದ ಇಡೀ ರಾಷ್ಟ್ರವೇ ಇವರ ಬಗ್ಗೆ ಹೆಮ್ಮೆ ಪಡುತ್ತದೆ.

* ಸಂಸತ್ತಿನ ಮಾಜಿ ಸದಸ್ಯರು.

ಮಹಾಪುರುಷನಿಗೆ ಗೌರವದ ಕಾಣಿಕೆ

– ಅಜೀಜ್ ಸೇಠ್ *

ಭಾರತ ಸ್ವಾತಂತ್ರ್ಯಯೋಧರಲ್ಲಿ ಮತ್ತು ರಾಷ್ಟ್ರ ನಿರ್ಮಾತೃಗಳಲ್ಲಿ ಶೇಕ್ ಅಬ್ದುಲ್ಲಾ ಗೌರವಾನ್ವಿತ ಹಾಗೂ ಉನ್ನತ ಸ್ಥಾನವನ್ನು ಆಕ್ರಮಿಸಿಕೊಂಡಿದ್ದಾರೆ. ಇವರ ತ್ಯಾಗ ಮತ್ತು ಸೇವೆಗಳೂ ಐತಿಹ್ಯವಾಗಿದೆ. ತಮ್ಮ ಪಾಂಡಿತ್ಯ ಮತ್ತು ಆಸಕ್ತಿ ರಾಷ್ಟ್ರೀಯ ಕರೆಗೆ ಓಗೊಟ್ಟು ರಾಜಕೀಯ ಚಟುವಟಿಕೆಗಳಲ್ಲಿ ತೊಡಗುವಂತೆ ಪ್ರೇರೆಪಿಸಿದವು. ತಮ್ಮ ಕಾಲದ ಮಹತ್ವದ ಜನಪ್ರತಿನಿಧಿಗಳಾಗಿ ಸ್ಫೂರ್ತಿ ನೀಡಿದ ಕೆಲವೇ ಮಂದಿ ನಾಯಕರ ಪೈಕಿ ಅಬ್ದುಲ್ಲಾ ಪ್ರಾಮಾಣಿಕ ಹಾಗೂ ಅತ್ಯಂತ ಧೈರ್ಯಶಾಲಿ ವ್ಯಕ್ತಿಯಾಗಿದ್ದರು.

ಶೇಕ್ ಮಹಮ್ಮದ್ ಅಬ್ದುಲ್ಲಾರಂತಹ ನಾಯಕರು ಅತಿ ವಿರಳ ಮತ್ತು ಮುಂಬರುವ ಪೀಳಿಗೆಗೆ ಒಳ್ಳೆಯ ನಿದರ್ಶನವಾಗಿ ನಿಲ್ಲುತ್ತಾರೆ. ಒಂದು ಪ್ರಾಮಾಣಿಕ ಪ್ರಕ್ರಿಯೆಯಲ್ಲಿ ಅಬ್ದುಲ್ಲಾ ಒಬ್ಬ ಶ್ರೇಷ್ಠ ರಾಜಕೀಯ ನಿಪುಣ. ಅವರು ಕನಸು ಕಾಣುತ್ತಾ ಕೂಡವುದು ಕಡಿಮೆ, ಕ್ರಿಯಾಶೀಲರಾಗಿ ತೊಡಗುವುದೇ ಹೆಚ್ಚು. ಸೋಲಿಲ್ಲದ ನಾಯಕತ್ವ, ಶ್ರೇಷ್ಟ ವ್ಯಕ್ತಿತ್ವ ಮತ್ತು ಸಮರ್ಪಣಾ ಮನೋಭಾವ ಮನುಷ್ಯರಾಗಿದ್ದ ಇವರು ಅಸಾಧಾರಣ ಪ್ರತಿಭಾವಂತರು. ಇವರಿಗೆ ಇತಿಹಾಸದಲ್ಲಿ ಖಂಡಿತವಾಗಿಯೂ ಗೌರವಾನ್ವಿತ ಸ್ಥಾನವುಂಟು.

ಡಿಸೆಂಬರ್ 5, 1905ರಂದು ಶ್ರೀನಗರದಲ್ಲಿ ಶೇಕ್ ಅಬ್ದುಲ್ಲಾರವರು ಜನಿಸಿದರು. ಇವರ ತಂದೆ ಶೇಕ್ ಮಹಮ್ಮದ್ ಇಬ್ರಾಹಿಂ ಇವರ ಜನನಕ್ಕೆ ಇನ್ನೂ ಎರಡು ತಿಂಗಳಿರುವಾಗಲೇ ಕಾಲವಾಗಿದ್ದರು. ತನ್ನೆಲ್ಲಾ ಪ್ರೀತಿ ಹಾಗೂ ಆಸಕ್ತಿಗಳಿಂದ ಅಬ್ದುಲ್ಲಾರನ್ನು ಅವರ ತಾಯಿ ಬೆಳೆಸಿದರು. ತನ್ನ ಮಗನನ್ನು ಒಳ್ಳೆಯ ಮಾರ್ಗದರ್ಶನದಲ್ಲಿ ಉನ್ನತ ವಿದ್ಯಾವಂತನನ್ನಾಗಿ ಮಾಡಲು ತುಂಬಾ ತುಂಬಾ ಶ್ರಮಿಸಿದರು. ತಮ್ಮ ತಾಯಿಯ ಒಲುಮೆ, ವಾತ್ಸಲ್ಯ, ಜಾಣ್ಮೆ ಹಾಗೂ ಪ್ರೋತ್ಸಾಹದ ಗುಣಗಳನ್ನು ಶೇಕ್‌ರೂ ಸದಾ ಸ್ಮರಿಸುತ್ತಿದ್ದರು. ತಾಯಿಯ ಬಗ್ಗೆ ಅವರಿಗೆ ಅಪಾರ ಗೌರವಿತ್ತು. ತುಂಬಾ ಚಿಕ್ಕವನೂ, ತಂದೆಯಿಲ್ಲದ ತಬ್ಬಲಿಯೂ ಆಗಿದ್ದ ಅಬ್ದುಲ್ಲಾ ವಿದ್ಯಾಭ್ಯಾಸವನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ತನ್ನ ಮಗ ಗಳಿಸಬೇಕೆಂದು ಅವರ ತಾಯಿಯ ಇಚ್ಛೆಯಿತ್ತು. ಆದ್ದರಿಂದ, ಅಬ್ದುಲ್ಲಾರ ವ್ಯಾಸಂಗಕ್ಕೆ ಅವರ ತಾಯಿ ತುಂಬಾ ಪ್ರೋತ್ಸಾಹ ನೀಡಿದರು. ಅಬ್ದುಲ್ಲಾರ ತಂದೆಯವರು ರೇಷ್ಮೆ ವ್ಯಾಪಾರಿಗಳಾಗಿದ್ದರು. ಈ ವ್ಯಾಪಾರವು ತಲತಲಾಂತರಗಳಿಂದ ನಡೆದುಕೊಂಡು ಬಂದಿತ್ತು. ಅವರ ತಂದೆಯ ನಿಧನದ ನಂತರ ಈ ವ್ಯಾಪಾರವನ್ನು ಹತ್ತಿರದ ಸಂಬಂಧಿಕರ ಮತ್ತು ಸ್ನೇಹಿತರ ನೆರವಿನಿಂದ ಮುಂದುವರಿಸಲಾಯಿತು. ಅಬ್ದುಲ್ಲಾರ ತಾಯಿಯವರು ಬುರ್ಕಾ (ಘೋಷಾ) ತೊಟ್ಟುಕೊಂಡು ತಮ್ಮ ಧರ್ಮದ ವಿಧಿಗಳಿಗೆ

* ಕರ್ನಾಟಕ ರಾಜ್ಯ ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಸಚಿವರು

ಬದ್ಧರಾಗಿದ್ದುಕೊಂಡೇ ವ್ಯಾಪಾರದ ಮೇಲ್ವಿಚಾರಣೆ ನೋಡಿ ಕೊಳ್ಳುತ್ತಿದ್ದರು. ಅವರು ಸಂಪ್ರದಾಯಕ್ಕೆ ಬದ್ಧರಾಗಿದ್ದರು. ಶ್ರೀನಗರದ ಸರ್ ಅಮರ್ ಸಿಂಗ್ ತಾಂತ್ರಿಕ ಸಂಸ್ಥೆಯಲ್ಲಿ ಅಬ್ದುಲ್ಲಾರ ಅಣ್ಣ ಶೇಕ್ ಮುಕ್ಬಾಲ್ ಚಿತ್ರಕಲೆ ಶಿಕ್ಷಕರಾಗಿದ್ದರು.

ಬಾಲ್ಯದಿಂದಲೂ ಅಬ್ದುಲ್ಲಾರಿಗೆ ಜ್ಞಾನಾರ್ಜನೆಯಲ್ಲಿ ತುಂಬಾ ಆಸಕ್ತಿಯಿತು. ಛಲದಿಂದ ಅಧ್ಯಯನ ಮಾಡುತ್ತಿದ್ದರು. ಆಟದ ಮೈದಾನಗಳಲ್ಲಿ ಅವರೆಂದಿಗೂ ಸಮಯವನ್ನು ಕಳೆಯುತ್ತಿರಲಿಲ್ಲ, ವಿರಾಮದ ವೇಳೆಯಲ್ಲಿ ಪುಸ್ತಕಗಳ ಅಧ್ಯಯನದಲ್ಲಿ ಮತ್ತು ಇತರ ವಿಷಯಗಳನ್ನು ಗ್ರಹಿಸುವುದರಲ್ಲಿ ವಿನಿಯೋಗಿಸುತ್ತಿದ್ದರು.ಉರ್ದು ಕಾವ್ಯದ ಕಟ್ಟಾ ಅಭಿಮಾನಿಯಾಗಿದ್ದರು. ಲೋಕಖ್ಯಾತರಾದ ಅಲ್ಲಾಮ ಇಕ್ಬಾಲರ ಕಾವ್ಯ ಸಂದೇಶಗಳಲ್ಲಿ ಇವರಿಗೆ ಅಪಾರ ಆಸಕ್ತಿಯಿತ್ತು. ಜೊತೆಗೆ ಮಹಮ್ಮದ್ ಇಕ್ಬಾಲ್‌ರಿಂದ ಖುದಿ ಫಿಲಾಸಫಿ (ಇಗೋಯಿಸಂ) ಅಸ್ತಿತ್ವಕ್ಕೆ ಬಂದು ವ್ಯಾಪಕವಾಗಿ ಹರಡತೊಡಗಿತು. ಇದರ ತತ್ವ 'ಸ್ವಯಂ ಗೌರವ' ವು ಅಬ್ದುಲ್ಲಾರನ್ನು ಮೋಡಿ ಮಾಡಿತು. ನಿಸ್ಸಂಶಯವಾಗಿ ಅಬ್ದುಲ್ಲಾ ಖುದಿ ತತ್ವಕ್ಕೆ ಬದ್ಧರಾದರು. ನಂತರ ಜೀವನದಲ್ಲಿ ಇವರು ಎದುರಿಸಿದ ಕಠಿಣ ಪರೀಕ್ಷೆಗಳಿಗೆ ಈ 'ಸ್ವಯಂಗೌರವ' ದ ಸಂದೇಶವೂ ಅವರನ್ನು ಮಾನಸಿಕವಾಗಿ ಮುನ್ನಡೆಸಿತು. ಶ್ರದ್ಧಾಪೂರ್ವಕವಾಗಿ ಈ ನಿಷ್ಠೆಯನ್ನು ಅಬ್ದುಲ್ಲಾ ಪಾಲಿಸುತ್ತಾ ಬಂದರು. ಅಬ್ದುಲ್ಲಾ ಹತ್ತನೇ ತರಗತಿಯಿಂದ ಉತ್ತೀರ್ಣರಾಗುತ್ತಿದ್ದಂತೆ ಅವರ ಪ್ರೇಮಮಯಿಯಾದ ತಾಯಿಯನ್ನು ಕಳೆದುಕೊಂಡರು. ತಾಯಿಯ ನಿಧನದಿಂದ ಅಬ್ದುಲ್ಲಾ ತೀವ್ರ ಅಘಾತದಿಂದ ಅತೀವ್ರ ದುಃಖಗೊಂಡರು. ತಾಯಿಯ ಮರಣವು ಅವರಿಗೆ ಭರಿಸಲಾಗದ ಭಾರಿ ನಷ್ಟವುಂಟು ಮಾಡಿತ್ತು. ಒಳ್ಳೆಯ ಮಗನಾದ ಅಬ್ದುಲ್ಲಾ ತನ್ನ ಪ್ರೀತಿ ಪಾತ್ರಳಾಗಿದ್ದ ತಾಯಿಗೆ ಸದಾ ಗೌರವದ ಶ್ರದ್ಧಾಂಜಲಿ ಸಲ್ಲಿಸುತ್ತಿದ್ದರು. ತಾಯಿಯ ನಿಧನದ ನಂತರ ಆರ್ಥಿಕವಾಗಿ ಅನೇಕ ಸಮಸ್ಯೆಗಳನ್ನು ಎದುರಿಸಿದರು. ಅಂತೂ ಹೇಗೂ ನಿಭಾಯಿಸಿಕೊಂಡು ಎಫ್.ಎಸ್.ಸಿ (FSc) ವ್ಯಾಸಂಗವನ್ನು ಮುಗಿಸಿದರು.ಅನಂತರ, ಲಾಹೋರ್‌ಗೆ ತೆರಳಿ ಖ್ಯಾತ ಇಸ್ಲಾಮಿಯ ಕಾಲೇಜಿನಲ್ಲಿ ಬಿಎಸ್‌ಸಿ (BSc)ಪದವಿಯನ್ನು ಪಡೆದರು.

ಅಬ್ದುಲ್ಲಾ ಲಾಹೋರಿನಲ್ಲಿದ್ದಾಗ ಅಲ್ಲಿನ ಬಡ ಕಾಶ್ಮೀರಿಯನ್ನರ ಸ್ಥಿತಿ ಗತಿಗಳನ್ನು ಕಣ್ಣಾರೆ ಕಂಡು ತೀವ್ರ ದುಃಖಗೊಂಡರು. ಅವರು ಅನುಭವಿಸುತ್ತಿದ್ದ ಯಾತನೆಗಳು ಅವರ ಹೃದಯವನ್ನು ಕಲುಕಿದವು. ಆದರೆ. ಯುವಕರಾದ ಅಬ್ದುಲ್ಲಾರವರು ಅಂದಿನ ತಮ್ಮ ಪರಿಸ್ಥಿತಿಯಲ್ಲಿ ಏನನ್ನೂ ಮಾಡಲು ಸಾಧ್ಯವಿರಲಿಲ್ಲ. ಎಲ್ಲವನ್ನೂ ಸಹಿಸಿಕೊಂಡು ಅಸಹಾಯಕರಾಗಿದ್ದರು. ಅಸಂತುಷ್ಟ ಸ್ಥಿತಿಯಲ್ಲಿರುವ ಅನಕ್ಷರಸ್ಥ, ಹಿಂದುಳಿದ ಶೋಷಿತ ಕಾಶ್ಮೀರಿಯನ್ನರ ಬಗ್ಗೆ ಒಬ್ಬಂಟಿಯಾಗಿ ಕುಳಿತು ಚಿಂತಿಸುತ್ತಿದ್ದರು. ಲಾಹೋರಿನಿಂದ ಹಿಂತಿರುಗಿ ತಮ್ಮ ತಾಯ್ನೆಲ್ಲವಾದ ಶ್ರೀನಗರಕ್ಕೆ ಬಂದರು. ಅಲ್ಲಿಯೂ ಕೂಡ ಮುಗ್ಧ, ಅಮಾಯಕ ಕಾಶ್ಮೀರಿ ಸ್ತ್ರೀ-ಪುರುಷರ ಮೇಲೆ ಅಧಿಕಾರಶಾಹಿ ನಡೆಸುತ್ತಿದ್ದ ಘೋರ ಕೃತ್ಯಗಳನ್ನು ಕಂಡರು. ಅಂದಿನ ದಿನಗಳಲ್ಲಿ ಲಾಹೋರಿನಲ್ಲಿ ಕಾಶ್ಮೀರದ ಕಾರ್ಮಿಕರು ಅತಿ ಕಠಿಣ ಕೆಲಸಗಳ

ದುಡಿಮೆಗೊಳಗಾಗಿದ್ದರು. ಮಣ್ಣಿನ ಚೀಲಗಳನ್ನು ದೊಡ್ಡ ದೊಡ್ಡ ಮರದ ದಿಮ್ಮಿಗಳನ್ನು ಅಥವಾ ಭಾರವಾದ ಸಿಮೆಂಟ್ ಚೀಲಗಳನ್ನು ಹೊತ್ತು ಹೋಗುವ ಕಾಶ್ಮೀರದ ಯುವಕರನ್ನು ಕಂಡಾಗಲೆಲ್ಲಾ ಅಬ್ದುಲ್ಲಾ ವೇದನೆಯಿಂದ ಕಂಬನಿ ಸುರಿಸುತ್ತಿದ್ದರು. ಏಕೆಂದರೆ, ಇವರೂ ಕಾಶ್ಮೀರಿಯನ್ನರಾದ್ದರಿಂದ ಇವರ ವರ್ಗದ ಜನರು ಇವರನ್ನು ಹಾಸ್ಯ ಮಾಡುತ್ತಿದ್ದರಲ್ಲದೆ 'ಹುಟ್ಟೊ (ಕೂಲಿ, ಸೇವಕ) ಒಂದು ಕರೆಯುತ್ತಿದ್ದರು. ಆದರೆ, ಇಂತಹ ಅಪಮಾನಗಳನ್ನು ಬೆಂಬಲಿಗರ ಕೊರತೆಯಿಂದ ಸಹಿಸಿಕೊಳ್ಳಬೇಕಾಗಿದೆಯೆಂದು ಭಾವಿಸಿದರು.

ತಮ್ಮ ಬಿಎಸ್‌ಸಿ ಪದವಿಯನ್ನು ಯಶಸ್ವಿಯಾಗಿ ಮುಗಿಸಿದ ನಂತರ ಶೇಕ್ ಅಬ್ದುಲ್ಲಾ ಎಂಎಸ್‌ಸಿ ಪದವಿ ಪಡೆಯಲು ಅಲಿಘರ್ ಮುಸ್ಲಿಂ ವಿಶ್ವವಿದ್ಯಾನಿಲಯಕ್ಕೆ ಹೊರಟರು. ಕಾಶ್ಮೀರಿಗಳನ್ನು ಕೀಳಾಗಿ ಕಾಣಲಾಗುತ್ತಿದೆಯೆಂಬ ಭಾವನೆ ಅಲ್ಲೂ ಅವರಿಗೆ ಉಂಟಾಯಿತು. ಇದರಿಂದ ಅವರಿಗೆ ದುಃಖವಾಗಿದ್ದೆ ಅಲ್ಲದೆ ಕಾಶ್ಮೀರದಲ್ಲಿ ಹುಟ್ಟುವುದು ಒಂದು ಪಾಪವೇನೋ ಎಂದು ಯೋಚಿಸುತ್ತಿದ್ದರು. ಪಂಜಾಬ್ ಮತ್ತು ಉತ್ತರ ಪ್ರದೇಶದ ಜನತೆ ಕಾಶ್ಮೀರದವರನ್ನು ಕೀಳಾಗಿ ಕಾಣುವುದು ಅಬ್ದುಲ್ಲರವರನ್ನು ಚಿಂತೆಗೀಡು ಮಾಡಿತು, ಈ ದ್ವೇಷ ಅಥವಾ ತಾತ್ಸಾರಭಾವನೆಯನ್ನು ನಿವಾರಿಸಲು ಅವರು ಉತ್ಸುಕರಾಗಿದ್ದರು. ಜೀವನದ ಎಲ್ಲಾ ವಲಯಗಳಲ್ಲಿ ಕಾಶ್ಮೀರದವರಿಗೆ ಗೌರವ ದೊರೆಯಬೇಕೆಂದು ಅವರು ಭಾವಿಸಿದರು ಕಾಶ್ಮೀರದ ಹೆಸರು ಮತ್ತು ಖ್ಯಾತಿಯನ್ನು ಮೆರೆಸಲು ಅನೇಕ ಪ್ರಶಂಸಾರ್ಹ ಕಾರ್ಯಗಳನ್ನು ಕೈಗೊಳ್ಳಲು ಅವರ ಬುದ್ಧಿ ಮತ್ತು ಹೃದಯದಲ್ಲಿ ಆಳವಾದ ಆಕಾಂಕ್ಷೆ ಇತ್ತು.

ಅವರೆಂದೂ ಕೋಮವಾದಿಯಾಗಿರಲಿಲ್ಲ ಹಾಗೂ ಸಂಕೋಚಿತ ವಾದವನ್ನು ಅವರು ದ್ವೇಷಿಸುತ್ತಿದ್ದರು ಆದರೂ ಕಾಶ್ಮೀರದ ಮುಸಲ್ಮಾನರ ಬಗ್ಗೆ ಇತರ ಮುಸ್ಲಿಂ ಸೋದರರು ತಳೆದಿದ್ದ ತಿರಸ್ಕಾರ ಭಾವನೆಯನ್ನು ಸಹಿಸುವುದು ಅವರಿಗೆ ಕಠಿಣವಾಗಿತ್ತು. ಕಾಶ್ಮೀರದ ಜನರ ಬಗ್ಗೆ ಜನರು ಇಂತಹ ಪಕ್ಷಪಾತ ನಿಲುವನ್ನು ತಳೆದಿದ್ದರ ಕಾರಣಗಳನ್ನು ಅಳಿಯುವುದು ಅವರಿಗೆ ಕಷ್ಟವಾಗಿದ್ದರೂ ಈ ಅನ್ಯಾಯದ ಅಸಮಾಧಾನವನ್ನು ನಿವಾರಿಸಲು ಸಾಧ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಅವರು ನಿಶ್ಚಯಿಸಿದರು ಅವರು ಅಲಿಘರ್ ವಿಶ್ವವಿದ್ಯಾನಿಲಯದಲ್ಲಿ ಇನ್ನು ವಿದ್ಯಾರ್ಥಿಯಾಗಿದ್ದಾಗ ಕಾಶ್ಮೀರದ ಮಾಜಿಮಂತ್ರಿಯಾಗಿದ್ದ ಅಲ್ಬಿಯನ್ ಬ್ಯಾನರ್ಜಿಯವರು ಕಾಶ್ಮೀರದ ಮೇಲೆ ಬರೆದಿದ್ದ ಒಂದು ಲೇಖನ ಪತ್ರಿಕೆಯಲ್ಲಿ ಪ್ರಕಟವಾಯಿತು. ನಂತರ ಕಾಶ್ಮೀರ ಕುರಿತ ಲೇಖನಗಳು ಆ ಕಾಲದ ಪತ್ರಿಕೆಗಳಲ್ಲಿ ಪ್ರಕಟವಾದವು. ಆ ಲೇಖನಗಳಲ್ಲಿ ಕಾಶ್ಮೀರದ ಸಮಸ್ಯೆಯನ್ನು ಅದೊಂದು ಹಿಂದೂ-ಮುಸ್ಲಿಂ ಸಮಸ್ಯೆಯಂತೆ ದುರುದ್ದೇಶದಿಂದ ನಿರೂಪಿಸಿದ್ದರ ಬಗ್ಗೆ ಅಬ್ದುಲ್ಲಾಗೆ ನೋವಾಯಿತು. ಅಲ್ಬಿಯಾನ್ ಬ್ಯಾನರ್ಜಿ ಮತ್ತಿತರರು ಈ ಸಮಸ್ಯೆಗೆ ಕೋಮುವಾದದ ರೂಪ ನೀಡಿದ್ದನ್ನು ಕೆಲವು ವೃತ್ತಪತ್ರಿಕೆಗಳು ಬಲವಾಗಿ ವಿರೋಧಿಸಿದ್ದವು ಕೆಲವು ಮಂದಿ ಮುಸ್ಲಿಂ ಲೇಖಕರೂ ಸಹ ತಮ್ಮ ದುಸ್ಥಿತಿಯನ್ನು

ಹಾಗೂ ತಮ್ಮ ಅಭಿಪ್ರಾಯಗಳನ್ನು ಪ್ರತಿಕೆಗಳನ್ನು ಪ್ರಕಟಿಸಿದರು ಈ ಚರ್ಚೆಯ ಬಗ್ಗೆ ತರುಣ ಅಬ್ದುಲ್ಲಾ ಬಹಳ ಉತ್ಸಾಹಭರಿತರಾಗಿದ್ದರು ಹಾಗೂ ಲೇಖನಗಳಲ್ಲಿ ಕಂಡುಬಂದ ಸತ್ಯಾಂಶಗಳನ್ನು ಮತ್ತು ಅಂಕಿಂಶಗಳನ್ನು ಶ್ರದ್ಧೆಯಿಂದ ವಿಶ್ಲೇಷಿಸುತ್ತಿದ್ದರು. ಎಂಎಸ್‌ಸಿ ಪದವಿ ಪಡೆದನಂತರ ಶೇಕ್ ಅಬ್ದುಲ್ಲಾ 1930ರಲ್ಲಿ ಕಾಶ್ಮೀರದ ರಮ್ಯ ಕಣಿವೆಗೆ ಸಂತೋಷದಿಂದ ಹಿಂತಿರುಗಿದರು. ಶ್ರೀನಗರದಲ್ಲಿ ಅವರು ಕೆಲವು ಮಂದಿ ವಿದ್ಯಾವಂತ ತರುಣ ಮುಸಲ್ಮಾನರನ್ನು ಭೇಟಿ ಮಾಡಿದರು ತಮ್ಮ ಚಟುವಟಿಕೆಗಳಿಗೆ ಸ್ನೇಹಯುತ ಹಸ್ತಾಚಾಚುವಂತೆ ಅಬ್ದುಲ್ಲಾ ಅವರನ್ನು ಕೋರಿದರು ಈ ತರುಣ ಮನೆಗಳಲ್ಲಿ ದೇಶಪ್ರೇಮದ ವಿಚಾರಗಳನ್ನು ಮೂಡಿಸುವಲ್ಲಿ ಅಬ್ದುಲ್ಲಾ ಯಶಸ್ವಿಯಾದರು ತಮ್ಮ ಅಗಮ್ಯ ಚೈತನ್ಯ, ಸ್ಫೂರ್ತಿದಾಯಕ ವಾಗ್ವೈಖರಿ ಮತ್ತು ಅಸಾಧಾರಣ ಸಂಘಟನಾ ಸಾಮರ್ಥ್ಯದಿಂದ ಅವರು ಕಾಶ್ಮೀರ ಕಣಿವೆಯಲ್ಲಿ ಬಹುಬೇಗ ಜನಪ್ರಿಯರಾದರು. ಸಿವಿಲ್ ರಿಕ್ರುಟ್‌ಮೆಂಟ್ ಬೋರ್ಡ್‌ನ ನಿಯಮ ನಿಬಂಧನೆಗಳ ವಿರುದ್ಧ ಅವರು ಸಲ್ಲಿಸಿದ ಪ್ರಬಲವಾದ ಅರ್ಜಿಅವರ ಮೊಟ್ಟ ಮೊದಲ ರಾಜಕೀಯ ಚಟುವಟಿಕೆಗಳಲ್ಲಿ ಒಂದಾಗಿತ್ತು. ಈ ಬಗ್ಗೆ ನಿಯೋಗವೊಂದು ಕೂಡ ಕ್ಯಾಬಿನೆಟನ್ನು ಭೇಟಿ ಮಾಡಿತ್ತು ಅಬ್ದುಲ್ಲಾರವರ ನಿಕಟವರ್ತಿಗಳನ್ನು ಒಬ್ಬರಾದ ಅಬ್ದುಲ್ ಅಜೀಜ್ ಅವರು ಈ ನಿಯೋಗದ ಸದಸ್ಯರಾಗಿದ್ದರು. ನೇಮಕಾತಿನಿಯಮಗಳ ಅನೇಕ ಆಕ್ಷೆಪಾರ್ಹ ಅಂಶಗಳನ್ನು ಮನವಿಪತ್ರ ಸ್ಪಷ್ಟವಾಗಿ ಎತ್ತಿ ತೋರಿಸಿದ್ದರೂ ಕ್ಯಾಬಿನೆಟ್‌ನ ಸಾಮಾನ್ಯ ನಿಲುವು ಅಸಮಾಧಾನಕರವೂ, ಸಹಾನುಭೂತಿಯಿಲ್ಲದ್ದು ಹಾಗೂ ಬಹಳ ನಿರಾಶದಾಯಕವೂ ಆಗಿತ್ತು.

ಘಟನೆಯಿಂದ ಜನರು ಆಕ್ರೋಶಗೊಂಡರು ಹಾಗೂ ಶಾಂತಿಯುತ ಕಣಿವೆಯಲ್ಲಿ ಅಶಾಂತಿ ಹೆಚ್ಚಾಗ ತೊಡಗಿತು ವಿದ್ಯಾವಂತ ಮುಸಲ್ಮಾನ ತರುಣರು ತೀವ್ರವಾಗಿ ನಿರಾಶೆಗೊಂಡರು ತಮ್ಮ ದುಃಖ ದುಮ್ಮಾನಗಳನ್ನು ಮತ್ತು ಸಮಂಜಸವಾದ ಬೇಡಿಕೆಗಳನ್ನು ವಿವರಿಸಲು ಪಂಜಾಬ್‌ನ ಪ್ರಮುಖ ದಿನಪತ್ರಿಕೆಯಾದ ಉರ್ದುಡೈಲಿ ಆಫ್ ಪಂಜಾಬ್‌ನ ಬೆಂಬಲವನ್ನು ಅವರು ಪಡೆದುಕೊಂಡರು ಲಾಹೋರಿನ ಹಾಗೂ ಉತ್ತರ ಭಾರತದ ಇತರ ಪ್ರಮುಖ ನಗರಗಳಿಂದ ಪ್ರಕಟಗೊಳ್ಳುತ್ತಿದ್ದ ವೃತ್ತಪತ್ರಿಕೆಗಳೂ ಕಾಶ್ಮೀರದಲ್ಲಿನ ಕಠಿಣ ನೀತಿಗಳನ್ನು ಕುರಿತ ಸತ್ಯವನ್ನು ಬಯಲುಮಾಡಿದ್ದನ್ನು ಗಮನಿಸಿ ಸರ್ಕಾರ ಕಾಶ್ಮೀರ ಕಣಿವೆಯಲ್ಲಿ ವೃತ್ತ ಪತ್ರಿಕೆಗಳ ಮೇಲೆ ನಿಷೇಧವನ್ನು ಹೇರಿತು ಕಾಶ್ಮಿರದ ಕಣಿವೆಗೆ ಸಿಯಾನತ್‌ನ ಪ್ರವೇಶವನ್ನು ಮೊದಲೇ ನಿಷೇಧಿಸಲಾಗಿತ್ತು. ಆದೀಗ ಕಣಿವೆಗೆ ಎಲ್ಲಾ ವೃತ್ತಪತ್ರಿಕೆಗಳ ಮೇಲೆ ನಿರ್ಬಂಧವನ್ನು ವಿಧಿಸಲಾಯಿತು ಇಸ್‌ಕ್ಯೂಲ್ಯಾಬ್ ಮತ್ತು ಮುಸ್ಲಿಂ ಔಟ್‌ಲುಕ್ ನಂತಹ ದೇಶಪ್ರೇಮಿ ನಿಯತಕಾಲಿಕೆಗಳ ಪ್ರಕಟನೆಗೆ ಅವಕಾಶವನ್ನು ಕೊಡಲಿಲ್ಲ, ವೃತ್ತ ಪತ್ರಿಕೆಗಳ ಮೇಲಿನ ನಿಷೇಧದಿಂದ ಜನತೆ ಇನ್ನಷ್ಟು ಕುಂಠಿತಗೊಂಡರು. ಕಾಶ್ಮೀರ ಸರ್ಕಾರದ ತಪ್ಪು ಕ್ರಮಗಳು ಮತ್ತು ಪ್ರಜಾಸತ್ತಾತ್ಮಕವಲ್ಲದ ಕಾರ್ಯಗಳ ಬಗ್ಗೆ ಅಸಮಧಾನದಿಂದಿದ್ದ ಸಾರ್ವಜನಿಕ ವೃತ್ತಿಗಳ ಚಲನವಲನಗಳನ್ನು ನಿಯಂತ್ರಿಸಲು ಸರ್ಕಾರ ನಂತರ ಪ್ರಯತ್ನಿಸಿತು ಸರಿಯಾದ ಹಾದಿಗೆ

ಚಲನವಲನಗಳನ್ನು ನಿಯಂತ್ರಿಸಲು ಸರ್ಕಾರ ನಂತರ ಪ್ರಯತ್ನಿಸಿತು ಸರಿಯಾದ ಹಾದಿಗೆ ಬರುವಂತೆ ತರುಣರು ಸರ್ಕಾರಕ್ಕೆ ಮನವಿಮಾಡಿಕೊಂಡರೂ ಸರ್ಕಾರ ಗಮನಕೊಡಲಿಲ್ಲ ತರುಣರು ಮತ್ತು ವಿದ್ಯಾವಂತ ಮುಸಲ್ಮಾನರ ಪ್ರಭಾವ ಹೆಚ್ಚಾಗುತ್ತಿದ್ದಂತೆ ಅದಕ್ಕೆ ಪ್ರೋತ್ಸಾಹ ಕೊಡದೆ ಇರಲು ಅಧಿಕಾರಿಗಳು ನಿಶ್ಚಯ ಮಾಡಿದ್ದರು ಸರ್ಕಾರದ ವಿರುದ್ಧ ಜನರು ಘರ್ಷಣೆಯಲ್ಲಿ ತೊಡಗಿದ್ದ ಇಂತಹ ವಿಷಮ ಕಾಲದಲ್ಲಿ ಶೇಕ್ ಅಬ್ದುಲ್ಲಾರವರು ಸರ್ಕಾರಿ ಸೇವೆಗೆ ಸೇರಿದರು. ಶ್ರೀನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ಅವರನ್ನು ವಿಜ್ಞಾನದ ಶಿಕ್ಷಕರನ್ನಾಗಿ ನೇಮಿಸಲಾಯಿತು. ಅಬ್ದುಲ್ಲಾರವರ ಮೂಲವೇತನ 60 ರೂಪಾಯಿಗಳು ಹಾಗೂ ತುಟ್ಟಿಭತ್ಯೆ 22 ರೂಪಾಯಿಗಳು ಆಗಿತ್ತು. ಆದರೆ ಸಾಮರ್ಥ್ಯಹೊಂದಿದ್ದ ಕೆಲವು ಹಿಂದೂ ತರುಣರಿಗೆ ಸರ್ಕಾರಿಯಂತ್ರದಲ್ಲಿ ದೊಡ್ಡ ಹುದ್ದೆಗಳನ್ನು ಹಾಗೂ ಹೆಚ್ಚು ವೇತನ ಹುದ್ದೆಗಳನ್ನು ನೀಡಲಾಗಿತ್ತು. ಕಡಿಮೆ ಸಂಬಳದ ಸಾಧಾರಣ ಉದ್ಯೋಗವನ್ನು ಅಬ್ದುಲ್ಲಾರವರು ಒಪ್ಪಿಕೊಳ್ಳಬೇಕಾಯಿತು. ದೇಶಪ್ರೇಮಿ ತರುಣರಿಗೆ ಪ್ರಮುಖ ಆಡಳಿತಾತ್ಮಕ ಹುದ್ದೆಗಳನ್ನು ನೀಡದೆ ಇರಲು ಆಗಿನ ಸರ್ಕಾರ ಎಚ್ಚರಿಕೆ ವಹಿಸಿತ್ತೆಂಬುದನ್ನು ಇದು ಸ್ಪಷ್ಟವಾಗಿ ಸೂಚಿಸುತ್ತಿತ್ತು. ದೇಶದ ವಿವಿಧೆಡೆಗಳಲ್ಲಿ ಭಾರತದ ವಿಮೋಚನೆಗಾಗಿ ಚಳುವಳಿಗಳು ಪ್ರಬಲಗೊಳ್ಳುತ್ತಿದ್ದವು ಸ್ವಾತಂತ್ರ್ಯದ ಸಂದೇಶದ ಪ್ರಭಾವ ಕಾಶ್ಮೀರದ ಮೇಲೆ ನಿಧಾನವಾಗಿ ಉಂಟಾಗ ತೊಡಗಿತು ಈ ಅವಧಿಯಲ್ಲಿ ಕಾಶ್ಮೀರ ಕಣಿವೆಯ ಜನಸಂಖ್ಯೆ 95 ರಷ್ಟು ಮಂದಿ ಮುಸಲ್ಮಾನರಾಗಿದ್ದರು.

ಕಾಶ್ಮೀರ ಕಣಿವೆಯಲ್ಲಿ ಈದ್ ಪ್ರಾರ್ಥನೆಯನ್ನು ಸಹ ಸರ್ಕಾರ ನಿಷೇಧಿಸಿತು ಜಮ್ಮುವಿನಲ್ಲಿ ಪವಿತ್ರ ಖುರಾನ್ ಗ್ರಂಥಕ್ಕೆ ಅಗೌರವ ತೋರಿಸುವ ಒಂದು ಘಟನೆ ನಡೆದು ಬೆಂಕಿಗೆ ತುಪ್ಪ ಸುರಿದಂತಾಯಿತು ಧರ್ಮದ್ರೋಹದ ಈ ಎರಡೂ ಘಟನೆಗಳ ವಿವರವಾದ ವರದಿಗಳು ಶ್ರೀನಗರವನ್ನು ತಲುಪಿದಾಗ ಇಡೀ ಮುಸ್ಲಿಂ ಜನತೆ ಭ್ರಮನಿರಸನಗೊಂಡರು, ಜಮ್ಮುಮಸೀದಿಯಲ್ಲಿ ಒಂದು ಬೃಹತ್ ಸಾರ್ವಜನಿಕ ಸಭೆಯನ್ನು ತಕ್ಷಣ ಏರ್ಪಡಿಸಲಾಯಿತು ಹಾಗೂ ಅನೇಕ ಪ್ರಬಲ ನಿರ್ಣಯಗಳನ್ನು ಈ ಸಭೆಯಲ್ಲಿ ಅಂಗೀಕರಿಸಲಾಯಿತು ಮುಸಲ್ಮಾನರ ಧಾರ್ಮಿಕ ಭಾವನೆಗಳಿಗೆ ನೋವುಂಟುಮಾಡುವ ಎಲ್ಲಾ ಪ್ರಯತ್ನಗಳಿಂದ ದೂರವಿರಬೇಕೆಂದು ಕಾಶ್ಮೀರದ ಮಹಾರಾಜರನ್ನು ಒತ್ತಾಯಿಸಲಾಯಿತು ರಾಜ್ಯದಲ್ಲಿ ಕೋಮುವಾರು ಸೌಹರ್ದತೆಗೆ ಹಾನಿಯುಂಟು ಮಾಡುವುದಕ್ಕೆ ಕಾರಣವಾದ ಉಪದ್ರವಕಾರಿ ಜನರನ್ನು ತಕ್ಷಣ ಬಂಧಿಸಿ ಶಿಕ್ಷಿಸಬೇಕೆಂದು ಸಭೆ ಒತ್ತಾಯಿಸಿತು. ಪ್ರತಿಭಟನಾ ಸಭೆಯಲ್ಲಿ ಶೇಕ್ ಅಬ್ದುಲ್ಲಾರ ಹಾಜರಾತಿಯ ಬಗ್ಗೆ ಸರ್ಕಾರ ಅಸಮಾಧಾನಗೊಂಡಿತು ರಾಜ್ಯಪಾಲರ ಪೂರ್ವಾನುಮತಿಯಿಲ್ಲದೆ ಯಾವುದೇ ಭಾಷಣವನ್ನು ಮಾಡಬಾರದೆಂದು ತಿಳಿಸುವ ಸಾರ್ವಜನಿಕ ಸೂಚನೆಯನ್ನು ಮಸೀದಿಯ ಬಾಗಿಲುಗಳಿಗೆ ಅಂಟಿಸಲಾಯಿತು ಈ ಎಚ್ಚರಿಕೆಯನ್ನು ಮುಸಲ್ಮಾನರ ಧಾರ್ಮಿಕ ವ್ಯವಹಾರಗಳಲ್ಲಿ ನೇರವಾದ ಹಸ್ತಕ್ಷೇಪವೆಂದು ಪರಿಗಣಿಸಲಾಯಿತು ಈ ಇಸ್ಲಾಂ ವಿರೋಧಿ ನಿಲುವುಗಳ ಬಗ್ಗೆ ಕ್ರೋಧವ್ಯಕ್ತಪಡಿಸಲು ಮತ್ತೊಂದು ಸಾರ್ವಜನಿಕ ಸಭೆ ಕರೆಯುವ ಬಗ್ಗೆ

ಪ್ರಕಟನೆ ಹೊರಡಿಸಿದ್ದು ಈ ಎಚ್ಚರಿಕೆಗೆ ದೊರೆತ ತಕ್ಷಣದ ಪ್ರತಿಕ್ರಿಯೆಯಾಗಿತ್ತು ರಾಜ್ಯಪಾಲರ ಅಸಮಂಜಸ ವರ್ತನೆಯ ವಿರುದ್ಧ ಈ ಸಭೆಯಲ್ಲಿ ಉದ್ರಿಕ್ತ ಭಾಷಣಗಳನ್ನು ಮಾಡಲಾಯಿತು ರಾಜಕೀಯ ಚಟುವಟಿಕೆಗಳಲ್ಲಿ ಶೇಕ್ ಅಬ್ದುಲ್ಲಾ ಭಾಗವಹಿಸುವುದರ ಬಗ್ಗೆ ಸರ್ಕಾರದ ಅಸಮಧಾನ ಹೆಚ್ಚಾಗ ತೊಡಗಿತು ಅಬ್ದುಲ್ಲಾರ ಚಟುವಟಿಕೆಗಳನ್ನು ನಿರರ್ಥಕಗೊಳಿಸಲು ಶ್ರೀನಗರದಿಂದ ಮುಜಾಫೀರಾಬಾದ್ ' ಅವರನ್ನು ವರ್ಗಾಯಿಸುವ ತುರ್ತು ಆದೇಶವನ್ನು ಹೊರಡಿಸಲಾಯಿತು. ದುರುದ್ದೇಶದಿಂದ ತಮ್ಮ ವರ್ಗಾವಣೆಗೆ ಆದೇಶಿಸಿದ್ದನ್ನು ಖಂಡಿಸಿ, ಶೇಕ್ ಅಬ್ದುಲ್ಲಾ ಸರ್ಕಾರಕ್ಕೆ ಒಂದು ಕಟುವಾದ ಪತ್ರವನ್ನು ಬರೆದು ತಮ್ಮ ಪ್ರತಿಕ್ರಿಯೆ ತೋರಿದರು ಸರ್ಕಾರಿ ನೌಕರರಾಗಿ ತಾವು ಪಡೆಯುತ್ತಿದ್ದ ಸಂಬಳಕ್ಕಿಂತಲೂ ಹೆಚ್ಚಾಗಿ ತಮ್ಮ ಆತ್ಮಸಾಕ್ಷಿ ತಮಗೆ ಹೆಚ್ಚು ಮುಖ್ಯವೆಂದು ತಿಳಿದಿದ್ದ ಅವರು ಸರ್ಕಾರಿ ಅಧಿಕಾರಿಗಳ ಉದ್ಧಟತನಕ್ಕೆ ತಲೆಬಾಗಲು ನಿರಾಕರಿಸಿದರು ಪ್ರತಿಯೊಬ್ಬ ಮನುಷ್ಯನೂ ತನ್ನ ಸಹಮಾನವರ ನೈತಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕಲ್ಯಾಣಕ್ಕಾಗಿ ಶ್ರಮಿಸುವುದು ಒಂದು ಆದ್ಯ ಕರ್ತವ್ಯವಾಗಿದೆಯೆಂದು ಅವರು ಒತ್ತಿ ಹೇಳಿದರು ಕೇವಲ ಕೆಲವು ರೂಪಾಯಿಗಳ ಸಲುವಾಗಿ ಅಧಿಕಾರಿಗಳ ದರ್ಪಕ್ಕೆ ಮಣಿಯುವುದಕ್ಕಿಂತಲೂ ಸಹಧರ್ಮಿಯರಿಗೆ ಸೇವೆ ಸಲ್ಲಿಸುವುದು ಅವರಿಗೆ ಹೆಚ್ಚು ಮುಖ್ಯವಾಗಿತ್ತು. ಸರ್ಕಾರದ ನಿಲುವು ಅಚಲವಾಗಿದ್ದರಿಂದ ಶೇಕ್‌ರವರು ರಾಜೀನಾಮೆಯನ್ನು ಸಲ್ಲಿಸಿ ಬಹಿರಂಗವಾಗಿ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿದರು ಇಲ್ಲೂ ಸಹ ಸರ್ಕಾರ ತನ್ನ ಕ್ರೋಧವನ್ನು ಪ್ರದರ್ಶಿಸಿತು ಶೇಕ್ ಅಬ್ದುಲ್ಲಾರವರನ್ನು ಸೇವೆಯಿಂದ ವಜಾಮಾಡಲಾಗಿದೆಯೆಂಬ ಆದೇಶವನ್ನು ಅದು ಹೊರಡಿಸಿತು ಏನೇ ಆದರೂ ಅವರು ಸರ್ಕಾರಿ ಸೇವೆಯ ಸಂಕೋಲೆಗಳಿಂದ ಮುಕ್ತರಾದರು ಬಹಳ ಬೇಗ ಕಾಶ್ಮೀರ ಕೋಮುಹಿಂಸೆಗೆ ತುತ್ತಾಯಿತು ರಾಜಕೀಯ ಬೆಳವಣಿಗೆಗಳು ಅನೇಕ ರೂಪ ಮತ್ತು ಗಾತ್ರಗಳನ್ನು ತಳೆದವು ಶೇಕ್ ಸಾಹೇಬರನ್ನು ಅನೇಕ ಸಲ ಬಂಧಿಸಿ ಸೆರೆವಾಸದ ಶಿಕ್ಷೆ ವಿಧಿಸಲಾಗಿತ್ತು ನಿರಂಕುಶಾಧಿಕಾರದಿಂದ ಕಾಶ್ಮೀರವನ್ನು ವಿಮೋಚನೆಗೊಳಿಸಲು ಅವರು ಅನೇಕ ಜನಪ್ರಿಯ ಚಳುವಳಿಗಳನ್ನು ಸತತವಾಗಿ ನಡೆಸಿದರು ಅಬ್ದುಲ್ಲಾರವರು ಕಾಶ್ಮೀರಿ ಮುಸಲ್ಮಾನರ ಅನಿವಾರ್ಯಧಿತ ನಾಯಕ ಮತ್ತು ಉದ್ಧಾರಕರಾಗಿದ್ದರು.

1946ರಲ್ಲಿ ಡೋಗ್ರ ಮಹಾರಾಜರನ್ನು ಪದಚ್ಯುತಿಗೊಳಿಸಲು ಕಾಶ್ಮೀರ ಬಿಟ್ಟು ತೊಲಗಿ ಎಂಬ ಚಳುವಳಿಯನ್ನು ಪ್ರಾರಂಭಿಸಿದರು ಆದರಿಂದ ಇವರನ್ನು ದಸ್ತಗಿರಿ ಮಾಡಿ ಜೈಲಿಗೆ ಕಳುಹಿಸಲಾಯಿತು. ಈ ಮಧ್ಯೆ ಭಾರತ ಸ್ವಾತಂತ್ರ್ಯ ಪಡೆಯಿತು 1947ರಲ್ಲಿ ಗಡಿಯಾಚೆಯಿಂದ ನಡೆದ ದಾಳಿಯ ಹಿನ್ನೆಲೆಯಲ್ಲಿ ಶೇಕ್‌ರವರನ್ನು ಜಮ್ಮು ಮತ್ತು ಕಾಶ್ಮೀರದ ಪ್ರಧಾನಮಂತ್ರಿಯನ್ನಾಗಿ ನೇಮಿಸಿದಾಗ ಬಹಳಷ್ಟು ತೃಪ್ತಿ ಮತ್ತು ಸಂತೋಷ ಉಂಟಾಗಿತ್ತು. ನಂತರ 1953ರ ಆಗಸ್ಟ್‌ನಲ್ಲಿ ಆ ರಾಜ್ಯದಲ್ಲಿ ಉಂಟಾದ ವಿಚಿತ್ರ ರಾಜಕೀಯ ಏರಿಳಿತಗಳ ಪರಿಣಾಮವಾಗಿ ಅಬ್ದುಲ್ಲರನ್ನು ಅಧಿಕಾರದಿಂದ ತೆಗೆದು 1964ರವರೆಗೆ ಊಟಿಯಲ್ಲಿ

ಗೃಹಬಂಧನದಲ್ಲಿಡಲಾಯಿತು. ಅಬ್ದುಲ್ಲಾ ಕಾಶ್ಮೀರಿಯನ್ನರನ್ನು ತಮ್ಮ ಹೃದಯದಾಳದಿಂದ ಪ್ರೀತಿಸಿದರು ಇದಕ್ಕೆ ಪ್ರತಿಯಾಗಿ ಕಾಶ್ಮೀರಿಗಳೂ ಕೂಡ ಅವರ ಬಗ್ಗೆ ಅಪಾರವಾಗಿ ಗೌರವ ಮತ್ತು ಪ್ರೀತಿಯನ್ನು ಸತತವಾಗಿ ಹಾಗೂ ಪ್ರಾಮಾಣಿಕವಾಗಿ ತೋರಿದರು. ಶೇಕ್‌ರವರು ಬಾಲ್ಯದಿಂದಲೂ ಸಾಹಿತ್ಯದ ಕೌಶಲ್ಯವನ್ನು ಹೊಂದಿದ್ದರು ಅಬ್ದುಲ್ಲಾ ಅಸಾಧಾರಣ ಪ್ರತಿಭೆಯ ವಾಗ್ಮಿಯಾಗಿದ್ದರು ಹಾಗೂ ಸುಂದರವಾದ ಉರ್ದು ಭಾಷೆಯಲ್ಲಿ ಬರೆಯಬಲ್ಲವರಾಗಿದ್ದರು ಉತ್ತಮ ಸಂಭಾಷಣೆಗೆ ಹೆಸರಾಗಿದ್ದ ಅವರು ಪವಿತ್ರ ಖುರಾನ್ ಗ್ರಂಥದ ಪದಗಳನ್ನು ಪ್ರವಾದಿ ಮಹಮ್ಮದ್‌ರ ಮಾತುಗಳನ್ನು ಹಾಗೂ ಖ್ಯಾತ ಕವಿಗಳ ಗೀತೆಗಳನ್ನು ಸೂಕ್ತವಾಗಿ ಉಲ್ಲೇಖಿಸುತ್ತಿದ್ದರು. ಶೇರ್-ಹಿ-ಕಾಶ್ಮೀರ್ ಅಥವಾ ಕಾಶ್ಮೀರದ ಕೇಸರಿಯೆಂದು ಅವರಿಗೆ ನೀಡಿದ ಜನಪ್ರಿಯ ಬಿರುದು ಬಹಳ ನ್ಯಾಯೋಚಿತವಾಗಿದೆ. ಅವರು ನಿಜವಾಗಿಯೂ ಸಿಂಹ ಹೃದಯಿಯಾಗಿದ್ದರು ಹಾಗೂ ತಮ್ಮ ಜೀವಿತ ಕಾಲದಲ್ಲಿ ಒಬ್ಬ ಕಥಾನಾಯಕ ವ್ಯಕ್ತಿಯ ಖ್ಯಾತಿ ಪಡೆದಿದ್ದರು.

ಜಾತ್ಯತೀತ ಮತ್ತುಪ್ರಜಾಪ್ರಭುತ್ವದ ಪ್ರತಿನಿಧಿಯಾಗಿ ಶೇಕ್ ಮಹಮ್ಮದ್ ಅಬ್ದುಲ್ಲಾ

ನಾರಾಯಣ್ ಚಾಬೆ *

ಶೇಕ್ ಅಬ್ದುಲ್ಲಾರ ಜೀವನ, ಅವರ ಸ್ವಭಾವ ಮತ್ತು ಅವರ ಕ್ರಿಯಾಶೀಲ ವ್ಯಕ್ತಿತ್ವವು ಪ್ರಸ್ತುತ ಸಂದರ್ಭದಲ್ಲಿ ಭಾರತ ಬೆಳವಣಿಗೆಯ ಬಗ್ಗೆ ಚಿಂತಿಸುವ ನಮ್ಮ ಜನರಿಗೆ ವಿಶೇಷವಾದ ಅರ್ಥಕೊಡುತ್ತದೆ. ಅವರದು ವಿಶಿಷ್ಟವಾದ ವ್ಯಕ್ತಿತ್ವ. ಹಿಂದೂ ಊಳಿಗಮಾನ್ಯ ರಾಜಪ್ರಭುತ್ವವನ್ನು ಹೊಂದಿದ್ದ ಕಾಶ್ಮೀರದಂತಹ ರಾಜ್ಯದಲ್ಲಿ ಅಧಿಕಾರಿಗಳು ನಾಡಿನಾದ್ಯಂತ ತಮ್ಮ ಅಧಿಕಾರ, ದೌರ್ಜನ್ಯಗಳನ್ನು ಚಲಾಯಿಸುತ್ತಿರುವಾಗ ಒಂದು ಸಾಮಾನ್ಯ ಮುಸ್ಲಿಂ ಕುಟುಂಬದಿಂದ ಬಂದಂತಹ ಶೇಕ್ ಅಬ್ದುಲ್ಲಾರವರು ತಮ್ಮ ಪರಿಶ್ರಮ ಯುದ್ಧ ಹೋರಾಟಗಳಿಂದ ಉನ್ನತ ವ್ಯಕ್ತಿತ್ವವನ್ನು ರೂಪಿಸಿಕೊಂಡು ರಾಷ್ಟ್ರಮಟ್ಟದ ಜನಪ್ರಿಯ ವ್ಯಕ್ತಿಯಾದದ್ದು ಸುಲಭದ ಮಾತೇನಲ್ಲ. ಕಾಶ್ಮೀರ ಜನರ ನಾಯಕರಾಗಿ ತಮ್ಮನ್ನು ಜಾತ್ಯಾತೀತ ಸಾಮಾಜಿಕ ಮತ್ತು ಪ್ರಜಾಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಶೇಕ್‌ಸಾಹೇಬರು ದೌರ್ಜನ್ಯದಿಂದ ಕೂಡಿದ್ದ ನಿರಂಕುಶ ಪ್ರಜಾಪ್ರಭುತ್ವ ವಿರುದ್ಧ ತಿರುಗು ಬಿದ್ದರು. ಬ್ರಿಟಿಷರ ದೌರ್ಜನ್ಯವನ್ನು ಖಂಡಿಸಿ ರಾಷ್ಟ್ರೀಯ ಚಳುವಳಿಯಲ್ಲಿ ಧುಮುಕಿದರು. ಪಂಡಿತ್ ನೆಹರೂರವರ ವೈಯಕ್ತಿಕ ಪ್ರೋತ್ಸಾಹದಿಂದ ತಮ್ಮನ್ನು ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವದ ಪರಹೋರಾಟಗಳಲ್ಲಿ ತೊಡಗಿಸಿಕೊಂಡರು. ಅಲ್ಲದೆ ಮಹಾತ್ಮಗಾಂಧೀಜಿಯವರ ಹಿಂದೂ ಮುಸ್ಲಿಮರ ಏಕತೆಯ ಹೋರಾಟದಿಂದ ಪ್ರಭಾವಿತರಾದರು ಇವೆಲ್ಲವೂ ಮುಂದೆ ಅವರನ್ನು ಜನಪ್ರಿಯತೆಯ ತುಟ್ಟತುದಿಗೆ ಕರೆದೊಯ್ದವು.

ಇಡೀ ದೇಶವೇ ಬಂಗಾಳದಿಂದ ಪಂಜಾಬಿನವರೆಗೆ ಕೋಮುವಾದ ದಳ್ಳುರಿಯಲ್ಲಿ ಬೇಯ್ಯುತ್ತಿದ್ದಾಗ ಶೇಕ್ ಅಬ್ದುಲ್ಲಾರ ನಾಯಕತ್ವದಲ್ಲಿ ಕಾಶ್ಮೀರದಲ್ಲಿ ಶಾಂತಿ ವಾತಾವರಣ ನೆಲೆಸಿತು. ಅಲ್ಲದೆ ಕಾಶ್ಮೀರದ ಎಲ್ಲ ಜನರೂ ಮಹಾರಾಜನ ವಿರುದ್ಧ ಒಗಟ್ಟಿನಿಂದ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ದೇಶವು ಧಾರ್ಮಿಕ ಕಾರಣದಿಂದ ವಿಭಜನೆಯಾದಾಗ ಬಹುಸಂಖ್ಯಾತ ಮುಸ್ಲಿಮರೆಲ್ಲರೂ (ಕಾಶ್ಮೀರಿ) ಭಾರತದೊಂದಿಗೆ ವಿಲೀನವಾಗಲು ನಿರ್ಧರಿಸಿದ್ದರು. ಪಾಕಿಸ್ತಾನವು ಕಾಶ್ಮೀರಕ್ಕೆ ಮುತ್ತುಗೆ ಹಾಕಿ ಶ್ರೀನಗರವನ್ನು ವಶಪಡಿಸಿಕೊಂಡಾಗ ಶೇಕ್ ಅಬ್ದುಲ್ಲಾರ ನಾಯಕತ್ವದಲ್ಲಿ ಮುಸ್ಲಿಂ ಜನರಲ್ಲಿ ಒಂದುಗೂಡಿ 'ರಾಷ್ಟ್ರೀಯ ವೇದಿಕೆ' ಯ ಸದಸ್ಯರೆಲ್ಲರೂ ಪಾಕಿಸ್ತಾನದ ವಿರುದ್ಧ ಕಾಶ್ಮೀರದ ನೆರವಿಗೆ ಭಾರತೀಯ ಸೇನೆ ಬರುವವರೆಗೂ ವೀರಾವೇಶದಿಂದ ಹೋರಾಡಿದರು. ಇವರ ರಾಷ್ಟ್ರೀಯ ಸಭೆ ಅನೇಕ ಮಂದಿ ಪಾಕಿಸ್ತಾನಿ ಯೋಧರನ್ನು ಸೆರೆಹಿಡಿದು ಕೊಡುವಲ್ಲಿ ಯಶಸ್ವಿಯಾಯಿತು.

ವಿಪರ್ಯಾಸದ ಸಂಗತಿಯೇನೆಂದರೆ ಇಂತಹ ಖ್ಯಾತ ರಾಷ್ಟ್ರ ನಾಯಕನನ್ನು ಕಾಶ್ಮೀರದ ಕೇಸರಿಯನ್ನು ಸೆರೆಯಲ್ಲಿಡಬೇಕಾಯಿತು. ಕಾರಣ ಇವರ ಚಟುವಟಿಕೆಗಳು ರಾಜ್ಯದ ಹಿತಕ್ಕೆ ಮಾರಕವಾಗಿವೆಯೆಂದು ಸರ್ಕಾರವು ಭಾವಿಸಿತು. ಆದರೆ ಶೇಕ್‌ರವರಿಗಿದ್ದ ಜಾತ್ಯಾತೀತ ಹಾಗೂ ಪ್ರಜಾಪ್ರಭುತ್ವದಲ್ಲಿನ ನಂಬಿಕೆ ಅವರನ್ನು ಧೃತಿಗೆಡಿಸಲಿಲ್ಲ ಅವರು ಬದಲಾಗಲೂ ಇಲ್ಲ. ಕಾಶ್ಮೀರದಲ್ಲಿಂದು ಅನೇಕ ಸಮಸ್ಯೆಗಳು ತಲೆ ಎತ್ತಿವೆ. ಅಸ್ಥಿರತೆ ಉಂಟಾಗಿದೆ ಭಾವೈಕ್ಯತೆಗೆ ದಕ್ಕೆಯಾಗಿದೆ ಇಂತಹ ಕ್ಲಿಷ್ಟಕರ ಸಮಯದಲ್ಲಿ ಶೇಕ್ ಸಾಹೇಬರ ಬದುಕು ಮತ್ತು ಬೋಧನೆಗಳು ಮತ್ತೆ ಬೆಳಕು ಚೆಲ್ಲ ಬೇಕಾಗಿವೆ. ಜಾತ್ಯಾತೀತ ಕಾಶ್ಮೀರವಿಂದು ಕೋಮುವಾದ ಅಪಖ್ಯಾತಿಗೆ ಒಳಗಾಗಿದೆ. ಕಾಶ್ಮೀರದ ಯುವಜನತೆ ಪಾಕಿಸ್ತಾನದ ಕೆಟ್ಟ ಬೋಧನೆಗಳಿಗೆ, ಆಮಿಷಗಳಿಗೆ ಒಳಗಾಗಿದ್ದರಲ್ಲಾ ಎಂಬ ನೋವು ಮತ್ತು ನಾಚಿಕೆ ರಾಷ್ಟ್ರವನ್ನು ಬಾಧಿಸುತ್ತಿದೆ. ಇದರ ವಿರುದ್ಧವೇ ಶೇಕ್ ಸಾಹೇಬ್, ಗಾಂಧೀಜಿ, ನೆಹರೂ ಇವರೆಲ್ಲರೂ ನಮ್ಮ ಪೂರ್ವಜರು ಹೋರಾಟ ನಡೆಸಿದ್ದು. ಕಾಶ್ಮೀರದ ಯುವಕರಿಗೆ ಪಾಕಿಸ್ತಾನದ ವಿರುದ್ಧ ಮತ್ತೊಮ್ಮೆ ಮನವರಿಕೆ ಮಾಡಿಕೊಡಬೇಕಾಗಿದೆ. ಶೇಕ್‌ರವರು ಬದುಕು ಬೋಧನೆಗಳು ಈ ನಿಟ್ಟಿನಲ್ಲಿ ಸ್ಫೂರ್ತಿ ನೀಡಬೇಕು. ದೇಶದ ಭದ್ರತೆಗೆ ಬಂದಿರುವ ಅಪಾಯಗಳನ್ನು ಯುವಕರಿಗೆ ತಿಳಿಸಿಕೊಡಬೇಕಾಗಿದೆ. ಎಚ್ಚರಿಸಬೇಕಾಗಿದೆ ಕಾಶ್ಮೀರ ನಮ್ಮದು ನಮ್ಮ ಭಾರತದ ಅವಿಭಾಜ್ಯ ಅಂಗವದು, ಕಾಶ್ಮೀರದಲ್ಲಿ ಅನೇಕ ಸಮಸ್ಯೆಗಳಿವೆ ನಿಜ ಅದಕ್ಕೆ ವಿಭಜನೆ ಪರಿಹಾರವಲ್ಲ, ದೇಶದ ಬೇರೆ ಬೇರೆ ಪ್ರಾಂತ್ಯಗಳಲ್ಲೂ ಅವುಗಳದೆ ಆದ ಸಮಸ್ಯೆಗಳಿವೆ. ದೇಶವನ್ನು ಸರ್ವವಿಧದಲ್ಲೂ ಶತ್ರುಗಳಿಂದ ರಕ್ಷಿಸುವ ಹೊಣೆ ಪ್ರತಿಯೊಬ್ಬ ಪೌರನ ಆದ್ಯ ಕರ್ತವ್ಯ. ಈ ನಿಟ್ಟಿನಲ್ಲಿ ಶೇಕ್ ಸಾಹೇಬರ ಸಾಧನೆಗಳು, ಬೋಧನೆಗಳು ನಮಗಿಂದು ಪ್ರಸ್ತುತ ಮತ್ತು ಅತ್ಯಗತ್ಯ. ಅವರ ಮಾರ್ಗದರ್ಶನವು ನಮಗೆ ಸ್ನೇಹಹಸ್ತವಾಗಬೇಕು ಮತ್ತು ನಮ್ಮನ್ನು ಮುನ್ನಡೆಸುವ ಹೊಸಬೆಳಕಾಗಬೇಕು.

* ಮಾಜಿ ಸಂಸತ್ ಸದಸ್ಯರು

ಮುದ್ರಕರು : ನಿರ್ದೇಶಕರು,ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ, ಬೆಂಗಳೂರು-1. ಕಾ.ಸೂ.